ನಮ್ಮ ಎಜುಕೇಷನ್ ಸೆಕ್ರೆಟರಿಯವರಿಗೆ ಗೊತ್ತಿದೆ ಮಾನ್ಯ ಮಂತ್ರಿಗಳು ಅವರಿಂದ ಎಲ್ಲ ವಿಚಾರಗಳನ್ನೂ ತಿಳಿದುಕೊಂಡು ಆದಷ್ಟು ಬೇಗ ಇದನ್ನು ಸರಕಾರ ವಶಪಡಿಸಿಕೊಂಡು ತಕ್ಕ ಬಂದೋಬಸ್ತು ಮಾಡುವ ಕ್ರಮವನ್ನು ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ.

ಇನ್ನು ಪ್ರೈಮರಿ ಸ್ಕೂಲುಗಳ ಬಗ್ಗೆ ಒಂದು ಮಾತು ಹೇಳುತ್ತೇನೆ ಇಂದು ನಡೆಯುತ್ತಿರುವ ಪ್ರೈಮರಿ ಸ್ಕೂಲುಗಳು ಇದೇ ರೀತಿ ನಡೆಯುತ್ತ ಹೋದರೆ ಇವರಿಂದ ನಮಗೆ ಹಾಗೂ ನಮ್ಮ ಮಕ್ಕಳಿಗೆ ಏನೂ ಉಪಯೋಗವಾಗುವುದಿಲ್ಲ. ಮೊನ್ನೆ ನಾಯಕರಾದ ಶ್ರೀ ಲೋಹಿಯಾರವರು ಹೇಳಿದ ಹಾಗೆ ಅವರು ಯಾವ ಪಾರ್ಟಿಯವರೇ ಆಗಿರಲಿ, ಇದು ಎಲ್ಲರಿಗೂ ಸೇರಿರುವಂತಹ ಸಮಸ್ಯೆ ಎಂದು ಹೇಳಿ ತಕ್ಕ ಪರಿಹಾರವನ್ನು ಕಂಡು ಹಿಡಿಯಬೇಕೆಂದು ಸಲಹೆ ಮಾಡಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಜಿ. ಚನ್ನಪ್ಪ. (ಮಾಗಡಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ಚರ್ಚೆ ನಡೆಯುತ್ತಿರತಕ್ಕ ವಿದ್ಯಾಭ್ಯಾಸದ ಇಲಾಖೆಯ ಬೇಡಿಕೆಗಳ ಮೇಲೆ ನಾನು ಕೆಲವು ಮಾತುಗಳನ್ನಾಡಲು ಇಷ್ಟಪಡುತ್ತೇನೆ ಈಗಾಗಲೇ ಅನೇಕ ಜನ ನಮ್ಮ ಸ್ನೇಹಿತರು ವಿದ್ಯಾಭ್ಯಾಸದ ಪದ್ಧತಿಯಲ್ಲಿರತಕ್ಕ ಲೋಪದೋಷಗಳ ಬಗ್ಗೆ ಮಾತನಾಡಿದ್ದಾರೆ. ನಾನು ಸಹ ನನಗೆ ತಿಳಿದ ಒಂದೆರಡು ಸಲಹೆಗಳನ್ನು ಸರಕಾರಕ್ಕೆ ಕೊಡಲು ಇಷ್ಟಪಡುತ್ತೇನೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನಮ್ಮ ವಿದ್ಯಾಭ್ಯಾಸ ಯಾವ ವಿಧವಾಗಿ ಹಾಗೂ ಯಾವ ರೀತಿಯಾಗಿ ಕೊಡುತ್ತಿದ್ದರೋ ಅದೇ ರೀತಿಯಾಗಿ ಇವೊತ್ತು ಕೂಡ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಬರುತ್ತಿದ್ದೇವೆ. ಇದರಿಂದಾಗಿ ನಮ್ಮ ಜನತೆಗೆ ಯಾವ ವಿಧವಾದ ಪ್ರಯೋಜನವೂ ಆಗುವುದಿಲ್ಲ. ನಮಗೆ ಗೊತ್ತಿರುವ ಹಾಗೆ ವಿದ್ಯಾರ್ಥಿಗಳು ಅವರ ಪದವಿಗಳನ್ನು ಪಡೆದುಕೊಂಡು ವಿದ್ಯಾಭ್ಯಾಸ ಮುಗಿದ ಮೇಲೆ ತಮ್ಮ ಜೀವನವನ್ನು ಮುಂದೆ ಯಾವ ರೀತಿ ಅಳವಡಿಸಿಕೊಳ್ಳಬೇಕು ಎನ್ನುವುದರಲ್ಲಿ ಅವರಿಗೆ ಸರಿಯಾದ ಮಾರ್ಗದರ್ಶನವಿಲ್ಲ. ಇದಕ್ಕಾಗಿ ನಾವು ವಿದ್ಯಾಭ್ಯಾಸದ ಪದ್ಧತಿಯಲ್ಲಿ ಸ್ವಲ್ಪ ಮಾರ್ಪಾಡು ಮಾಡಿ ಪದವಿಗಳನ್ನು ಪಡೆದ ನಂತರ ಮುಂದೆ ಅವರ ಜೀವನದಲ್ಲಿ ಯಾವ ರೀತಿ ಜೀವನವನ್ನು ನಡೆಸಬಹುದು ಅಂತಹ ವಿದ್ಯಾಭ್ಯಾಸವನ್ನು ನಾವು ಮಾಡಿಕೊಡಬೇಕು. ಇಂದು ಅಂತಹ ಪದ್ಧತಿ ಇಲ್ಲ. ಮಾನ್ಯ ಸದಸ್ಯರಾದ ಶ್ರೀ ದೇವೇಗೌಡರು ಹೇಳಿದಂತೆ ಸುಮಾರು ೧೫ ಲಕ್ಷ ಜನ ಪದವೀಧರರು ಇಂದು ನಮ್ಮ ದೇಶದಲ್ಲಿದ್ದಾರೆ. ಕೇವಲ ಪದವಿಯನ್ನು ಪಡೆಯುವುದರಿಂದ ಏನನ್ನೂ ಸಾಧಿಸಿದಂತಾಗುವುದಿಲ್ಲ ವಿದ್ಯಾರ್ಥಿಗಳಿಗೆ ಅವರ ತಂದೆ ತಾಯಿಗಳು ಕಷ್ಟಪಟ್ಟು ಹಣ ಕೊಟ್ಟು ಪದವಿಗಳನ್ನು ಪಡೆಯಲು ಸಹಾಯ ಮಾಡುತ್ತಿದ್ದಾರೆ. ಆದರೆ ಇಂದು ಪದವಿಗಳನ್ನು ಪಡೆದ ನಂತರ ಮುಂದೆ ಯಾವ ರೀತಿ ಅವರು ನಡೆಸಬೇಕು ಎನ್ನುವುದು ತಿಳಿಯದೇ ಇಂದು ಈ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತ ಬಂದಿದೆ. ಇದಕ್ಕೆ ಪದವಿ ವಿಭಾಗದಲ್ಲಿ ಶಿಕ್ಷಣ ಕೊಡುವಾಗಲೇ ಆದರ ಜೊತೆಯಲ್ಲಿ ಯಾವುದಾದರೂ ತಾಂತ್ರಿಕ ಶಿಕ್ಷಣವನ್ನು ಕೊಟ್ಟರೆ ಇದರಿಂದ ಪದವಿಗಳನ್ನು ಪಡೆದ ಮೇಲೆ ಅಂತಹ ಮಕ್ಕಳು ತಮ್ಮ ಜೀವನವನ್ನು ಮುಂದೆ ತಮ್ಮ ಜೀವನವನ್ನು ಯಾರ ಮೇಲೂ ಅವಲಂಬಿಸದೆ ತಾವೇ ಮಾಡಿಕೊಳ್ಳಲು ಅವರಿಗೆ ಅನುಕೂಲವಾಗುತ್ತದೆ. ಇಂದು ಪದವಿಗಳನ್ನು ಪಡೆದವರು ಉದ್ಯೋಗಗಳು ಸಿಗದೆ ತೊಂದರೆ ಪಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರಲ್ಲಿ ಅವಿದ್ಯಾವಂತರು ಕೆಲಸವಿಲ್ಲದೆ ಇದ್ದರೆ ಅವರನ್ನು ಮನೆಯಲ್ಲಿ ಒಂದು ರೀತಿಯಾದ ಹದ್ದುಬಸ್ತಿನಲ್ಲಿಡಬಹುದು ಆದರೆ ಇಂದು ಪದವಿಗಳನ್ನು ಪಡೆದ ವಿದ್ಯಾವಂತರನ್ನು ಮನೆಗಳಲ್ಲಿದ್ದರೆ ಅವರನ್ನು ಹದ್ದುಬಸ್ತಿನಲ್ಲಿಡುವುದು ಕಷ್ಟ. ವಿದ್ಯಾವಂತರಿಗೂ ಅವಿದ್ಯಾವಂತರಿಗೂ ಇಂತಹ ಒಂದು ತಾರತಮ್ಯವಿದೆ. ಪದವಿಗಳನ್ನು ಪಡೆದ ಎಲ್ಲರಿಗೂ ಉದ್ಯೋಗಗಳನ್ನು ಕೊಡುವುದಕ್ಕಾಗುವುದಿಲ್ಲ. ಇದಕ್ಕಾಗಿ ಇಂದು ಪದವಿ ಶಿಕ್ಷಣಕ್ಕೆ ಬರುವಂತಹವರಿಗೆ ತಾಂತ್ರಿಕ ಶಿಕ್ಷಣದಲ್ಲಿ ಡಿಪ್ಲೊಮಾ ಕೋರ್ಸುಗಳು ಎಂದು ಮಾಡಿ ಇವರಿಗೆ ಶಿಕ್ಷಣ ಕೊಟ್ಟರೆ ಮುಂದೆ ಇಂತಹವರಿಗೆ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಸಹಾಯವಾಗುತ್ತದೆ ಇಂತಹವರಿಗಾಗಿ ಸ್ವಲ್ಪ ಹಣ ಸರಕಾರಕ್ಕೆ ಖರ್ಚಾದರೂ ಚಿಂತೆ ಇಲ್ಲ. ಇಂತಹ ಒಂದು ಪದ್ಧತಿಯನ್ನು ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ. ವಿದ್ಯಾಭ್ಯಾಸ ಮುಗಿದ ಕೂಡಲೇ ವಿದ್ಯಾರ್ಥಿಗಳು ಅವರ ಜೀವನವನ್ನು ಯಾವ ರೀತಿ ಮಾರ್ಪಾಡು ಮಾಡಬೇಕು ಎನ್ನುವಂತಹ ಸಮಸ್ಯೆ ಅವರ ಮುಂದೆ ಇಲ್ಲವಾದದು. ತಾಂತ್ರಿಕ ವಿದ್ಯಾಕ್ಷೇತ್ರದಲ್ಲಿ ಯಾವ ರೀತಿ ಇದನ್ನು ಮಾಡಬಹುದು ಎನ್ನುವುದನ್ನು ವಿಚಾರ ಮಾಡುವುದು ಅಗತ್ಯ. ಇಂತಹ ಒಂದು ವಿದ್ಯಾಭ್ಯಾಸ ಪದ್ಧತಿಯನ್ನು ಕಂಡುಹಿಡಿಯಬೇಕಾಗಿದೆ. ಈಗಿರತಕ್ಕ ಗ್ರಾಜುಯೇಟುಗಳಿಗೆ ಕೆಲಸಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಂದು ನಮ್ಮ ರಾಜ್ಯದಲ್ಲಿ ಮಾಸ್ಟರ್ ಡಿಗ್ರಿ ಪಡೆದಿರುವಂತಹವರು ಬಹಳ ಜನಗಳಿದ್ದಾರೆ, ಇವರುಗಳೆಲ್ಲಾ ಕೆಲಸಗಳೇ ಸಿಗುತ್ತಿಲ್ಲ. ಇಂದು ಎಂ.ಎ. ಪಡೆದಿರುವವರು ಬಸ್ ಕಂಡಕ್ಟರುಗಳ ಕೆಲಸಕ್ಕಾಗಿ ಅರ್ಜಿ ಕೊಡುತ್ತಿದ್ದಾರೆ. ಯಾವ ಕೆಲಸಗಳನ್ನು ಕೊಟ್ಟರೂ ಮಾಡುತ್ತೇವೆಂದು ಬರುತ್ತಿದ್ದಾರೆ. ಹಾಗಿದ್ದರೂ ಅವರಿಗೆ ಕೆಲಸಗಳೇ ಸಿಗುತ್ತಿಲ್ಲ, ಇದರಿಂದ ಇವರುಗಳು

ಜೀವನ ಮಾಡುವುದೇ ಕಷ್ಟವಾಗಿದೆ. ಇಂದು ನಾವು ಘಟಿಕೋತ್ಸವಗಳು ನಡೆಯುವ ಸಂದರ್ಭಗಳಲ್ಲಿ ಯಾವ ರೀತಿ ಕಿರುಚಿಕೊಂಡು ನಮಗೆ ಹುಡ್ ಬೇಡ ಗೌನುಗಳೂ ಬೇಡ, ನಮಗೆ ಕೆಲಸಗಳನ್ನು ಕೊಡಿ ಎಂದು ಕೂಗುತ್ತಿರುವುದನ್ನು ತಾವು ಕೇಳಿರಬಹುದು.

ಇಂತಹ ಕೂಗಾಟಗಳನ್ನು ಅಲ್ಲಲ್ಲಿ ನಡೆಯುತ್ತಿರುವ ಘಟಿಕೋತ್ಸವಗಳಲ್ಲಿ ನಾವು ನಡೆಯುತ್ತಿರುವುದನ್ನು ಕೇಳಿದ್ದೇವೆ. ಅವರಿಗೆ ಪದವಿಗಳು ಬೇಕಾಗಿಲ್ಲ ಜೀವನ ಮಾಡಲಿಕ್ಕೆ ಅವರಿಗೆ ಕೆಲಸಗಳು ಬೇಕು. ಆದರೆ ಹೊರದೇಶಗಳಲ್ಲಿ ಇಂತಹ ಪದ್ಧತಿ ಇಲ್ಲ. ಅಲ್ಲಿ ಮಕ್ಕಳು ಪದವಿಗಳನ್ನು ಪಡೆಯಲು ಹೋಗುವುದೇ ಇಲ್ಲ. ಎಸ್ ಎಸ್ ಎಲ್ ಸಿ ಆದ ಕೂಡಲೇ ಅವರುಗಳು ಬೇರೆ ಬೇರೆ ಉದ್ಯೋಗಗಳಲ್ಲಿ ತರಬೇತಿ ಪಡೆಯಲು ಹೋಗುತ್ತಾರೆ. ಇಂತಹ ವಿದ್ಯೆಗಳನ್ನು ಅವರು ಕಲಿಯುತ್ತಾರೆಂದು ಕೇಳಿದ್ದೇವೆ. ಇಂತಹಒಂದು ಪದ್ಧತಿಯನ್ನು ನಮ್ಮ ದೇಶದಲ್ಲೂ ಜಾರಿಗೆ ತರಬೇಕು. ಆದಷ್ಟು ಹುಡುಗರು ಪದವಿಗಳನ್ನು ತೆಗೆದುಕೊಳ್ಳುವುದನ್ನು ಕಡಿಮೆ ಮಾಡಬೇಕು. ಇತರ ತಾಂತ್ರಿಕ ಶಿಕ್ಷಣದಲ್ಲಿ ಶಿಕ್ಷಣ ಕೊಡುವುದನ್ನು ಜಾಸ್ತಿ ಮಾಡಬೇಕು. ಇದರಿಂದ ನಿರುದ್ಯೋಗದ ಸಮಸ್ಯೆಯನ್ನು ಪರಿಹಾರಮಾಡಿದಂತಾಗುತ್ತದೆ. ಕಂಪಲ್ಸರಿ ಎಜುಕೇಷನ್ ಎಂದು ಕಡ್ಡಾಯ ವಿದ್ಯಾಭ್ಯಾಸ ಪದ್ಧತಿ ಜಾರಿಗೆ ತಂದಿದ್ದಾರೆ. ಆದರೆ ಇಂತಹ ಶಾಲೆಗಳಿಗೆ ಕಟ್ಟಡಗಳನ್ನು ಕಟ್ಟುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. ಸರಕಾರ ಒಂದೆರಡು ಸಾವಿರ ಕೊಟ್ಟು ಉಳಿದ ಹಣವನ್ನು ಜನಗಳೇ ಕೊಡಬೇಕೆಂದು ಹೇಳುವುದಕ್ಕಿಂತ ಸರಕಾರವೇ ಇಂತಹ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಿ ಎಂದು ಹೇಳುತ್ತಿದ್ದಾರೆ. ಜನತೆಯ ಪರವಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ರೈತರಲ್ಲಿ ಹಣ ಇಲ್ಲವೆನ್ನುವುದರಿಂದ ಅವರು ಒಂದು ಕಾಸು ಕೊಡುವುದಕ್ಕೂ ಸಹ ಹಿಂದು ಮುಂದು ನೋಡುತ್ತಿದ್ದಾರೆ. ಈ ಕಾರಣದಿಂದ ಸಣ್ಣ ಮಕ್ಕಳು ಕುಳಿತುಕೊಳ್ಳುವುದಕ್ಕೆ ಸರಿಯಾದ ಕೊಠಡಿಗಳನ್ನು ಇಲ್ಲಿಯವರೆಗೆ ಕಟ್ಟಿಸಿಕೊಡದಿರುವುದು ಶೋಚನೀಯವಾದ ವಿಚಾರ. ಇವುಗಳನ್ನು ಕಟ್ಟಿಸಲು ತನಗೆ ಶಕ್ತಿ ಇಲ್ಲ ಎಂದು ಸರ್ಕಾರದವರು ಹೇಳದೆ ಮತ್ತು ಸ್ಥಳೀಯ ಜನರ ವಂತಿಗೆಯನ್ನು ಕೇಳದೆ, ಸರ್ಕಾರದವರೇ ಈ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ,

ಇನ್ನು ಅನೇಕ ಖಾಸಗೀಯವರು ನರ್ಸರಿ, ಪ್ರೈಮರಿ, ಸೆಕೆಂಡರಿ ಶಾಲೆಗಳನ್ನು ತೆರೆದು ಆ ಮೂಲಕ ಸುಳ್ಳು ಲೆಕ್ಕಗಳನ್ನು ಸರ್ಕಾರಕ್ಕೆ ಕೊಡುವದರ ಮೂಲಕ ಹಣವನ್ನು ಪಡೆಯುತ್ತಿದ್ದಾರೆ. ಇಂತಹವರ ಬಗ್ಗೆ ಸರ್ಕಾರದವರು ಉಗ್ರವಾದ ಕ್ರಮ ತೆಗೆದುಕೊಂಡು ಕಾನೂನು ರೀತ್ಯಾ ಶಿಕ್ಷೆ ವಿಧಿಸಬೇಕು ಮತ್ತು ಈ ರೀತಿ ಕಳ್ಳ ಶಾಲೆಗಳನ್ನು ನಡೆಸದಂತೆ ನೋಡಿಕೊಳ್ಳಬೇಕು. ಈ ಖಾಸಗೀ ಶಾಲೆಗಳ ಬಗ್ಗೆ ನಾವು ಈ ಹಿಂದೆ ಅನೇಕ ಸಲ ಪ್ರಸ್ತಾಪ ಮಾಡಿದರೂ ಸಹ ಸರ್ಕಾರದವರು ಅವರಿಗೆ ಭೀತಿ ಹುಟ್ಟಿಸುವಂತಹ ಯಾವ ಕ್ರಮವನ್ನು ತೆಗೆದುಕೊಳ್ಳದೆ ಸುಮ್ಮನೆ ಕೈ ಕಟ್ಟಿ ಕುಳಿತುಕೊಂಡಿದ್ದರಿಂದ, ಇಂದು ಆ ಖಾಸಗೀ ಶಾಲೆಯವರು ತಮ್ಮ ಬಗ್ಗೆ ಸರ್ಕಾರಕ್ಕೆ ದೂರು ಕೊಟ್ಟು ಏನು ಸಾಧನೆ ಸಾಧಿಸಿದರು ಎಂದು ತಾತ್ಸಾರ ಮನೋಭಾವನೆಯಿಂದ ನಮ್ಮ ಕಡೆ ನೋಡುತ್ತಿದ್ದಾರೆ ಮತ್ತು ಸರ್ಕಾರದ ಕಡೆಗೂ ನೋಡುತ್ತಿದ್ದಾರೆ. ಆದ ಕಾರಣ ಸರ್ಕಾರದವರು ಇಂತಹವರಿಗೆ ಉಗ್ರವಾದ ಶಿಕ್ಷೆಯನ್ನು ವಿಧಿಸುವ ಬಗ್ಗೆ ಕಾರ್ಯಕ್ರಮ ಕೈ ಕೊಳ್ಳಬೇಕು. ದೇಶದಲ್ಲಿ ಭಯಭೀತಿ ಎಂಬುದು ಜನತೆಗೆ ಇಲ್ಲದಿದ್ದರೆ ಈ ದೇಶದ ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ ಕಾರಣ ಸುಳ್ಳು ಲೆಕ್ಕ ಕೊಡುವವರ ವಿರುದ್ಧ ಕ್ರಮ ತೆಗೆದುಕೊಂಡು ಅದನ್ನು ತಪ್ಪಿಸಬೇಕು. ಮತ್ತೊಂದು ಮುಖ್ಯವಾದ ಸಂಗತಿಯೆಂದರೆ, ಇಂದು ಸರ್ಕಾರೀ ಹೈಸ್ಕೂಲುಗಳಲ್ಲಿ ಏನು ಪರೀಕ್ಷಾ ಫಲಿತಾಂಶ ಬರುತ್ತಿದೆಯೋ ಅದಕ್ಕಿಂತ ಉತ್ತಮವಾದ ಪರೀಕ್ಷಾ ಫಲಿತಾಂಶ ಖಾಸಗೀ ಶಾಲೆಗಳಲ್ಲಿ ಬರುತ್ತಿದೆ. ಇಂತಹ ಶಾಲೆಗಳಿಗೆ ಹೆಚ್ಚಿನ ಧನಸಹಾಯವನ್ನು ಸರ್ಕಾರದವರು ಮಾಡಲು ಮುಂದೆ ಬರಬೇಕು. ಖಾಸಗೀ ಶಾಲೆಗಳಲ್ಲಿ ಇಂದು ಹೆಚ್ಚಿನ ಪರೀಕ್ಷಾ ಫಲಿತಾಂಶ ಬರುತ್ತಿರುವುದಕ್ಕೆ ಕಾರಣ, ಅದನ್ನು ನಡೆಸುವವರು ಅಲ್ಲಿ ಕೆಲಸ ಮಾಡುವ ಉಪಾಧ್ಯಾಯರುಗಳು ವಿದ್ಯಾರ್ಥಿಗಳಿಗೆ ಒಳ್ಳೆಯ ರೀತಿಯಿಂದ ಪಾಠ ಮಾಡುವದಕ್ಕೆ ವ್ಯವಸ್ಥೆ ಮಾಡಿರುವುದು. ಇದರಿಂದಲೇ ಖಾಸಗೀ ಶಾಲೆಗಳ ಫಲಿತಾಂಶಕ್ಕೂ ಮತ್ತು ಸರ್ಕಾರೀ ಶಾಲೆಗಳ ಫಲಿತಾಂಶಕ್ಕೂ ಅಜಗಜಾಂತರ ವ್ಯತ್ಯಾಸವಿರುವುದನ್ನು ನಾವು ನೋಡುತ್ತಿದ್ದೇವೆ. ಕೆಲವು ಸರ್ಕಾರೀ ಶಾಲೆಗಳಲ್ಲಿ ಒಬ್ಬರೂ ಸಹ ಪಾಸಾಗುತ್ತಿಲ್ಲ. ಈ ಕಾರಣದಿಂದಲಾದರೂ ಸಹ ಸರ್ಕಾರದವರು ಈಗ ಖಾಸಗೀ ಶಾಲೆಗಳು ಪ್ರಾರಂಭವಾದ ೫ ವರ್ಷದ ನಂತರ ಗ್ರ್ಯಾಂಟ್ ಕೊಡುತ್ತೇವೆಂದು ಏನು ನಿಯಮ ಮಾಡಿದ್ದಾರೆ, ಅದನ್ನು ೩ ವರ್ಷಕ್ಕೆ ಇಳಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಂದು ವಿದ್ಯಾರ್ಥಿಗಳಲ್ಲಿ ಶಿಸ್ತು ಎಂಬುದು ದಿನೇದಿನೇ ಕಡಿಮೆಯಾಗುತ್ತಾ ಬರುತ್ತಿದೆ. ಏನಾದರು ಕಾರಣ ಸಿಕ್ಕಿದರೆ ಚಳುವಳಿ ಮಾಡುವುದರ ಮೂಲಕ ದೇಶದ ಆಸ್ತಿಪಾಸ್ತಿಗಳನ್ನು ಹಾನಿಗೊಳಿಸುತ್ತಿದ್ದಾರೆ. ಈ ಕೆಟ್ಟ ದಾರಿಗೆ ಹೋಗದಂತೆ ಮಾಡಲು ಶಾಲಾಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ನೀತಿಬೋಧಕ ಪಾಠಗಳನ್ನು ಹೇಳಿಕೊಡಬೇಕು. ಅಂದರೆ ದೇಶದಲ್ಲಿರತಕ್ಕಂತ ಕಟ್ಟಡಗಳನ್ನು

ಒಡೆದುಹಾಕಿದರೆ, ಅದರಿಂದ ಜನತೆಗೇ ನಷ್ಟವಾಗುತ್ತದೆಯೇ ಹೊರತು, ಸರ್ಕಾರಕ್ಕಲ್ಲ. ದೇಶದ ಆಸ್ತಿ ಜನತೆಗೆ ಸೇರಿದ್ದು ಎಂಬುದನ್ನು ಅವರಿಗೆ ತಿಳಿಸಬೇಕು. ಈ ರೀತಿಯ ಅರಿವು ಅವರಲ್ಲಿ ಬರುವಂತೆ ನೀತಿ ಬೋಧಕ ಪಾಠ ಹೇಳಿಕೊಡಬೇಕು. ಇಂದು ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ನಡುವಿನ ಸಂಪರ್ಕ ಕಡಿಮೆಯಾಗುತ್ತಿದೆ. ಇದು ಹೆಚ್ಚಾಗಬೇಕು. ಮತ್ತು ಇಂದಿನ ಪರಿಸ್ಥಿತಿಯಲ್ಲಿ ಪದ ತಗತಿಗಳ ಅವಶ್ಯಕತೆ ಅಷ್ಟಾಗಿ ಇಲ್ಲದಿರುವ ಕಾರಣ, ತಾಂತ್ರಿಕ ವಿದ್ಯಾಭ್ಯಾಸವನ್ನು ಹೆಚ್ಚಾಗಿ ಕೊಡಬೇಕು. ಯಾರು ಬುದ್ಧಿವಂತರು ಮತ್ತು ಅನುಕೂಲಸ್ಥರು ಇದ್ದಾರೋ ಅವರಿಗೆ ಬೇಕಾದರೆ ಪದವಿ ಶಿಕ್ಷಣವನ್ನು ಕೊಡಬಹುದು, ಆದರೆ ಬೇರೆಯವರಿಗೆ ವಿದ್ಯಾಭ್ಯಾಸ ಮುಗಿದ ಮೇಲೆ ತಮ್ಮ ಜೀವನ ಮಾರ್ಗವನ್ನು ತಾವೇ ಹುಡುಕಿಕೊಳ್ಳಲು ಅನುಕೂಲವಾಗುವಂತಹ ಶಾಲೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತೆರೆಯಬೇಕು. ಇದರಿಂದ ಸರ್ಕಾರೀ ಹುದ್ದೆಗಳಿಗಾಗಿ ಕಾಯುವುದು ತಪ್ಪುತ್ತದೆ. ಈಗಾಗಲೇ ಸರ್ಕಾರದವರು ಸ್ಟೈಪಂಡರಿ ಸಿಸ್ಟಮ್‌ನ್ನು ಜಾರಿಗೆ ತಂದಿದ್ದಾರೆ. ಇದರ ಉಪಯೋಗವನ್ನು ಕೆಲವರು ಸರಿಯಾಗಿ ಮಾಡಿಕೊಳ್ಳದೆ ಸರ್ಕಾರದಿಂದ ಸಾಲವಾಗಿ ತೆಗೆದುಕೊಂಡ ಹಣವನ್ನು ತಮಗಿಷ್ಟ ಬಂದಂತೆ ಖರ್ಚು ಮಾಡಿಕೊಳ್ಳುತ್ತಿದ್ದಾರೆ. ಯಾವ ರೀತಿ ಕೈಗಾರಿಕೆ ಸ್ಥಾಪನೆ ಮಾಡಬೇಕು ಯಾವ ರೀತಿ ಹಣ ಖರ್ಚು ಮಾಡಬೇಕು ಎಂಬ ಅರಿವೇ ಕೆಲವರಿಗೆ ಇಲ್ಲ. ಆದರೂ ಆದರೂ ಸರ್ಕಾರಕ್ಕೆ ಅರ್ಜಿಗಳನ್ನು ಕೊಟ್ಟು ಹಣ ಪಡೆಯುತ್ತಿದ್ದಾರೆ. ಅದನ್ನು ವಾಪಸ್ ತೀರಿಸುವಕಾಲಕ್ಕೆ ನೋಡೋಣ ಎಂಬ ಭಾವನೆ ಅವರಲ್ಲಿ ಬಂದಂತಿದೆ. ಈ ಕಾರಣದಿಂದ ಇನ್ನುಮುಂದೆ ಸಾಲ ಕೊಡುವುದಕ್ಕೆ ಮೊದಲು ಅವರಿಗೆ ಹಣವನ್ನು ಯಾವ ರೀತಿ ಸದ್ವಿನಿಯೋಗ ಮಾಡಬೇಕು ಎಂಬ ಬಗ್ಗೆ ತರಬೇತಿ ಕೊಟ್ಟು ನಂತರ ಹಣಕೊಡಬೇಕು. ಇದರಿಂದ ಅವರ ಮುಂದಿನ ಜೀವನಮಾರ್ಗಕ್ಕೆ ಸಹಾಯವಾಗುತ್ತದೆ. ಇಲ್ಲದಿದ್ದರೆ ಅವರು ಹಣ ದುರುಪಯೋಗ ಮಾಡಿಕೊಂಡ ಮೇಲೆ ಅದನ್ನು ವಾಪಸ್ ವಸೂಲಿ ಮಾಡುವುದು ಕಷ್ಟವಾಗುತ್ತದೆ. ಮತ್ತು ಅಂತಹವರನ್ನು ಕಾನೂನು ಪ್ರಕಾರ ಜೈಲಿಗೆ ಕಳಿಸಬೇಕಾಗುತ್ತದೆ ಇಲ್ಲವೇ ಆ ಹಣವನ್ನು ಮುಫತ್ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಇದಕ್ಕೆಲ್ಲಾ ಅವಕಾಶ ಕೊಡಬಾರದು ಎಂದು ಹೇಳಿ ಈ ದಿವಸ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†SMT. SHEILLA IRANI (Nominated).–Madam Speaker, while agreeing to the demands I would like to place a few points before the Government. After many years of planning, it is good to note that the Government intends to give to the primary education, the importance which it has not been given before. Somehow our priorities have been distorted and the planners have devoted more time to University education and somewhat to secondary education. Consequently, primary education has been pushed into the background and thoroghly and completely neglected. Even though so much money has been put forward for the encouragement of primary education, it is no use spending this amount unless we decide to uplift the standards of primary education, and if this is not done, once again the whole amount will be wasted and we will be in the same position in which we have been before. Therefore, even though the generous amount of funds is very encouraging, I think the government should take note of this fact and try, as far as possible to uplift and take special interest in primary education.

The paper on education for the fifth Plan drawn up by the Union Education Ministry shows that out of every 100 children entering Class I, only 40 reach Class V and only 25 reach Class VIII.

In the rural areas, the poor children have no chance to get admissions and opportunities that they are entitled to. There are many reasons for this. The first and foremost reason is that the children have to start work at an early age and because their parents are illiterate, they do not have the impetus required for good educa-

tion. Also, social i habitions prevent the girls from entering schools They have no facilities to study—privacy, electricity etc. They have no suitable school buildings, the school bulidings are dull and unattractive and they have never seen paints for years. The buildings are taken over just to house the school and thereafter no special money is given to see that these buildings are livable and attractive for the school children to have their schooling days.

2-30 P M.

Eventually the children goes to the school. Slowly and surely they become drop out's, The first task of the Government is to set up and cut down the wastage in expenditure. First of all they should create attractive conditions for children bouth in urban and rural areas. But preference should be given specially to rural areas. Otherwise, the spread of literacy will be impeded. Developing countries and societies have always planned for the removal of illiteracy. There should be a close correlation between the economic development of a country and the educational programmes in schools Therefore, I think, we should take great interest in this matter and see that school are opened all over the state and there shouid be rapid enrolment. Patricular attention should be paid to village schools and also the tribal areas because, there are no schools in tribal areas except some Arhramas or some schools run by some Missions Where there were some institutions formerly due to non—attendance and drop outs, the Government feel that it is rather waste to spend money in those tribal areas. I should like to ask the Government to take interest and see that more and more schools are opened in those areas and school going children are an encourage to go to schools is We have also to encourage children by providing playgrounds and library facilities in schools. And also they should be given mental nourishment regularly. The teachers should be dedicated and loyal to the society. After all an indisciplined teacher will create an indisciplined pupil. I don,t think it is better to encourage teachers to take part in politics. They have enough work in schools and colleges in the whole year. They should not be withdrawn from the schools for any other reason. Teachers have to play a very important role in shaping the life of a child. Accordingly, the teachers should get maximum amount of remuneration for the work they do. They should be encouraged to take up the latest methods of education They must be encouraged to go and attend courses and see that they are brought up on the lines of day-to-day administration.

Regarding Text Books we can improve still more. Taking text books from a few should be widened and best authors and writers in the field should be given encouragement. And also children-science books shorld be given encouragement by giving some incentives.

Those books should be supplied to the schools and colleges. And also we should try to have more Audio-visual media programmes-by way of tape-recorders, slide projectors, and Mobile Libraries for Kannada, Hindi and some English books. We should have some science equipments also, so that our children take more and more interest in schools.

The Kotari Report, which was the first report dealt with education had recommended to have a school complex. In this particular complex you will have all schools, i.e., Secondary schools along with other primary schools around them. They could all work together and where the standard is low, it could be brought to the expected level. Let the education be related to the rural needs. We do not want to turn peasants into an urban type of semi-sophisticates. We want farmers who can read, write and communicate and they themselves must have confidenee. We welcome this type of change in rural areas. I would like to make a mention here that the Government should think of removing the State Level Examination of 7th Standrad. Government is spending unnecessarily lot of money to run these examinations. But, to face the examinations, the children are too young. Instead of this examinations, let them assess the work done throughout the year and they could have monthly and weekly tests for them so that they could be pruned and groomed to face the S. S. L. C. examination.

Since the children at that stage are terrified about facing the examination. I think, the Government could very earnestly study this matter and do the needful.

There are certain institutions of the Government which still have the so called Advisory Boards, I feel that the term of the Advisory Board is for some two or three years. When the term is over, the Government have to appoint another Board. But there will not be any Board during the interim period, So, I feel that when the Advisory Board is constituted, it could be done not only with the help of the Superintedents of the Schools, but also with the help of D. D. P. I. and if possible with the Deputy Commissioner of that District. I think there are many people who can serve on these Borads. I think if the Board is for a period of two years, there would be some continuity and also the institution will be able to fall in line with other institutions, and there would be no mal-practices I also suggest that an Education Commission be formed at State level to go into the working of our three Universities of the State and the factual report of the Commission is placed before both the Houses of Legislature. If we do this, the public will come to know about the facts of allegations and counter-allegations that are made from time to time. So, I would like to appeal to the Hon. Minister to see that a State level Education Commission is appointed for that purpose.

Further, we are continuously telling about the caste-less society. Therefore, I feel, that if that is so why we should have special hostels for Harijans and other minor Communities? We should remove all such hostels and have only general hostels for the students so that our children could grow together in an united and friendly atmosphere. When children are young they have no special feelings about community, caste or colour.

It is only others who put this idea in their mind and create disturbances which we are now facing in the society. I feel that we must provide opportunities to the students of every community to mix together, play together and study together in a c mmon general hostel. If they live closely they could understand the hardship of the life and other things, and there will not be any scope for communal feeling. So, we should not have any special hostels to house any particular community students.

Coming to certain mal-practices in some orphanages, our Hon. Minister has made a statement that an enquiry into those malpractices would be held, I feel that you should go further in this aspect and see that other orphanages which are also involved in similar type of malpractices punished There are many institutions which have got some god-fathers as Patrons. Those patrons who are also called as V. I Ps help these people to indulge in malpractices. If the Government dose not take action, such malpractices will go on in each and every institutions. With the result, there will be bad opsn ion the public, so for as Education Department is concerned. In some institution prisee are being distributed through V. I Ps, Why this is so ? In some institution they take Rs, 5/-for such prige distri bution programme. This should not happen. Why some specialsty in some institutions, and why not in some other institution So, I would like to ask the Government why they show some special treatment to some institution in the State and why they are not treating all the institutions on equal footing.

With regard to private-run minority schools I would like to say a few words. I think more understanding could be brought about between the minority run schools and the Government. We are doing our best to serve public in this city. Therefore, some consideration should be given to us. At no time we have gone against the Department nor the Department felt that we have gone against the rules of the Department. But, still I feel that there should some adjustment and understanding between the Department and the schools run by minority communties. We welcome the inspectors to the school to have the inspection and have a look round and give their report to the Government. At the some time. we feel that there should not be any undue interference. Article 30 of the Constitution will be a complete mockery if there is undue intereference in these schoo's. After all minorities are givenrights to have these institutions in the

method in which they went. Even though we want to fall in line with the rules and regulations, like other institutions, we still feel that there should be certain amount of independence which is necessary to these institutions. With these few words, I thank the Chair and close my speech. Thank you

† ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ).—ಮಾನ್ಯ ಅಧ್ಯಕ್ಷಣಿಯವರೇ, ವಿದ್ಯಾಭ್ಯಾಸ ಇಲಾಖೆಯ ಬೇಡಿಕೆಯ ಮೇಲೆ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಬಹು ಮುಖ್ಯವಾಗಿ ಫ್ರೀ ಪ್ರೈಮರಿ ಎಜುಕೇಷನ್ ವಿಚಾರದಲ್ಲಿ ಹೆಚ್ಚಿಗೆ ಮಾತನಾಡಬೇಕಾಗಿದೆ. ಯೂನಿವರ್ಸಿಟಿ ಪ್ರೀಯೂನಿವರ್ಸಿಟಿ ಸೆಕೆಂಡರಿ ಎಜುಕೇಷನ್, ಪ್ರೈಮರಿ ಎಜುಕೇಷನ್ ಎಷ್ಟು ಮುಖ್ಯವೋ ಫ್ರೀ ಪ್ರೈಮರಿ ಎಜುಕೇಷನ್ ಸಹ ಅಷ್ಟೇ ಮುಖ್ಯ. ಕಾರಣವಾದರೂ ಇಷ್ಟೇ. ಮಕ್ಕಳಿಗೆ ವಿದ್ಯಾಭ್ಯಾಸದ ಗಮನವನ್ನು ತಳಹದಿಯಲ್ಲಿಯೇ ಸರಿ ಮಾಡದಿದ್ದರೆ ಅದು ಕೊನೆಯವರೆಗೂ ಅಷ್ಟು ಅವಕಾಶ ಪಡೆದು ಪರಿಣಾಮಕಾರಿಯಾಗಿ ಸರಿ ಮಾಡುವುದಕ್ಕಾಗುವುದಿಲ್ಲ. ಅವರನ್ನು ಒಳ್ಳೆಯ ವಿದ್ಯಾವಂತರನ್ನಾಗಿಯೂ ಮಾಡುವುದಕ್ಕಾಗುವುದಿಲ್ಲ. ಫ್ರೀ ಪ್ರೈಮರಿ ಎಜುಕೇಷನ್ ವಿಷಯದಲ್ಲಿಯೂ ಮತ್ತು ನರ್ಸರಿ ಕ್ಲಾಸಸ್ ವಿಷಯದಲ್ಲಿಯೂ ಸಾಮಾನ್ಯವಾಗಿ ನಗರಗಳಲ್ಲಿ ಖಾಸಗಿ ಪಾಠಶಾಲೆಯಲ್ಲಿ ಪಾಠಗಳನ್ನು ಹೇಳುವ ಅವಕಾಶ ಇದೆ. ಆದರೆ ನರ್ಸರಿ ಕ್ಲಾಸ್‌ಗಳನ್ನು ಹಳ್ಳಿಗಳ ಕಡೆ ಯಾರೂ ಮಾಡುತ್ತಾ ಇಲ್ಲ. ಆದರೆ ಸರ್ಕಾರದವರೂ ಸಹ ಸಾಕಷ್ಟು ಪ್ರಯತ್ನಪಡುತ್ತಾ ಇಲ್ಲ. ಇದನ್ನು ಅಲ್ಲಿ ಖಾಸಗೀಯವರಾಗಲೀ ಅಥವಾ ಸರ್ಕಾರದವರೇ ಆಗಲೀ ಮಾಡುವುದಕ್ಕೆ ಆಗುತ್ತಿಲ್ಲ. ಆದರೆ ನಗರಗಳಲ್ಲಿ ದುಡ್ಡು ಇರುವವರು ತಮ್ಮ ಮಕ್ಕಳನ್ನು ಪ್ರಭಾವಿ ವಿದ್ಯಾವಂತರನ್ನಾಗಿ ಮಾಡಬೇಕೆಂಬ ದೃಷ್ಟಿಯಿಂದ ಹೆಚ್ಚಿಗೆ ಫೀಸ್ ಕೊಟ್ಟು ಅಲ್ಲಿಗೆ ಕಳುಹಿಸುತ್ತಾರೆ. ಹೆಚ್ಚಿಗೆ ಶಕ್ತಿ ಇರುವವರು ತಮ್ಮ ಮಕ್ಕಳು ಪ್ರೈಮರಿ ಎಜುಕೇಷನ್‌ಗೆ ಬರುವುದಕ್ಕೆ ಮುಂದೆ ಸರಿಯಾದ ರೀತಿಯಲ್ಲಿ ತರಪೇತು ಕೊಡುವುದಕ್ಕೂ ಈ ರೀತಿ ಅವಕಾಶ ಇರುತ್ತದೆ. ಆದರೆ ಬಡಮಕ್ಕಳಿಗೆ ಕೂಲಿಗಾರರ ಮಕ್ಕಳಿಗೆ ಫ್ರೀ ಪ್ರೈಮರಿ ಎಜುಕೇಷನ್ನಿನಲ್ಲಿ ಖಾಸಗೀಯಾಗಿ ಓದಿಸುವುದಕ್ಕೆ ಚೈತನ್ಯ ಇಲ್ಲದೆ ಇರುವುದರಿಂದ ಅವರ ಮಕ್ಕಳನ್ನು ಅಲ್ಲಿಗೆ ಕಳಿಸುವುದಕ್ಕೆ ಅವಕಾಶ ಇರುವುದಿಲ್ಲ. ಯಾರೂ ಕೂಡ ಖಾಸಗಿಯಾಗಿ ನರ್ಸರಿ ಕ್ಲಾಸಸ್ ನಡೆಸುವವರು ರೂರಲ್ ಏರಿಯಾಗಳಲ್ಲಿ ಆ ಒಂದು ಸೌಕರ್ಯವನ್ನು ಕೊಡುವ ಬಗ್ಗೆ ಗಮನ ಕೊಡುವುದಿಲ್ಲ. ನಗರಗಳಲ್ಲಿ ಏನಾಗಿದೆಯೆಂದರೆ ಈ ನರ್ಸರಿ ಶಾಲೆಗಳನ್ನು ಖಾಸಗಿಯಾಗಿ ನಡೆಸುವವರು ವ್ಯಾಪಾರಸ್ಥರು ಮತ್ತು ಹೆಚ್ಚು ದುಡ್ಡು ಗಳಿಸುವ ದೃಷ್ಟಿಯಿಂದ ನಡೆಸುತ್ತಾರೆಂದರೆ ತಪ್ಪಾಗಲಾರದು. ಎಷ್ಟು ದುಬಾರಿ ಫೀಸ್ ಆದರೇ ಅದನ್ನು ಹೇಳುವುದಕ್ಕ ಆಗುವುದಿಲ್ಲ. ಏನೋ ಒಂದು ರೀತಿಯಲ್ಲಿ ಸಮಾಧಾನವಾಗುವುದಕ್ಕ ಒಂದು ಅವಕಾಶ ಇರಲಿ ಎಂದು ಹೆಚ್ಚಿಗೆ ಫೀಜುಕೊಟ್ಟು ಜನರು ತಮ್ಮ ಮಕ್ಕಳನ್ನು ಕಷ್ಟವಾದರೂ ಅಲ್ಲಿಗೆ ಕಳುಹಿಸುತ್ತಿದ್ದಾರೆಂಬ ಭಾವನೆ ಬರುತ್ತದೆ, ಆದ್ದರಿಂದ ನಾನು ಹೇಳುವುದೇನೆಂದರೆ, ಫ್ರೀ ಪ್ರೈಮರಿ ಎಜುಕೇಷನ್ ವಿಷಯದಲ್ಲಿಯೂ ಕೂಡ ಇನ್ನು ಮುಂದೆ ಸರ್ಕಾರದವರು ಕಾಲೇಜುಗಳ, ಹೈಸ್ಕೂಲುಗಳ, ಮಿಡಲ್‌ಸ್ಕೂಲ್‌ಗಳ ಬಗ್ಗೆ ಎಷ್ಟರಮಟ್ಟಿಗೆ ಗಮನ ಕೊಡುತ್ತಾರೋ ಅಷ್ಟೇ ಗಮನವನ್ನು ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ಸರ್ಕಾರಕ್ಕೆ ಹೆಚ್ಚಿಗೆ ದುಡ್ಡು ಖರ್ಚಾದರೂ ಕೂಡ ಬಾಕಿ ಹಂತಗಳಲ್ಲಿ ಎಲ್ಲಾ ಮಟ್ಟದಲ್ಲಿ ನೆಸ್ಸೆಟಿ ಇರುವ ಹಾಗೆ ಸರ್ಕಾರ ನರ್ಸರಿ ಮತ್ತು ಫ್ರೀಪ್ರೈಮರಿ ಎಜುಕೇಷನ್ನಿಗೂ ಬಡ್ಜೆಟ್ಟಿನಲ್ಲಿ ಆದಷ್ಟು ದುಡ್ಡನ್ನು ಒದಗಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಪ್ರೈಮರಿ ಎಜುಕೇಷನ್ ವಿಷಯದಲ್ಲಿ ಕಡ್ಡಾಯ ಶಿಕ್ಷಣ ಎಂಬುದಾಗಿ ಜಾರಿಗೆ ತಂದಿದ್ದಾರೆ. ಇದಕ್ಕಿಂತ ಮುಂಚಿತವಾಗಿ ಅದಕ್ಕೆ ಸರಿಯಾದ ರೀತಿಯಲ್ಲಿ ಎಲ್ಲಾ ಅವಕಾಶ ಮತ್ತು ಅನುಕೂಲಗಳು ಮಾಡಿದೆಯೋ ಇಲ್ಲವೋ ಎಂಬುದನ್ನು ನೋಡಿ ಮಾಡಬಹುದಾಗಿತ್ತು. ಈಗ ಹುಡುಗರನ್ನು ಅಲ್ಲಿ ಸೇರಿಸುವುದಕ್ಕೆ ಒಂದು ಅವಕಾಶ ಮಾಡಿಕೊಂಡಿದ್ದಾರೆಯೇ ಹೊರತು ಬಾಕಿ ವಿಷಯಗಳ ಮತ್ತು ಅನುಕೂಲಗಳ ಕಡೆ ಗಮನಕೊಟ್ಟಿಲ್ಲ. ಇದರಿಂದ ಅನೇಕ ಸಮಸ್ಯೆಗಳು ಉದ್ಭವವಾಗುತ್ತವೆ, ೬ ವರ್ಷದ ಹುಡುಗರನ್ನು ಕಡ್ಡಾಯವಾಗಿ ಸೇರಿಸಬೇಕೆಂದು ಹೇಳುತ್ತಿದ್ದಾರೆ, ಆದರೆ ನಗರಗಳಲ್ಲಿ ಪ್ರೈಮರಿ ಶಾಲೆಗಳಲ್ಲಿ ಕೂತುಕೊಳ್ಳುವುದಕ್ಕೆ ಸ್ಥಳವಿಲ್ಲ. ಉಪಾಧ್ಯಾಯರುಗಳು ಎಷ್ಟೋ ಕಡೆಗಳಲ್ಲಿ ಇಲ್ಲವೇ ಇಲ್ಲ. ಕೊನೆಗೆ ಚಾಪೆ ಹಾಕಿಕೊಂಡು ಕೂತುಕೊಳ್ಳುವುದಕ್ಕೂ ಒಂದು ಷೆಡ್‌ಕೂಡ ಇಲ್ಲ, ಹುಡುಗರು ಬಿಸಿಲು, ಮಳೆಯಲ್ಲಿ ನೆನೆಯಬೇಕಾಗಿದೆ. ಸ್ಕೂಲುಗಳ ಬೆಟರ್‌ಮೆಂಟ್ ಕಮಿಟಿಗಳಿಂದ ಇಷ್ಟೆಲ್ಲಾ ಅನುಕೂಲಗಳನ್ನು ಮಾಡಲು ಚೈತನ್ಯವಿಲ್ಲ. ಆದ್ದರಿಂದ ಸರ್ಕಾರದವರು ಈ ಎಲ್ಲಾ ಅನುಕೂಲಗಳನ್ನು ಕೊಟ್ಟು ಕಡ್ಡಾಯ ಶಿಕ್ಷಣಕ್ಕೆ ಏರ್ಪಾಡು ಮಾಡಬೇಕು. ಗ್ರಾಮಾಂತರ ಪ್ರದೇಶಗಳ ಕಡೆ ಇದಕ್ಕೆ ಅವಕಾಶವೇ ಇಲ್ಲವೆಂದು

ನಾನು ಹೇಳುತ್ತೇನೆ. ಆದ್ದರಿಂದ ಕಡ್ಡಾಯ ಶಿಕ್ಷಣಕ್ಕೆ ಮಕ್ಕಳನ್ನು ಸೇರಿಸುವುದು ಮತ್ತು ಎಲ್ಲಾ ಅನುಕೂಲಗಳಿಗೆ ಅವಕಾಶ ಮಾಡಿಕೊಟ್ಟು ಅದನ್ನು ಪ್ರೈಮರಿ ಎಜುಕೇಷನ್ ಲೆವಲ್‌ನಲ್ಲಿ ಮಾಡಬೇಕು.

ಇನ್ನು ಕೆಲವು ಪ್ರೈವೆಟ್ ಕಾಲೇಜುಗಳ ವಿಷಯ. ಇದರಲ್ಲಿ ಅನೇಕ ಸಮಸ್ಯೆಗಳಿವೆ ಉದಾಹರಣೆಗೆ ಹೇಳುವುದಾದರೆ, ಮೈಸೂರು ಜಿಲ್ಲೆಯಲ್ಲಿ ಜಿಲ್ಲಾ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮೂಲಕ ಒಂದು ಕಾಲೇಜು ಮೈಸೂರು ಸಿಟಿಯಲ್ಲಿ ನಡೆಯುತ್ತಾ ಇದೆ. ಸುಮಾರು ೫ ತಿಂಗಳುಗಳಿಂದ ಅಲ್ಲಿರುವ ಉಪಾಧ್ಯಾಯರಿಗೆ ಸಂಬಳ ಕೊಟ್ಟಿಲ್ಲ. ಐದಾರು ತಿಂಗಳುಗಳಿಂದಲೂ ಅಲ್ಲಿ ಸರಿಯಾದ ಕ್ಲಾಸ್ ರೂಮ್ಸ್ ಇಲ್ಲ. ಲ್ಯಾಬೋರೇಟರಿ ಇಲ್ಲ ಮತ್ತು ಸರಿಯಾದ ಅನುಕೂಲಗಳಿಲ್ಲ. ಅಂತಹ ಪ್ರೈವೆಟ್ ಕಾಲೇಜುಗಳು ಇರುವುದರಿಂದ ಅದರ ಉದ್ದೇಶ ಸಫಲವಾಗಬೇಕಾದರೆ ಇಂತಹ ತೊಂದರೆಗಳು ಕೂಡಲೇ ಬಗೆಹರಿಯಬೇಕು. ಸರ್ಕಾರದವರು ಇಂತಹ ಕಾಲೇಜುಗಳನ್ನು ಅವರೇ ತೆಗೆದುಕೊಂಡು ನಡೆಸಬೇಕು. ಇಲ್ಲದೇ ಹೋದರೆ ಅಲ್ಲಿ ಈಗಲೇ ಕೆಲವು ತಾಲ್ಲೂಕು ಬೋರ್ಡ್‌ಗಳು ಅವರ ಕಂಟ್ರಿಬ್ಯೂಷನ್ ಕೊಡುವುದನ್ನು ನಿಲ್ಲಿಸಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿರುತ್ತಾರೆ. ಅದರಿಂದಾಗಿ ಇಂತಹ ಸಂದರ್ಭಗಳಲ್ಲಿ ಅವರು ಆ ಕಾಲೇಜನ್ನು ಮುಚ್ಚಬೇಕಾಗಿ ಬರುತ್ತದೆ. ತಾಲ್ಲೂಕು ಬೋರ್ಡ್ ಏರಿಯಾದಿಂದ ಬರುವ ಹುಡುಗರಿಗೆ ಅನುಕೂಲವಾಗಲಿ ಎಂಬುದಾಗಿ ಪ್ರಯತ್ನ ಮಾಡುವ ಉದ್ದೇಶ ಸಫಲವಾಗುವುದಿಲ್ಲ ಒಟ್ಟಿನಲ್ಲಿ ಬಹು ಮುಖ್ಯವಾಗಿ ಮೈಸೂರು ನಗರದಲ್ಲಿರುವ ಮೈಸೂರು ಜಿಲ್ಲೆಯ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ನ ಕಾಲೇಜನ್ನು ಸರ್ಕಾರವೇ ಈ ಕೂಡಲೇ ತನ್ನ ವಶಕ್ಕೆ ತೆಗೆದುಕೊಂಡು ಅಲ್ಲಿರುವ ಸಮಸ್ಯೆಗಳನ್ನು ಕೂಡಲೇ ಪರಿಹರಿಸಬೇಕು

ಇನ್ನು ಮೈಸೂರು ಯೂನಿವರ್ಸಿಟಿ ಅಂಡರ್ ಗ್ರಾಜುಯೇಟ್ ಕಾಲೇಜುಗಳ ವಿಷಯ. ಇಲ್ಲಿಯ ಟೀಚಿಂಗ್ ಸ್ಟಾಫ್‌ಗೆ ಕೊಲಿಜಿಯೆಟ್ ಎಜುಕೇಷನ್ ಇಲಾಖೆಯ ಟೀಚಿಂಗ್ ಸ್ಟಾಫ್‌ಗೆ ಏನು ಅನುಕೂಲ ಸಿಗುತ್ತಿದೆಯೋ ಅಂದರೆ ೧೫ ವರ್ಷಗಳಿಂದಲೂ ಸರ್ವಿಸ್ ಮಾಡಿರುವವರಿಗೆ ಅದರಲ್ಲಿಯೂ ರೀಡರ್ ಮತ್ತು ಪ್ರೊಫೆಸರ್ ಆಗಿರುವವರಿಗೆ ಪ್ರಮೋಶನ್ ಮೂಲಕ ಅನುಕೂಲಗಳು ಮಹಾರಾಜ ಕಾಲೇಜ್ ಮತ್ತು ಯುವರಾಜಾ ಕಾಲೇಜ್‌ಗಳಲ್ಲಿರುವ ಟೀಚಿಂಗ್ ಸ್ಟಾಫ್‌ಗೆ ಪ್ರೊಮೋಷನ್ನಿನ ಮೂಲಕ ಅವಕಾಶವೇ ಇಲ್ಲ ಆದ್ದರಿಂದ ಕೊಲಿಜಿಯೇಟ್ ಎಜುಕೇಶನ್ ಕಾಲೇಜುಗಳಲ್ಲಿರುವ ಹಾಗೆ ಇದಕ್ಕೂ ಅವಕಾಶ ಕೊಡಬೇಕು. ಇಲ್ಲಿಯ ಸ್ಟಾಫ್ ಈ ರೀತಿ ಸೌಲಭ್ಯ ಇಲ್ಲವಲ್ಲಾ ಎಂದು ಹೇಳುತ್ತಿರುವುದರಿಂದ ಆ ಒಂದು ಅವಕಾಶವನ್ನು ನಮಗೂ ಕೊಡಬೇಕೆಂದು ಈಗ ಮಹರಾಜ ಮತ್ತು ಯುವರಾಜ ಕಾಲೇಜ್ ಟೀಚಿಂಗ್ ಸ್ಟಾಫ್ ಕೇಳುವುದು ನ್ಯಾಯವಾಗಿದೆ. ಮೈಸೂರು ಯೂನಿವರ್ಸಿಟಿ ಆಕ್ಟ್‌ನಲ್ಲಿ ಬೈಸೆಲೆಕ್ಷನ್ ಎಂಬುದಾಗಿ ಪ್ರಾವಿಷನ್ ಇರುವುದರಿಂದ ಅದರ ಬಗ್ಗೆ ಒಂದು ಅಮೆಂಡ್‌ಮೆಂಟ್ ಬೈ ಪ್ರಮೋಷನ್ ಎಂದು ಸೆಕ್ಷನ್ ೨೭ಕ್ಕೆ ಆಗಬೇಕೆಂದು ಸಿಂಡಿಕೇಟಿನವರು ರೆಕ್‌ಮೆಂಡ್ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆಂದು ನನಗೆ ತಿಳಿದುಬಂದಿದೆ. ಈ ಕೂಡಲೇ ಈ ಸೆಕ್ಷನ್‌ನಲ್ಲಿಯೇ ಈ ಅಮೆಂಡ್‌ಮೆಂಟ್ ತಂದು ಪಾಸ್ ಮಾಡಿ ಇವರಿಗೆ ಅನುಕೂಲ ಮಾಡಿಕೊಡಬೇಕೆಂದು ಸರಕಾರವನ್ನು ನಾನು ಒತ್ತಾಯ ಪಡಿಸುತ್ತೇನೆ. ಆದುದರಿಂದ ಈ ಅನುಕೂಲಗಳನ್ನು ಅವರಿಗೂ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಆ ತಿದ್ದುಪಡಿಗೆ ಸರ್ಕಾರದವರು ಬೇಗ ಒಪ್ಪಿಗೆ ಕೊಟ್ಟು ಕಳುಹಿಸದಿದ್ದರೆ ಅಲ್ಲಿ ಲೆಕ್ಚರ್‌ರಾಗೇ ನಿವೃತ್ತಿಯಾಗತಕ್ಕ ನಿದರ್ಶನಗಳು ಇವೆ. ಆದರೆ ಹಾಗಾಗಬಾರದು. ಆದುದರಿಂದ ಆ ಸಿಂಡಿಕೇಟಿನವರು ಮಾಡಿ ಕಳುಹಿಸಿರತಕ್ಕ ತಿದ್ದುಪಡಿಗೆ ಸರ್ಕಾರದವರು ಬೇಗ ಒಪ್ಪಿಗೆಕೊಟ್ಟು ಕಳುಹಿಸಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಅವರಲ್ಲಿ ಅಸಮಾಧಾನಗಳು ಬೆಳೆದು ಅಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ.

ಇನ್ನು ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಹೇಳುವುದಾದರೆ ಅಲ್ಲಿ ಒಂದಲ್ಲ ಅನೇಕ ಸಮಸ್ಯೆಗಳಿವೆ. ಇದೇ ವಿಚಾರದಲ್ಲಿ ನೆನ್ನೆಯ ದಿವಸ ಮಾನ್ಯ ಕಾಗೋಡು ತಿಮ್ಮಪ್ಪನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ವಿಶ್ವವಿದ್ಯಾನಿಲಯದ ಮಟ್ಟದಲ್ಲೂ ಅಲ್ಲಿ ಇಲ್ಲಿ ಸ್ವಲ್ಪ ದೋಷಗಳಿರಬಹುದು. ಆದರೆ ಅದೊಂದು ಅಟಾನಮಸ್ ಬಾಡಿ—ಸ್ವಾಯತ್ತಸಂಸ್ಥೆ. ಲೋಪವಿದ್ದಲ್ಲಿ ಅದನ್ನು ಸರಿಪಡಿಸುವ ಅವಕಾಶ ಅದಕ್ಕೆ ಇದೆ. ಆದರೆ ಅಲ್ಲಿನ ಸಿಂಡಿಕೇಟ್—ಸೆನೆಟ್ ಮತ್ತು ವೈಸ್‌ಚಾನ್ಸಲರ್ ಅವರು ಕಾಗೋಡು ತಿಮ್ಮಪ್ಪನವರು ಹೇಳಿದ ವಿಚಾರದಲ್ಲಿ ಏನು ವರದಿ ಕೊಟ್ಟಿದ್ದಾರೆ ಅದರ ಬಗ್ಗೆ ಸರ್ಕಾರದವರಿಗೇನು ವರದಿ ಬಂದಿದೆ ಎಂಬುದು ನನಗಿನ್ನೂ ತಿಳಿಯದು: ಅವರ ಆ ಒಂದು ವರದಿಯನ್ನು ನೋಡದೆ ನಾವಿಲ್ಲಿ ಏನೂ ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲ ಹಾಗೆ ತೀರ್ಮಾನಕ್ಕೆ ಬರುವುದು ಕೂಡ ಸರಿಯಾದ್ದಲ್ಲ. ಇನ್ನು ಕೆಲವು ಇಲಾಖೆಗಳ ವರದಿಗಳನ್ನು ನಮಗೆ ಸಕಾಲಕ್ಕೆ ಸರಿಯಾಗಿ ತಲುಪುವಂತೆ ವ್ಯವಸ್ಥೆ ಮಾಡಿಲ್ಲ. ಅವುಗಳನ್ನು ಸದಸ್ಯರಿಗೆ ಸಕಾಲದಲ್ಲಿ ಓದಿಕೊಂಡು ಬಂದು ಇಲ್ಲಿ ಮಾತನಾಡುವುದಕ್ಕೆ ಅವಕಾಶವಿರುವಂತೆ ಅವುಗಳನ್ನು ನಮಗೆ ಮುಂಚಿತವಾಗಿ ಒದಗುವಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸಿ ಅಧ್ಯಕ್ಷರು ನನಗಿಟ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SMT. SUMATHI B. MADIMAN :— (ಧಾರವಾಡ – ಗ್ರಾಮಾಂತರ). Madam Speaker, I support the demand on Education and would like to speak a few words on some important aspects of it

At the outset, I would like to quote Swami Vivekananda who said :—

"Education is the manifestation of perfection in man."

If we are to realise this truth I feel we have a tremendous job before us. After having witnessed the products of schools and colleges who have turned out negative attitude of destruction I feel that the time has come when we have to put the question what is wrong with education ? If we find there is something wrong with them how do we set it right. I would say education begins from the cradle. So I totally agree with the hon. Members Mrs. Keshava Murthy and Mr. Kagodu Thimmappa when they said there was urgent need for starting Balwadis in every village. I feel amused to say that because for the past two years I have been stressing this point and I am half-a-mind not to say it. I feel it like a old record in which the needle gets stuck and sound repeats over and over again But I still feel that by persuation we can achieve this thing. Why I insisted on Balwadis is that it is there we could educate the child to take care of itself. I feel that the Education Department should take the sole responsibility of running Balwadis in the rural areas and in the towns The Social Welfare Department, the Block Developments everybody had to start a Balawadi in each village but then because of lack of finances they dropped idea I feel overlapping of such programmes are a cause for faulty implimentation of the schemes. Alongwith the Balawadis if the Social Welfare Department comes forward to start 'creches' which would help in enabling the infants to take up school education later. We speak of helping the vulnerable sections of the society. But it is those very people who never get the benefits of the schemes which the Government undertakes. The reason being we have never thought of the cause of these things. Therefore, I would again urge upon the Government that the Education Department should solely take the responsibility of starting Balwadis in rural areas, in cities and in uebar areas too. Further, the Social Welfare Department should start 'Creches' alongwith Balawadis to take full advantage of the nutritions programme which, I am sorry to say, are a failure.

We have to accept facts. We cannot hoodwink people for long. I had an occasion to see two Balwadies, who had appplied for financial aid. But I am sorry to say that those schools nevere xit and one P.U.C. student had told me that he was looking after the school. I think the Education Department has to be very alert and put a stop to such wastage of money and currupt practices. When the Inspector or officer is there on inspection, the equipment is ready. the children are ready and everything is ready. But the fact is that one school helps the other school lending its equipment when the Inspector goes to the scoool for

inspection. When the officers have the right to inspect the schools any time, I do not think there is need to give intimation about inspection. When you know that they are going to play all the mischief, just pay a surprise visit and catch them redhanded.

I would like to say a few words about Primary schools. Primany schools in rural areas are slightly better although they are housed two rooms because they are built in healthy surroundings. But in cities, I would specially say in Hubli there are some schools where even dry cattle would not be there. The children cannot sit properly; they donot have latrines nor playgrounds. What can we expect from such chidren who have been brought up in such surroundings ? The schools should be located in healthy and good surroundings. As my hon. friend Smt. Irani stated, the condition of some schools is so depressing that I do not think the child would like to go there. I would suggest to the Education Department to insist on the Muncipalities to build the schools in healthy and good surroundings for the children. Are they not the children of the tax-payers ? Do they not have the right to be citizens and enjoy all the facilities. If those facilities are not provided, what is the sense in telling the children taat they are the future generations and they have to do wonders for the country ? Let us set a good example by building beautiful schools and then only we can expect something in return. Wherever it is possible, in Secondary schools and also in primary schools, wherever they have a little space, I would suggest to have small gardens, with the co-operation of the Horticulture Department, which would teach the children a sense of duty and a civic sense. This is a thing which has to be taught to the child from its young age. People may wonder as to why I am speaking about all these things. But these are the little thigs which build up the character of the child.

I would like to say something about secondary education. I would say that students of Secondary schools should have more facilities of research and hobb centers, where the teacher should take real interest and create an interest in research I think in our country we do not have students who have that attitude of doing research. We are badly in need of it. At the same time, they could keep small miniature sets like, telephones, telegraphs, radios, so that the child could pull it out and learn the mechanism and working of these sets. Another suggestion of mine is this. I feel that 'population education, should be introduced in Secondary schools. This will help in long way because it gives knowledge about the increase of population, why there is scarcity and why there are shortages. By this we will equip the child to face the problems when we grows up, because everybody knows that scarcity and other problems have cropped up on account of population explosion. This subject cannot be added on at the higher levels because they think it is something wrong. But,

if we introduce this subject: 'population education' in the curriculum and integrate it with other subjects such as Social Science, General Science, even Geography and Mathematics, I think it would be better, I hope the Government when it approves the syllabus will introduce this subject for the Secondary schools.

Then, I would like to say a few words about the strikes and the way the students behave in the University campus. I would not blame the students. We have to see the psychology behind it. Why does the student misbehave like this ? He comes from a distant place and stays in the Hostel. It is usual that the boys who stay in hostels create all these problems. In Hostels they do not get good and they do not have any friends or some elderly person to guide them. If the professors, teachers and students have a personal contact, meeting once in a fortnight over a cup of Tea and find out what their needs are and what they feel about the present problems, I am sure, such incidents could be avoided. We could find out their talents and encourage them. The trouble now-a-days is that there is no one to encourage them and appreciate their talent. With such meetings, I feel we could avoid much of the strikes and agitations, because whenever the students know that there is a person who could guide them and once they get the confidence, I am sure, they will adhere to the advice of their teachers.

Coming to the Engineering Colleges, the engineering students, especially the graduates although they are well versed in theory they lack in practical knowledge. A diploma-holder is much better than a degree-holder in practical knowledge. The degree-holder do not have proper balance between theory and practical. Who could tell him things which he does not know, how to work a machine, etc., ? That is why they get frustrated. We have to think seriously to stop all this. I have seen an engineering College where they have good equipment, such as engines, motor-parts, etc. Why don't you allow the students to dismantle them and reassemble the whole thing ? In foreign countries the students are given all sorts of equipment to gain practical experience. But here, our boys are forbidden beaause the authorities feel that they might demage the costly equipment. If that is the attitude, how could our boys come up. We feel it is a waste. It can never be a waste. The boys should be allowed to handle the equipment so that they know what they are learning.

Before I conclude, I would like to say a few words about Polytechnics for Women. There are three Polytechnics for Women in our State, and two of these which are in bigger cities are running well. I But the one at Hubli is not running as it should. I know the reasons for it too. It is a course of three years. Some girls go there to study till they get married. So, in the final year you will find hardly 10 or 15 girls.

Is'nt it a waste ? And again there are other girls who would like to take a course of one year and then take up job because of the dire need for finance by their families, We cannot compel the girls to take up three years course. We should have a short-term course for one year so that they can take up the job, In respect of Hubli polytechnic, I would like to offer a few suggestion for the consideration of the Government. But this being a technical school, the Government may not be able to include them in the curriculum: but we have to change the curriculum in order to suit the local needs of the people The short term courses tnat I would like to suggest are :

(1) Canning and food preservation,
(2) Receptionist course-home keeping, cooking,
(3) Housewives course - Laundry,
(4) Home electrician and plumming.

People might wonder why women require plumming. In Bombay a Husband who leave home at 6 A.M. reaches home only at8 P. M. Every blessed work has to be attended by the women in Bombay. I would say that girls will have to be taught things by which they can become self-reliant. I would further request the Government to start Residential Schools for boys and girls where the urban andthe rural childern can stay together by which they would understand and I am sure, they will know how to live a disciplined and organised life.

The necessity of libraries: As suggested by some hon. member I too would feel that we should have mobile libraries in our State. Mobile library does not mean taking books in van; but taking books on a bicycle. A man can carry some books on the bicycle from one village to another village, We can thus create a love for reading-habit among the villagers.

I thank Madam Speaker for having given me a chance to speak on this subject.

†ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).— ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಈ ಹೊತ್ತು ನಾವು ಪಂಜೆ ಮಂಗೇಶರಾಯರ ಶತಮಾನೋತ್ಸವವನ್ನು ಆಚರಿಸುತ್ತಿದ್ದೇವೆ. ಅವರು ಬಹಳ ಮೇಧಾವಿಗಳು, ಅಧ್ಯಾಪಕರಾಗಿದ್ದವರು, ವಿದ್ಯಾ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದವರು, ಸಾಹಿತಿಗಳು, ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು, ಕರ್ನಾಟಕದ ಹಿರಿಯ ಸಾಹಿತಿಗಳು, ಹಿರಿಯರು. ಅವರ ಶತಮಾನೋತ್ಸವವನ್ನು ಆಚರಿಸುತ್ತ ಇದ್ದೇವೆ. ನನ್ನ ಕ್ಷೇತ್ರದಲ್ಲಿ ಅವರು ಜನಿಸಿದರು ಅವರು ಹುಟ್ಟಿನಿಂದ ಬೆಳೆದು ಅವರ ಪ್ರತಿಭೆಯನ್ನು ಪ್ರಕಾಶ ಪಡಿಸಿದ ಒಂದು ಕ್ಷೇತ್ರದಿಂದ ಆರಿಸಿ ಬರುವ ಪುಣ್ಯ ನನ್ನದು ಎಂದು ನಾನು ತಿಳಿದುಕೊಂಡಿದ್ದೇನೆ ಅವರಿಗೆ ಉತ್ತಮವಾದ ಸ್ಮಾರಕವನ್ನು ರೂಪಿಸುವುದಕ್ಕೆ ವಿದ್ಯಾ ಇಲಾಖೆಯವರೂ, ಸರ್ಕಾರದವರೂ ಗಮನ ಕೊಡಬೇಕೆಂದು ಪ್ರಥಮವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಈಚೆಗೆ ಮಂಗಳೂರಿನಲ್ಲಿ ಮೂರುದಿವಸಗಳ ಸಮಾವೇಶ ನಡೆಯಿತು. ಬಂಟವಾಳದಲ್ಲಿ ಅವರು ಹುಟ್ಟಿದ ಸ್ಥಳದಲ್ಲಿ ಒಂದು ಸರ್ಕಾರಿ ಆಸ್ಪತ್ರೆ ಇದೆ, ಗೋಡೆಯ ಮೇಲೆ ಒಂದು ಚಿಕ್ಕ ಬೋರ್ಡ್ ಹಾಕಿ ಅದರಲ್ಲಿ ಪಂಜೆ ಮಂಗೇಶರಾಯರು ಇಲ್ಲಿ ಹುಟ್ಟಿದರು ಎಂದು ಬರೆದಿಟ್ಟಿದ್ದಾರೆ. ಇಷ್ಟೇ ಅಲ್ಲಿ ಆಗಿರುವ ಸ್ಮಾರಕ. ಅವರು ಹುಟ್ಟಿದ ಮನೆಯಲ್ಲಿ ಆಲ್ಲಿನ ಆಸ್ಪತ್ರೆ ಮತ್ತು ಡಾಕ್ಟರಿದ್ದಾರೆ. ಆ ಮನೆಯನ್ನು ದೊಡ್ಡದಾದ ಮಕ್ಕಳ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕಾಗಿ ಒಂದು ಲಕ್ಷ ರೂಪಾಯಿಗಳಷ್ಟು ಹಣವನ್ನು ಬಂಟವಾಳದ ನಾಗರಿಕರು ಸಂಗ್ರಹ ಮಾಡಿ ಸರ್ಕಾರಕ್ಕೆ ಕೊಡುವುದಕ್ಕೆ ತಯಾರಾಗಿದ್ದಾರೆ. ಆ ಕೊಡುಗೆಯನ್ನು ಈ ಹೊತ್ತು ಈ ಸಭೆಯಲ್ಲಿ

ನಾನು ತಮಗೆ ಕೊಡುತ್ತಿದ್ದೇನೆ. ಈ ಒಂದು ಲಕ್ಷ ರೂಪಾಯಿಗಳನ್ನು ಸ್ವೀಕಾರ ಮಾಡಬೇಕು. ಪಂಜೆ ಮಂಗೇಶರಾಯರ ಸ್ಮಾರಕಕ್ಕಾಗಿ ಒಂದು ಸಮಿತಿಯನ್ನು ಮಾಡಿದ್ದಾರೆ. ಅದಕ್ಕೆ ಹಿಂದೆ ವಿದ್ಯಾ ಸಚಿವರಾಗಿದ್ದ ಮಾನ ಬದರೀ ನಾರಾಯಣ್ ಅವರು ಅಧ್ಯಕ್ಷರು ಎಂದು ತಿಳಿದುಕೊಂಡಿದ್ದೇನೆ. ಆ ಸಮಿತಿಯವರುಕೂಡ ಇದಕ್ಕೆ ಬೇಕಾದಂಥ ಇನ್ನೂ ಹೆಚ್ಚಿನ ಹಣವನ್ನು ಸಂಗ್ರಹ ಮಾಡಿ ಅವರು ಹುಟ್ಟಿದ ಮನೆಯನ್ನು ಮಕ್ಕಳ ಆಸ್ಪತ್ರೆಯನ್ನಾಗಿ ಮಾಡಿ ಪಂಜೆ ಮಂಗೇಶರಾಯರ ಸ್ಮಾರಕವಾಗಿ ಇಡುವುದಕ್ಕೆ ಮನಸ್ಸು ಮಾಡಬೇಕೆಂದು ಮೊದಲಿಗೆ ಕೇಳಿಕೊಳ್ಳುತ್ತೇನೆ.

ಮಂಜೇಶ್ವರದ ಗೋವಿಂದ ಪೈ ಅವರು ರಾಷ್ಟ್ರ ಕವಿಗಳು, ಹೆಸರು ಪಡೆದವರು. ಕನ್ನಡದ ಕವಿಗಳಾದರೂ ಕೂಡ ಕೇರಳದಲ್ಲಿ ಹುಟ್ಟಿದವರು, ಮಂಜೇಶ್ವರದವರು. ಕೇರಳ ಸರ್ಕಾರದವರು ಒಂದು ಉತ್ತಮವಾದ ಸ್ಮಾರಕವನ್ನು ನಿರ್ಮಾಣ ಮಾಡುವುದಕ್ಕೆ ಅವರು ಹುಟ್ಟಿದ ಮನೆಯಲ್ಲಿ ಒಂದು ಪುಸ್ತಕ ಭಂಡಾರವನ್ನು ತೆರೆಯುವುದಕ್ಕೆ ಯೋಚನೆ ಮಾಡಿದ್ದಾರೆ. ಅದಕ್ಕೆ ಕೂಡ ನಮ್ಮ ಸರ್ಕಾರದವರು ತಮ್ಮ ಕೈಲಾದಷ್ಟು ಉದಾರವಾಗಿ ಸಹಾಯವನ್ನು ಮಾಡಿ ಮಂಜೇಶ್ವರದ ಗೋವಿಂದ ಪೈ ಅವರಿಗೂ ಉತ್ತಮವಾದ ಸ್ಮಾರಕ ಎದ್ದು ಬರುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

DEPUTY SPEEKER—*in the Chair:*

೧೯೩೦ನೇ ಇಸವಿ ಜನವರಿ ೨೬ನೇ ತಾರೀಖಿನಂದು ನಾವು ಸ್ವಾತಂತ್ರ್ಯ ಪಣವನ್ನು ಏನ್ನು ತೊಟ್ಟೆವು ಆವಾಗ ಈ ರೀತಿ ಹೇಳಿದೆವು.

"We belive that it is the inalinenable right of the Indian people as of any other people to have freedom and to enjoy the fruits of their time and for the necessities of life so that they may have full opportunity of growth. We believe also that if any Government deprives of the people of these rights and opreasses them, the people have a further right to alter it or to abolish it". ಇದು ನಾವು ಆ ಹೊತ್ತು ಕೈಕೊಂಡಂಥ ಪ್ರತಿಜ್ಞೆ ಆ ಹೊತ್ತು ನಾವು ನೀವು ಎಲ್ಲ ಸೇರಿಕೊಂಡು ಪ್ರತಿಜ್ಞೆ ಮಾಡಿದೆವು,

The system of education has tora us from our moorings and our training has made us hurt from the canes that bind us ಎಂದೂ ಪ್ರತಿಜ್ಞೆ ಮಾಡಿದೆವು. ಆದರೆ ಸ್ವಾತಂತ್ರ್ಯ ಸಿಕ್ಕಿ ೨೫ನೇ ವರ್ಷದ ರಜತ ಮಹೋತ್ಸವವನ್ನು ಆಚರಣೆ ಮಾಡಿ ನಾವು ಇನ್ನು ಒಂದು ವರ್ಷ ಮುಂದೆ ಬಂದಿದ್ದೇವೆ. ಈ ಹೊತ್ತಿಗೂ ತಮ್ಮ ಸಾಧನೆಗಳೇನು, ವಿದ್ಯಾ ಕ್ಷೇತ್ರದಲ್ಲಿ ವಿದ್ಯಾಭ್ಯಾಸ ಸಂಪ್ರದಾಯವನ್ನು ಈ ಪ್ರತಿಜ್ಞೆಯಲ್ಲಿ ಹೇಳಿರುವ ರೀತಿಯಲ್ಲಿ ಬದಲಾವಣೆ ಮಾಡುವುದಕ್ಕೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನೋಡಿದರೆ ಬಹಳ ವ್ಯಸನದಿಂದ ಹೇಳಬೇಕಾಗಿದೆ ಈ ಹೊತ್ತಿಗೂ ಕೂಡ ಡಾಕ್ಟರ್ ರಾಧಾಕೃಷ್ಣನ್ ಅವರು ಅಧ್ಯಕ್ಷರಾಗಿದ್ದಂಥ ಎಜುಕೇಷನ್ ಕಮಿಷನ್‌ನವರು ಹೇಳಿದ ಹಾಗೆ ವಿದ್ಯಾ ಕ್ಷೇತ್ರದಲ್ಲಿ ವಿದ್ಯಾಭ್ಯಾಸ ಪದ್ಧತಿಯನ್ನು ನೋಡಿದರೆ ಬರೀ ಕಾರಕೂನರನು ತಯಾರು ಮಾಡುವುದು ಮತ್ತು ನಮ್ಮ ದೇಶದಲ್ಲಿರುವಂಥ ದೊಡ್ಡ ದೊಡ್ಡ ಬಂಡವಾಳಶಾಹಿ ಸಂಸ್ಥೆಗಳಿಗೆ ನೌಕರರನ್ನು ಒದಗಿಸುವುದಕ್ಕೆ ಜನರನ್ನು ತಯಾರು ಮಾಡುವುದು ಇಷ್ಟಕ್ಕೆ ಮಾತ್ರ ವಿದ್ಯಾ ಕ್ಷೇತ್ರದಲ್ಲಿ ಇಷ್ಟು ಹಣವನ್ನು ಖರ್ಚು ಮಾಡಿ ನಡೆಸುತ್ತಿದೆ. ನಮ್ಮ ಯುವಕರು ಜನಾಂಗದ ಹೊಸ ಪೀಳಿಗೆಯನ್ನು ದೇಶಪ್ರೇಮ, ಹಾಗೂ ಜನತೆಯ ಮೇಲೆ ಮಮತೆ ಮತ್ತು ನಮ್ಮ ದೇಶದ ಭವಿಷ್ಯತ್ತನ್ನು ನಿರ್ಮಾಣ ಮಾಡುವ ಕಾರ್ಯದಲ್ಲಿ ತಮ್ಮ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸುವ ಯುವಕರನ್ನು ತಯಾರು ಮಾಡುವುದರಲ್ಲಿ ಸಂಪೂರ್ಣವಾಗಿ ವಿದ್ಯಾ ಕ್ಷೇತ್ರ ಮತ್ತು ವಿದ್ಯಾ ಇಲಾಖೆ ವಿಫಲವಾಗಿದೆ ಎಂದು ಖಡಾಖಂಡಿತವಾಗಿ ಹೇಳಬೇಕಾಗಿದೆ. ವಿದ್ಯಾ ಇಲಾಖೆಯ ಮೇಲೆ ಬಹಳಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ನಮಗೆ ಕೊಟ್ಟಿರುವ ವರದಿಯ ಮೊದಲನೇ ಪುಟದಲ್ಲಿನ ಚಾರ್ಟ್ ನೋಡಿದರೆ ಇದು ಗೊತ್ತಾಗುತ್ತದೆ. ೧೯೬೨ ರಲ್ಲಿ ೬.೬೮ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದು ೧೯೬೩—೧೯೬೪ ರಲ್ಲಿ ೬೭.೧ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಇನ್ನು ಈ ವರ್ಷದ ಬೇಡಿಕೆ ೭೮.೫ ಕೋಟಿ ರೂಪಾಯಿ ಇದೆ, ಕಳೆದ ವರ್ಷ ಖರ್ಚು ಮಾಡಿದ್ದಕಿಂತ ಈ ವರ್ಷ ಸುಮಾರು ೧೦ ಪರ್ಸೆಂಟ್ ಜಾಸ್ತಿ ಖರ್ಚು ಮಾಡಬೇಕೆಂದು ಕೇಳುತ್ತಿದ್ದಾರೆ. ಅದನ್ನು ಕೊಡುವುದಕ್ಕೆ ಈ ಮಾನ್ಯ ಸಭೆ ಆತಂಕ ಮಾಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ವಿದ್ಯಾಭ್ಯಾಸಕ್ಕೆ ಇಷ್ಟು ಹಣವನ್ನು ಖರ್ಚು ಮಾಡಿದ್ದರೂ ಅದರಿಂದ ಸಾಧಿಸಿದ್ದಾದರೂ ಏನು? ನಮಗೆ ಕೊಟ್ಟಿರುವ ವರದಿಯಲ್ಲಿ ಹೇಳಿರುವಂತೆ

ಪ್ರಾಥಮಿಕ ಶಾಲೆಗಳನ್ನು ಹೆಚ್ಚು ಮಾಡಿದ್ದಾರೆ, ೭೪೦ ಪ್ರಾಥಮಿಕ ಶಾಲೆಗಳು ಹೆಚ್ಚಾಗಿವೆ, ೩೬೪ ಸೆಕಂಡರಿ ಶಾಲೆಗಳು ಹೆಚ್ಚಾಗಿವೆ. ಟ್ರೇನ್ಡ್ ಟೀಚರ್ಸ್ ಪ್ರಾಥಮಿಕ ಶಾಲೆಗಳಲ್ಲಿ ೪೪೯೩ ಅಧ್ಯಾಪಕರನ್ನು ಜಾಸ್ತಿ ಮಾಡಿದ್ದಾರೆ ಹಾಗೂ ಸೆಕಂಡರಿ ಶಾಲೆಗಳಲ್ಲಿ ೩೧೨೬ ಅಧ್ಯಾಪಕರನ್ನು ಜಾಸ್ತಿ ಮಾಡಿದ್ದಾರೆ. ಇದು ೧೯೬೯ ರಿಂದ ೧೯೭೪ರ ವರಗಿನ ಅವಧಿಯಲ್ಲಿ ಆಗಿರುವುದು.

ಇಂದು ಅವರು ವರದಿಯಲ್ಲಿ ಕೊಟ್ಟಿರುವ ಸಂಖ್ಯೆಯನ್ನು ನೋಡಿದರೆ ಇದು ಕಡಿಮೆ ಎಂದು ನನ್ನ ಭಾವನೆ. ನಿಜವಾಗಿಯೂ ಇದರಿಂದ ಎಷ್ಟು ಸಾಧನೆ ಮಾಡಬೇಕೆಂದಿದ್ದೇವೋ ಅಷ್ಟನ್ನು ಮಾಡಲು ಇದರಿಂದ ಸಾಧ್ಯವಾಗುವುದಿಲ್ಲ. ವಿದ್ಯಾಭ್ಯಾಸದ ಇಲಾಖೆ ಬಹಳ ದೊಡ್ಡದಾಗಿದೆ ಎಂದು ನಾವು ಒಪ್ಪಿಕೊಂಡರೂ ಇದರಲ್ಲಿ ನಮ್ಮ ರಾಜ್ಯದ ಜನಸಂಖ್ಯೆಯ ಆಧಾರದ ಮೇಲೆ ಪರ್ಸೆಂಟೇಜ್ ಆಫ್ ಲಿಟರೆಸಿ ಎಂದರೆ ಓದು ಬರಹ ಬಲ್ಲವರ ಸಂಖ್ಯೆ ಏನಾದರೂ ಬೆಳೆದಿದೆಯೇ ಎಂದರೆ ಅದೂ ಕೂಡ ಅಷ್ಟೇನೂ ಹೆಚ್ಚಾಗಿಲ್ಲ. ಇದರಲ್ಲಿ ಅವರೇ ಕೊಟ್ಟಿರುವ ರಾಜ್ಯಮಟ್ಟದ ಸಂಖ್ಯೆಯನ್ನು ನೋಡಿದರೆ ೧೯೫೧ ರಿಂದ ೧೯೭೧ ರವರೆಗೆ ಅಖಿಲ ಭಾರತ ಮಟ್ಟದ ಸಂಖ್ಯೆಗಳನ್ನು ನಾನು ಸಂಗ್ರಹ ಮಾಡಿಲ್ಲ. ರಾಜ್ಯಮಟ್ಟದ ಸಂಖ್ಯೆಗಳ ಪ್ರಕಾರ ಅಕ್ಷರಸ್ತರ ಸಂಖ್ಯೆ ೧೯೫೧ ರಲ್ಲಿ ೭.೯ ರಷ್ಟು ಇತ್ತು. ೧೯೬೧ ರಲ್ಲಿ ೧೨.೯೦ರಷ್ಟು ಇತ್ತು, ೧೯೭೧ ರಲ್ಲಿ ೧೪.೪೧ ರಷ್ಟು ಇತ್ತು. ಇದನ್ನು ನೋಡಿದರೆ ಅಕ್ಷರಸ್ತರ ಸಂಖ್ಯೆಯೇನೂ ಅಧಿಕವಾಗಿರುವುದಿಲ್ಲ. ಉಳಿದಿರುವ ನಿರಕ್ಷರಸ್ಥರ ಸಂಖ್ಯೆಯಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಮೈಸೂರು ರಾಜ್ಯದ ಮಟ್ಟಿಗೆ ನೋಡುವುದಾದರೆ,

೧೯೭೧ ರಲ್ಲಿ ೧ ರಿಂದ ೪ನೇ ವರ್ಗದವರೆಗೆ ಓದುವ ಮಕ್ಕಳು	ಶೇಕಡಾ ೬೪ ರಷ್ಟು ಇದೆ
೫ ರಿಂದ ೮ ನೇ ವರ್ಗದವರೆಗೆ	ಶೇಕಡಾ ೩೨ ರಷ್ಟು ಇದೆ
ಹಾಗೆ ೯ ರಿಂದ ೧೧ನೇ ವರ್ಗದವರೆಗೆ	ಶೇಕಡಾ ೧೪ ರಷ್ಟು ಇದೆ

ಇಷ್ಟು ಮಾತ್ರ ಶಾಲೆಗೆ ಹೋಗುವ ಮಕ್ಕಳು. ಇದಲ್ಲದೆ ನಮ್ಮಲ್ಲಿ ವಿದ್ಯಾಭ್ಯಾಸ ಕೇವಲ ಕೆಲವರ ಕೈಯ್ಯಲ್ಲಿ ಉಳಿದಿದೆ. ಸಮಾಜದಲ್ಲಿ ಇಂದು ಶಾಲೆಗಳು ಯಾವ ರೀತಿ ನಡೆಯುತ್ತಿವೆ ಮತ್ತು ಇದರ ವೇಸ್ಟ್ ಹಾಗೂ ಸ್ಟೇಗ್ನಿಂಗ್ ಎನ್ನುವ ವಿವರಗಳನ್ನೆಲ್ಲಾ ಅವರ ವರದಿಯಲ್ಲಿ ಅಂಕೆ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಒಂದನೇ ಕ್ಲಾಸಿನಲ್ಲಿ ಸೇರಿ ಓದುವ ಹುಡುಗರು ಎರಡನೇ ಕ್ಲಾಸಿನವರಗೆ ಓದಲು ಮುಂದೆ ಬರಬೇಕು. ಶ್ರೀಮಂತರ ಮಕ್ಕಳು ಹಾಗೂ ಸ್ವಲ್ಪ ಅನುಕೂಲ ಇರುವವರು ಅವರ ಮಕ್ಕಳನ್ನು ಶಾಲೆಗೆ ಕಳುಹಿಸಿ ಹೇಗೋ ವಿದ್ಯಾಭ್ಯಾಸ ಮಾಡಿಸುತ್ತಾರೆ. ಆದರೆ ಹಳ್ಳಿಗಾಡಿನ ಜನರು ಬಡವರಾಗಿರುವಾಗ ಅವರು ತಮ್ಮ ಮಕ್ಕಳನ್ನು ಕಳುಹಿಸಲು ಇಷ್ಟಪಡುವುದಿಲ್ಲ. ಅವರಿಗೆ ಮನೆಯಲ್ಲಿ ಮಕ್ಕಳು ಇದ್ದರೆ ಅನುಕೂಲ ಎಂದು ಹೀಗೆ ಮಾಡುತ್ತಿರುವುದರಿಂದ ಬಡ ಜನರ ಮಕ್ಕಳು ವಿದ್ಯಾವಂತರಾಗಲು ಅವಕಾಶಗಳು ಸಿಗುತ್ತಿಲ್ಲ. ಶ್ರೀಮಂತರ ಮಕ್ಕಳು ಹೇಗೋ ವಿದ್ಯಾವಂತರಾಗುತ್ತಾರೆ. ಸಮಾಜದಲ್ಲಿ ಇಂತಹ ಬಡ ಜನರೂ ಇರುವುದರಿಂದ ಇವರ ಮಕ್ಕಳಿಗೆ ಶಾಲೆಯಲ್ಲಿ ಸೇರುವುದೇ ಕಷ್ಟವಾಗುತ್ತದೆ. ಇಂತಹ ಒಂದು ಪದ್ಧತಿ ಇರುವುದರಿಂದ ಇದನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವೇ ಎನ್ನುವುದನ್ನು ನಾವು ವಿಚಾರ ಮಾಡಬೇಕು. ಬಡ ಜನರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಸರಿಯಾದ ವಾತಾವರಣ ಅವರ ಮನೆಗಳಲ್ಲಿ ಇಲ್ಲ. ಇಲ್ಲಿ ಒಂದು ರೀತಿಯಾದ ನಿರ್ಬಂಧವಿರುವುದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುವುದು ಪ್ರೀ ಪ್ರೈಮರಿ ಹಾಗೂ ಪ್ರೈಮರಿ ಲೆವಲ್‌ನಲ್ಲಿ ಮೂಲಭೂತವಾದ ಬದಲಾವಣೆ ಮಾಡಬೇಕು ಎಂದು ಕೇಳುತ್ತೇನೆ. ಇದಕ್ಕಾಗಿ ಬಾಲವಾಡಿಗಳನ್ನು ಪ್ರತಿಯೊಂದು ಹಳ್ಳಿಗಳಲ್ಲೂ ತೆರೆಯುವುದು ಮುಖ್ಯ. ಇದರಿಂದ ವ್ಯವಸಾಯಗಾರರ ಮಕ್ಕಳು ಹಾಗೂ ಕೂಲಿಗಾರರ ಮಕ್ಕಳು ಅಕ್ಷರಸ್ಥರಾಗಲು ಒಂದು ಅವಕಾಶ ಸಿಗುತ್ತದೆ. ಇದಕ್ಕೆ ಸರಕಾರ ಸಾಕಷ್ಟು ಪ್ರೋತ್ಸಾಹ ಒದಗಿಸಬೇಕು ಮತ್ತು ಉಚಿತವಾಗಿ ಆಹಾರವನ್ನು ಒದಗಿಸಬೇಕು. ಇಲ್ಲಿಂದ ವಿದ್ಯಾವಂತರಾದ ಮೇಲೆ ಮುಂದೆ ಸೆಕೆಂಡರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಪಡೆಯಲು ಹೆಚ್ಚು ಆಸಕ್ತಿ ವಹಿಸುವ ಹಾಗೆ ಪ್ರಯತ್ನ ಮಾಡಬೇಕು. ಪ್ರತಿಯೊಂದು ಕಡೆ ನೇಬರ್‌ಹುಡ್ ಸ್ಕೂಲ್ಸ್ ಎಂದರೆ ಪ್ರತಿ ಹಳ್ಳಿಯಲ್ಲಿರುವ ಮನೆಗಳ ಹತ್ತಿರವೇ ಶಾಲೆಗಳು ಇರುವಂತೆ ಮಾಡಬೇಕು ಏಂದರೆ ಎಲ್ಲ ಹಳ್ಳಿಗಳಲ್ಲೂ ಪಂಚಾಯಿತಿಗಳಿರುತ್ತವೆ. ಇದರ ಸಮೀಪದಲ್ಲೇ ಒಂದು ಶಾಲೆ ಇರುವಂತೆ ಮಾಡಿದರೆ ಹಳ್ಳಿಯ ಮಕ್ಕಳು ವಿದ್ಯಾವಂತರಾಗಲು ಒಂದು ಅವಕಾಶ ಸಿಗುತ್ತದೆ. ಇದಕ್ಕಾಗಿ ಪ್ರೈಮರಿ ಶಾಲೆಗಳ ವ್ಯವಸ್ಥೆಗಾಗಿ ಇನ್ನೂ ಸ್ವಲ್ಪ ಹೆಚ್ಚು ಹಣ ಕೊಟ್ಟು ಇದನ್ನು ವ್ಯವಸ್ಥೆ ಮಾಡಬೇಕು ಇದೂ ಅಲ್ಲದೆ ಎಜುಕೇಷನ್ ರಿಫಾರಂಸ್ ಕಮಿಷನ್ ನವರು ಜಾಬ್ ಓರಿಯಂಟೆಡ್ ಎಜುಕೇಷನ್ ಇರಬೇಕು ಎಂದು ಶಿಫಾರಸು ಮಾಡಿದ್ದಾರೆ. ಇದಕ್ಕೆ ಉದಾರವಾದ ಸಹಾಯಗಳನ್ನು ಕೊಡುತ್ತೇವೆಂದೂ ಹೇಳಿದ್ದಾರೆಂದು ಕೇಳುತ್ತೇವೆ. ಇದನ್ನು ಮಾಡುವುದಕ್ಕಾಗಿ ಇಂದು ನಮ್ಮ ಮುಂದೆ ಇಂತಹ ಹಣದ ಬೇಡಿಕೆಗಳನ್ನೂ ಇಟ್ಟಿದ್ದಾರೆ.

ಇನ್ನು ನಮ್ಮ ರಾಜ್ಯದಲ್ಲಿ ಭೂಸುಧಾರಣೆ ಮಸೂದೆ ಮಂಜೂರು ಮಾಡಿದರು. ಇದರಿಂದ ಪ್ರತಿಯೊಂದು ಹಳ್ಳಿಯಲ್ಲೂ ನೂರಾರು ಎಕರೆಗಳಷ್ಟು ಜಮೀನು ವ್ಯವಸಾಯಕ್ಕೆ ಈಗ ಸಿಗಬಹುದು, ಸುಮಾರು ನಾಲ್ಕು ಲಕ್ಷ ಎಕರೆಗಳಿಗಿಂತ ಹೆಚ್ಚು ಭೂಮಿ ಸಿಗಬಹುದು ಎಂದು ನಮ್ಮ ಕಂದಾಯದ ಸಚಿವರು ಸರ್ಕಾರದ ಪರವಾಗಿ ಅಂಕೆ ಸಂಖ್ಯೆಗಳನ್ನು ಕೊಟ್ಟಿದ್ದಾರೆ ಇದನ್ನು ವಿತರಣೆ ಮಾಡುವಾಗ ಹಳ್ಳಿಗಳಲ್ಲಿರುವ ಎಲ್ಲಾ ಶಾಲೆಗಳಿಗೂ ಐದು ಇಲ್ಲವೆ ಹತ್ತು ಎಕರೆಗಳಷ್ಟು ಭೂಮಿಯನ್ನು ಆಯಾ ಶಾಲೆಗೆ ಕೊಟ್ಟರೆ ಅಲ್ಲಿರುವ ಹುಡುಗರಿಗೆ ವ್ಯವಸಾಯಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ಎಂದರೆ ಹೆಚ್ಚು ಇಳುವರಿ ಬರುವಂತಹ ಯೋಜನೆಗಳನ್ನು, ಕುರಿಸಾಕಾಣಿಕೆ ಹಾಗೂ ಕೋಳಿ ಸಾಕಾಣಿಕೆ ಕೇಂದ್ರಗಳನ್ನು ಮಾಡಲು ಸಹಾಯವಾಗುತ್ತದೆ, ಇದಕ್ಕಾಗಿ ಸಹಕಾರಿ ಸಂಘಗಳನ್ನು ಮಾಡಿಕೊಂಡು ಅವುಗಳ ಮೂಲಕ ಹಳ್ಳಿಗಾಡಿನ ಜನಕ್ಕೆ ಅನುಕೂಲವಾಗುವಂತೆ ಇಲ್ಲಿ ಒಂದೊಂದು ತರಬೇತಿ ಕೇಂದ್ರಗಳನ್ನು ಮಾಡಬಹುದು. ಇದರಲ್ಲಿ ಹಳ್ಳಿಗಾಡಿನ ಜನರ ಜೀವನ ಹೇಗಿದೆ ಇವರ ಕಷ್ಟಗಳನ್ನು ತಿಳಿದುಕೊಂಡು ಅದಕ್ಕೆ ತಕ್ಕಂತೆ ಇಲ್ಲಿ ತರಬೇತಿ ಕೊಟ್ಟು, ಹಳ್ಳಿ ಜನರನ್ನು ಮುಂದಕ್ಕೆ ತರುವಂತಹ ಒಂದು ಯೋಜನೆಯನ್ನು ಈಗಿನಿಂದಲೇ ಮಾಡಬೇಕೆಂದು ಹೇಳುತ್ತೇನೆ. ಇದಕ್ಕಾಗಿ ಇಂದು ಸರ್ಕಾರದ ವಶಕ್ಕೆ ಎಷ್ಟೋ ಜಮೀನುಗಳು ಬರುವುದರಿಂದ ಇದರಲ್ಲಿ ಸ್ವಲ್ಪ ಜಮೀನನ್ನು ಇಂತಹ ಶಾಲೆಗಳಿಗೆ ಕೊಟ್ಟು ಇದರ ಮೂಲಕ ವ್ಯವಸಾಯವನ್ನು ಮಾಡಲಿಕ್ಕೆ ಸ್ವಲ್ಪ ಗಮನ ಕೊಡಬೇಕು. ಇದರ ಜೊತೆಗೆ ಸೆಕೆಂಡರಿ ಶಾಲೆಗಳಲ್ಲಿ ಶ್ರೀಮತಿ ಮಂಡಿಮನ್‌ರವರು ಹೇಳಿದ ಹಾಗೆ ವರ್ಕ್‌ಷಾಪ್‌ಗಳನ್ನು ಮಾಡಿ ಇದರ ಮೂಲಕ ವೊಕೇಷನಲ್ ಟ್ರೈನಿಂಗ್ ಕೊಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ಹೇಳುತ್ತೇನೆ.

ಖಾಸಗೀ ವಿದ್ಯಾ ಶಾಲೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಖಾಸಗೀ ಕ್ಷೇತ್ರದಲ್ಲಿ ಇಂದು ಅನೇಕ ಶಾಲೆಗಳು ನಡೆಯುತ್ತಿವೆ ಹಳ್ಳಿಗಳಲ್ಲಿ ಹಾಗೂ ಚಿಕ್ಕ ಪಟ್ಟಣಗಳಲ್ಲಿ ಸರ್ಕಾರದ ನೆರವು ಪಡೆದುಕೊಂಡು ಖಾಸಗಿ ಶಾಲೆಗಳು ಕೆಲವು ಉತ್ತಮವಾಗಿ ಒಂದು ರೀತಿಯಲ್ಲಿ ಕೆಲಸಗಳನ್ನು ನಡೆಸಿಕೊಂಡು ಬರುತ್ತಿವೆ. ಮತ್ತು ಇದರಿಂದ ಸ್ವಲ್ಪಮಟ್ಟಿಗೆ ಪ್ರಯೋಜನವೂ ಆಗಿದೆ. ಆದರೆ ಬೆಂಗಳೂರು ನಗರದಲ್ಲಿರುವ ಕೆಲವು ಖಾಸಗಿ ಶಾಲೆಗಳನ್ನು ನೋಡಿದರೆ ನಿಜವಾಗಿಯೂ ಅವು ಶಾಲೆಗಳು ಎಂದು ಹೇಳಲು ಸಾಧ್ಯವಿಲ್ಲ ಸರ್ಕಾರಕ್ಕೆ ಇದರ ಅರಿವು ಕೂಡ ಇಲ್ಲ ಎಂದು ಕಾಣುತ್ತೆ. ಈ ಖಾಸಗಿ ಶಾಲೆಗಳು ವಿದ್ಯೆ ಕಲಿಸುತ್ತಿಲ್ಲ, ವಿದ್ಯಾರ್ಥಿಗಳನ್ನು ಹಾಗೂ ಶಿಕ್ಷಕರನ್ನು ಶೋಷಣೆ ಮಾಡುತ್ತಿವೆ. ಇಲ್ಲಿ ವಿದ್ಯಾರ್ಥಿಗಳಿಗೆ ದುರ್ಬುದ್ಧಿ ಕಲಿಸುತ್ತಿದ್ದಾರೆ. ಇಂತಹ ಶಾಲೆಗಳಿಂದ ವಿದ್ಯೆ ಕಲಿತು ಬರುವಂತಹ ಮಕ್ಕಳು ನಿಜವಾಗಿಯೂ ವಿದ್ಯಾವಂತರಾಗುತ್ತಾರೆಯೋ ಎನ್ನುವ ಒಂದು ಅನುಮಾನವೂ ಬರುತ್ತದೆ. ಇದಲ್ಲದೆ ಇಂದು ಸರ್ಕಾರದವರೇನೋ ಶಿಕ್ಷಕರುಗಳಿಗೆ ನೇರವಾಗಿ ಚೆಕ್ಕು ಮೂಲಕ ಕಳುಹಿಸುತ್ತೇವೆಂದು ಹೇಳಬಹುದು, ಆದರೆ ಚೆಕ್ಕುಗಳನ್ನು ಕಳುಹಿಸುವಾಗ ಇವರ ಎಂಡಾರ್ಸ್‌ಮೆಂಟುಗಳಿಗೆ ಮೊದಲೇ ಶಿಕ್ಷಕರುಗಳ ರಜುವನ್ನು ಪಡೆದಿರುವುದರಿಂದ ಇದರಿಂದೇನೂ ಪ್ರಯೋಜನವಾಗುತ್ತಿಲ್ಲ. ಇನ್ನು ರೂರಲ್ ಪಾಪ್ಯುಲೇಷನ್‌ಗೆ ಅನುಸಾರವಾಗಿ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲ. ಹಳ್ಳಿಗಾಡಿನ ಜನತೆಗೆ ನೀವು ಮಾಡುತ್ತಿರುವ ಯೋಜನೆಗಳು ಏನೇನು ಸಾಲದು. ಇಂದು ವಿದ್ಯಾಭ್ಯಾಸ ರಾಷ್ಟ್ರದಲ್ಲಿ ಉನ್ನತ ಮಟ್ಟದಲ್ಲಿ ನಿರ್ಮಾಣ ಮಾಡಬೇಕಾದುದು ಒಂದು ಮುಖ್ಯ ಅಂಗ. ಇದನ್ನು ಖಾಸಗಿಯವರಿಗೇ ಬಿಡುವುದು ತಪ್ಪು. ನಮ್ಮ ಮೈಸೂರು ದೇಶದಲ್ಲಿ ವಿದ್ಯಾಭ್ಯಾಸವನ್ನು ಪೂರ್ತಿಯಾಗಿ ರಾಷ್ಟ್ರೀಕರಣ ಮಾಡಬೇಕು ಎಂದರೆ ಪ್ರೈಮರಿ ಮತ್ತು ಸೆಕಂಡರಿ ಮಟ್ಟದಲ್ಲಾದರೂ ರಾಷ್ಟ್ರೀಕರಣ ಮಾಡುವುದಕ್ಕೆ ಸಾಧ್ಯವಿಲ್ಲವೆ ಎನ್ನುವುದನ್ನು ಸರ್ಕಾರ ವಿಚಾರ ಮಾಡಬೇಕು. ಇನ್ನು ನಮ್ಮ ರಾಜ್ಯದಲ್ಲಿ ನಾನ್ ಗ್ರಾಂಟ್ ರಿಸೀವಿಂಗ್ ಕಾಲೇಜುಗಳು ಎಂದು ಕೆಲವು ಕಡೆ ಇವೆ. ಇವು ಸಿಕ್ಕಾಪಟ್ಟೆ ಕ್ಯಾಪಿಟೇಷನ್ ಫೀ ಎಂದು ವಸೂಲು ಮಾಡುತ್ತಿವೆ. ಇದನ್ನು ತಪ್ಪಿಸಲು ಸರ್ಕಾರವೇ ಇದನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲವೇ. ಇದನ್ನು ವಿಚಾರ ಮಾಡಬೇಕು. ಸರ್ಕಾರದಿಂದ ಗ್ರಾಂಟುಗಳನ್ನು ಪಡೆಯುವ ಕಾಲೇಜುಗಳೂ ಇವೆ, ಗ್ರಾಂಟುಗಳು ಪಡೆಯದೇ ಇರುವಂತಹ ಕಾಲೇಜುಗಳೂ ಇವೆ ಇದರಲ್ಲಿ ಅಧ್ಯಾಪಕರುಗಳಿಗೂ ವಿದ್ಯಾರ್ಥಿಗಳಿಗೂ ಒಂದು ರೀತಿಯಾದ ಹೊಂದಾಣಿಕೆಯೇ ಇರುವುದಿಲ್ಲ. ಇದರ ಬಗ್ಗೆ ನನಗೂ ಕೂಡ ಬೇಕಾದಷ್ಟು ಪತ್ರಗಳು ಬಂದಿವೆ. ಇದರ ವಿವರಗಳನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ನಾನು ಮಾನ್ಯ ಮಂತ್ರಿಗಳ ಕಡೆಗೆ ಕಳುಹಿಸಿಕೊಡುತ್ತೇನೆ. ಕೆಲವು ಕಡೆ ಸರ್ಕಾರದ ಆರ್ಡರುಗಳಿದ್ದರೂ ಅದನ್ನು ಕೂಡ ಶಾಲೆಗಳಲ್ಲಿ ಇಂಪ್ಲಿಮೆಂಟು ಮಾಡುವುದಿಲ್ಲ. ಫೀ ರಿಜಿಷ್ಟರುಗಳನ್ನೇ ಬದಲಾವಣೆ ಮಾಡುತ್ತಾರೆ. ಕೆಲವು ಕಡೆ ಪಿ ಎಫ್ ಕಾಂಟ್ರಿಬ್ಯೂಷನ್ ಎಷ್ಟು ಕೊಡಬೇಕೋ ಅದನ್ನೂ ಕೊಡುತ್ತಿಲ್ಲ. ಇಂತಹ ಖಾಸಗಿ ಶಾಲೆಗಳಲ್ಲಿ ಓದಲು ನಮ್ಮ ಕಡೆಯಿಂದ ಸರ್ಟಿಫಿಕೇಟುಗಳನ್ನು ಪಡೆದುಕೊಂಡು ಇಲ್ಲಿ ಅನುಕೂಲಗಳಿದ್ದರೂ ಅದನ್ನು ಕಾನೂನಿನಂತೆ ವಿದ್ಯಾರ್ಥಿಗಳಿಗೆ ಕೊಡುತ್ತಿಲ್ಲ. ಇದು ವಿದ್ಯಾಭ್ಯಾಸದ ಆಡಳಿತದಲ್ಲಿ ಹೀಗೆ ಏನೇನೋ ತೊಡಕುಗಳು ಕಾನೂನಿನಲ್ಲಿದೆ ಇದನ್ನು ತಿದ್ದುಪಡಿ ಮಾಡಬೇಕೆಂದೂ ಹೇಳುತ್ತಾರೆ. ಇದಕ್ಕಾಗಿ ನಾನು ಸಲಹೆ ಮಾಡುವುದು ಸರಿಯಾಗಿ ಕೆಲಸ ಮಾಡದೆ ಇರುವಂತಹ ಖಾಸಗಿ ಶಾಲೆಗಳನ್ನು ಸರ್ಕಾರವೇ

ವಹಿಸಿಕೊಂಡು ಆದನ್ನು ಮುಂದುವರಿಸುವುದು ಅಗತ್ಯ. ಇಂದು ವಿದ್ಯಾಕ್ಷೇತ್ರದಲ್ಲಿ ನಮ್ಮ ಮಾನ್ಯ ವಿದ್ಯಾ ಮಂತ್ರಿಗಳಿಗೆ ತಿಳಿದಿರುವ ಹಾಗೆ ವರ್ಣಾಶ್ರಮ ಧರ್ಮ, ಮಾನವೀಯತೆ ಹಾಗೂ ಅನೇಕಂಪ ಇರುವವರು ಇರಬೇಕೆಂದು ಹೇಳುತ್ತಾರೆ. ಆದರೆ ಇಂದು ನಾವು ನೋಡುತ್ತಿರುವುದು ಶ್ರೀಮಂತರು ಶ್ರೀಮಂತರಾಗಿಯೇ ಮುಂದುವರಿಯುತ್ತಿದ್ದಾರೆ, ಬಡವರ ಇನ್ನಷ್ಟು ಬಡವಾರಾಗಿಯೇ ಮುಂದುವರಿದಿದ್ದಾರೆ. ಇದು ತಮಗೂ ಗೊತು. ಇದನ್ನು ಕಾರ್ಯ ರೂಪಕ್ಕೆ ತರಬೇಕಾದರೆ ಇದಕ್ಕೆ ತಕ್ಕ ಅಸ್ತ್ರ ತಮ್ಮ ಕೈಯಲ್ಲೇ ಇದೆ.

ಆದನ್ನು ಉಪಯೋಗ ಮಾಡಿ ವಿದ್ಯಾಕ್ಷೇತ್ರದಲ್ಲಿ ಆಮೂಲಾಗ್ರವಾದ ಬದಲಾವಣೆ ಮಾಡಬೇಕು ಮತ್ತು ಈಗಿರತಕ್ಕಂಥ ಮೂಢನಂಬಿಕೆಯನ್ನು ಮತ್ತು ಅಂಧ ವಿಶ್ವಾಶವನ್ನು ಹೋಗಲಾಡಿಸಬೇಕಲ್ಲದೆ ಮುಖ್ಯವಾಗಿ ಪ್ರಜಾಪ್ರಭುತ್ವಕ್ಕೆ ಅನುಗುಣವಾದ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

3-30 P.M.

ಇನ್ನು ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಒಂದೆರಡು ವಿಷಯಂಗಳನ್ನು ಹೇಳಬೇಕಾಗಿದೆ. ಈ ವಿಶ್ವವಿದ್ಯಾನಿಲಯದ ಬಗ್ಗೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ಅದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು ಎಂದು ಹೇಳಿದರು. ಅದನ್ನು ಮಾಡಿ ಆದರೆ ನ್ಯಾಯಾಂಗ ವಿಚಾರಣೆ ಮಾಡುವುದು ಯಾವುದರ ಬಗ್ಗೆ ಎಂಬುದು ಸ್ಪಷ್ಟವಾಗಿರಬೇಕು. ಇಂದು ಮೈಸೂರು ವಿಶ್ವವಿದ್ಯಾನಿಲಯ ಮಾತ್ರವಲ್ಲ, ಬೇರೆ ವಿಶ್ವವಿದ್ಯಾನಿಲಯಗಳಲ್ಲಿಯೂ ಸಹ ಇಂದು ಗುಂಪುಗಾರಿಕೆ, ಜಾತೀಯತೆ ಎಂಬುದು ಅಧ್ಯಾಪಕ ವರ್ಗದಲ್ಲಿ ಜಾಸ್ತಿಯಾಗಿದೆ. ಆದರೆ ಇದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾತ್ರ ತುಟ್ಟತುದಿಗೇರಿದೆ. ಈ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಿಸುವುದರ ಮೂಲಕ ಇದನ್ನೆಲ್ಲಾ ಕೊನೆಗಾಣಿಸಬೇಕು. ಸಾಧ್ಯವಾದರೆ ಉಪಕುಲಪತಿಗಳನ್ನು ಬದಲಾವಣೆ ಮಾಡುವ ಕ್ರಮವನ್ನು ಕೈಕೊಳ್ಳಬೇಕು. ಅದು ಅಟಾನಮಿ ಬಾಡಿ ಆಗಿರಬಹುದು, ಆದರೆ ಅಲ್ಲಿಯ ಆಡಳಿತ ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಯದಿದ್ದರೆ, ಅದರ ಒಂದು ಆಡಳಿತ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬಂದರೆ, ಅದನ್ನು ತಡೆಗಟ್ಟುವುದು ಸರ್ಕಾರದ ಕರ್ತವ್ಯ ಮತ್ತು ಈ ಮನೆಯ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಈ ವರ್ಷ ಅಂದರೆ ೧೯೭೩-೭೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ೧೨೦ ಜನ ವಿದ್ಯಾರ್ಥಿಗಳನ್ನು ವಿವಿಧ ಪೋಸ್ಟ್ ಗ್ರಾಜುಯೆಟ್ಸ್ ಕೋರ್ಸಸ್‌ಗೆ ತೆಗೆದುಕೊಳ್ಳಲಾಯಿತು. ಆ ಬಗ್ಗೆ ಅಖಿಲಭಾರತ ವಿದ್ಯಾರ್ಥಿ ಫೆಡರೇಷನ್ನಿನ ಕರ್ನಾಟಕ ಶಾಖೆಯವರು ಕೊಟ್ಟಿರುವ ವರದಿ ನನ್ನ ಹತ್ತಿರವಿದೆ. ಅದನ್ನು ತಮ್ಮ ಕಡೆಗೆ ಕಳಿಸಿಕೊಡುತ್ತೇನೆ. ೧೨೦ ಜನರನ್ನು ಆಯ್ಕೆ ಮಾಡಿದ ವಿಚಾರದಲ್ಲಿ ಬಹಳಷ್ಟು ಅತೃಪ್ತಿ ಬಂದಿದೆ, ಅವರ ಮಾತಿನಲ್ಲಿಯೇ ಹೇಳುವುದಾದರೆ :—

> "Seats which should have eben given to Scheduled Caste, Scheduled Tribe and socially and economically backward groups, as per reservations made in the statutory rules, have been devoured by the people with influenee and nearly 1000 students who would have otherwise got admission on the basis of merit in their respective grouds have been rejected. The most afsected are the st6dents coming form villages, or the children or poor peasants, school teachers, clerks and Police Constables and factory workers. The persons who took the advantage are the children of big officers, Professors or Readers, Syndicate or Senate members, etc .....

ಇದು ಬಹಳ ಗಂಭೀರವಾದ ಆರೋಪ. ಇದನ್ನು ತನಿಖೆ ಮಾಡಬೇಕು. ಈ ರೀತಿ ವಿದ್ಯಾರ್ಥಿಗಳು ಚಳುವಳಿ ನಡೆದಾಗ ಅಲ್ಲಿ ಏನೋ ಗೊಂದಲವಾಗುತ್ತದೆ ಎಂದು ತಿಳಿದುಕೊಂಡು, ಈ ಮೊದಲು Philosophy-30, Botany-11, Law-11, History-9, Indology-7, Chemistry-4, Physics-2, Education-2, and one each in Biochemistry and Bachelor of Library Science.

ಎಂದು ಏನು ಸೀಟುಗಳನ್ನು ಹಂಚಿಕೆ ಮಾಡಿದರು. ಅವರನ್ನೆಲ್ಲಾ ಅರ್ಹ ವಿದ್ಯಾರ್ಥಿಗಳಲ್ಲ ಎಂದು ಕಿತ್ತು ಹಾಕಿದರು. ಇದರಿಂದಲೇ ನಮಗೆ ಗೊತ್ತಾಗುತ್ತದೆ; ಏನೆಂದರೆ ಆಯ್ಕೆ ಮಾಡುವಾಗ ವಿನೇ ಗೊಂದಲ ಮಾಡಿದ್ದಾರೆ ಎಂದು. ಈ ರೀತಿ ಆಯ್ಕೆ ಮಾಡಿದ ಮೇಲೆ ಕಿತ್ತುಹಾಕಿದ್ದರಿಂದ ಪ್ರಭಾವಶಾಲಿ ವಿದ್ಯಾರ್ಥಿಗಳು ಚಳುವಳಿ ಮಾಡಿದರು. ನಾವು ಅರ್ಹ ವಿದ್ಯಾರ್ಥಿಗಳಲ್ಲ ಎಂದು ಹೇಳಿದರೆ ನಾವು ಕೋರ್ಟಿಗೆ ಹೋಗುತ್ತೇವೆಂದು ಹೆದರಿಕೆ ಹಾಕಿದಮೇಲೆ ಅವರೊಂದಿಗೆ ಚೌಕಾಸಿ ನಡೆಸಿ, ಮಾತುಕತೆ ನಡೆಸಿ, ಅವರಿಗೂ ಸೀಟ್‌ಗಳನ್ನು ಕೊಟ್ಟರು, ಅನರ್ಹ ವಿದ್ಯಾರ್ಥಿಗಳನ್ನು ಸಹ ಇಟ್ಟುಕೊಂಡರು. ಆದರೆ ಇದು ಸರಿಯಾದ ಕ್ರಮವಲ್ಲ. ವಿದ್ಯಾರ್ಥಿಗಳನ್ನು ಒಳ್ಳೆಯ ನಾಗರೀಕರನ್ನಾಗಿ ಬೆಳೆಸುವುದು ವಿಶ್ವವಿದ್ಯಾನಿಲಯಗಳ ಕರ್ತವ್ಯ. ಆದರೆ ಈ ರೀತಿಯೆಲ್ಲಾ ಅಲ್ಲಿ ನಡೆದರೆ ಮುಂದೆ ನಮ್ಮ ವಿದ್ಯಾರ್ಥಿಗಳನ್ನು ಉತ್ತಮ ನಾಗರೀಕರನ್ನಾಗಿ ಬೆಳೆಸುವುದು ಕಂಟಕಪ್ರಾಯವಾಗಬಹುದೆಂದು ನಾನು ಹೇಳಬೇಕಾಗುತ್ತದೆ, ಈ ವಿಚಾರದಲ್ಲಿ ಬಂದಿರುವ ಕೆಲವು ಪತ್ರಗಳನ್ನು ತಮ್ಮ ಕಡೆಗೆ ಮಾನ್ಯ ಸಭಾಪತಿಯವರ ಮೂಲಕ ಕಳಿಸಿಕೊಡುತ್ತೇನೆ. ಅದನ್ನು ತಾವು ವಿಚಾರಣೆ ಮಾಡಿಸಬೇಕು. ದೇವನೂರು ಮಹದೇವ ಎಂಬುವರು ಹರಿಜನ ವಿದ್ಯಾರ್ಥಿಗಳ ಬಗ್ಗೆ ಅಲ್ಲಿ ಯಾವರೀತಿ ಅನ್ಯಾಯವಾಗಿದೆ ಎಂಬ ಬಗ್ಗೆ ಈ ಒಂದು ಪತ್ರವನ್ನು ಬರೆದಿದ್ದಾರೆ: ಅದನ್ನು ಸಹ ತಮಗೆ ಕಳಿಸಿಕೊಡುತ್ತೇನೆ. ಅದೇ ರೀತಿ ಹೊಳೆನರಸೀಪುರದ ಅನಂತಪದ್ಮನಾಭಯ್ಯ ಎಂಬುವರು ತಮ್ಮ ಮಗಳಾದ ಎಚ್. ಕೆ. ಸಾವಿತ್ರಿ ಎಂಬುವರಿಗೆ ಯಾವ ರೀತಿ ಅನ್ಯಾಯವಾಗಿದೆ ಎಂಬ ಬಗ್ಗೆ ಒಂದು ಪತ್ರವನ್ನು ಬರೆದಿದ್ದಾರೆ: ಅದನ್ನು ತಮಗೆ ಕಳಿಸಿಕೊಡುತ್ತೇನೆ. ಒನ್ನೊಂದು ಮುಖ್ಯವಾದ ಅಂಶವೆಂದರೆ, ಅಲ್ಲಿ ಬಾಟನಿಯಲ್ಲಿ ರೀಡರ್ ಆಗಿರುವ ರಾಮಲಿಂಗಂ ಅವರ ಮೇಲೆ ಏನು ದಾಳಿ ನಡೆಯಿತು ಅದರ ಬಗ್ಗೆ ಇಲ್ಲಿಯವರೆಗೆ ತನಿಖೆಯಾಗಿಲ್ಲ: ಆದರೆ ಅವರನ್ನೇ ಆ ಹುದ್ದೆಯಿಂದ ಕಿತ್ತುಹಾಕುವುದಕ್ಕೆ ನೋಟೀಸ್ ಕೊಟ್ಟಿದ್ದಾರೆ ಇವರು ಮಾಡಿದಂತಹ ಅಪರಾಧವಾದರೂ ಏನು ? ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೈಂಟಿಫಿಕ್ ಸೋಷಿಯಲಿಜಂ ಬಗ್ಗೆ ಒಂದು ಅಧ್ಯಯನ ಪೀಠವನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಕೋಣಂದೂರು ಲಿಂಗಪ್ಪನವರು ಮತ್ತು ಮಾನ್ಯ ಬೈರೇಗೌಡರು ಒಂದು ಠರಾವನ್ನು ತಂದರು. ಆ ಸಂದರ್ಭದಲ್ಲಿ ಇದರ ಬಗ್ಗೆ ಶ್ರೀಮಾನ್ ರಾಮಲಿಂಗಂ ಅವರ ಸಲಹೆಯನ್ನು ಪಡೆಯಬೇಕೆಂದಿದ್ದಾಗ, Sri R. A. Razi, Hoad of Department of Botany ಅವರು ರಾಮಲಿಂಗಂ ಅವರ ಬಗ್ಗೆ ಈ ರೀತಿ ಅಭಿಪ್ರಾಯ ಕೊಟ್ಟರು:—

> "I have, on one or two occasions heard Dr. A. Ramalingam advocating communist ideas in the class : and during the discussions of seminar topics also he has given expression to them.

ಇದು ಅಂದರೆ ಕಮ್ಯುನಿಸ್ಟ್ ಪಾರ್ಟಿಯ ಐಡಿಯಾಗಳಿರುವವರ ಅಭಿಪ್ರಾಯ ಪಡೆಯಬಾರದು ಎಂದು ಅವರು ಆ ರೀತಿ ಹೇಳಿರಬಹುದು. ಅಂದರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಬ್ಬರು ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಕೂಡ ಅವಕಾಶ ಇಲ್ಲ ಎನ್ನುವುದಾದರೆ, ಅವರಿಗಿಂತ ದೊಡ್ಡ ಬ್ರಾಹ್ಮಣರು ಬೇರೆ ಯಾರು ಇಲ್ಲ ಎಂದು ನಾನು ಹೇಳುತ್ತೇನೆ.

MR. DEPUTY SPEAKER.—For the lnformation of the Hon. Member as early as 1942, the plays of Mr. Bernard Shaw were thrown out form the labraries in U. P. on the very ground.

SRI B. V. KAKKILAYA.—We do not want to go that way.
ರಾಮಲಿಂಗಂ ಅವರ ಮೇಲೆ ಹಲ್ಲೆ ನಡೆದ ಸಂದರ್ಭದಲ್ಲಿ ಶ್ರೀಮತಿ ರತೀರಾವ್ ಎಂಬ ವಿದ್ಯಾರ್ಥಿನಿ ಮೇಲೆ ಸಹ ಕೆಲವು ಗೂಂಡಾ ಜನರು ವಿದ್ಯಾರ್ಥಿಗಳ ಹೆಸರಿನಲ್ಲಿ ಹಲ್ಲೆ ನಡೆಸಿದ್ದಾರೆ. ಆಕೆಯ ಮೈಮೇಲೆ ಕೈಹಾಕಿದ್ದಾರೆ. ಅಪಮಾನ ಮಾಡಿದ್ದಾರೆ. ಈ ವಿದ್ಯಾರ್ಥಿನಿ ನನ್ನ ಕ್ಷೇತ್ರದಿಂದ ಬಂದಿದ್ದಾರೆ. ಈ ರೀತಿ ಹಲ್ಲೆ ನಡೆದ ಬಗ್ಗೆ ಇಷ್ಟರವರಗೆ ಕ್ರಮ ತೆಗೆದುಕೊಂಡಿಲ್ಲ ಅದರ ಬದಲು ಆಕೆಯನ್ನು ರಕ್ಷಣೆ ಮಾಡಲು ಹೋದ ಅಧ್ಯಾಪಕ ಇರುವುದೇ ಕಷ್ಟ ಎಂಬ ಪರಿಸ್ಥಿತಿಯನ್ನು ತಂದೊಡಿದ್ದಾರೆ ಇದರ ಬಗ್ಗೆ ಲತಾ ಅಯ್ಯರ್ ಎಂಬುವರು ಒಂದು ಪತ್ರವನ್ನು ಬರೆದಿದ್ದಾರೆ ಅದನ್ನು ಸಹ ತಮಗೆ ಕಳಿಸಿಕೊಡುತ್ತೇನೆ. ಅದನ್ನು ತಾವು ತನಿಖೆ ಮಾಡಿಸಬೇಕು ಮುಖ್ಯವಾಗಿ ಇಂತಹ ಭ್ರಷ್ಟಾಚಾರಗಳು ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ನಡೆಯಬಾರದು. ಈಗ ನಡೆದಿರುವುದರಿಂದ ಆ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಮತ್ತು ಅಧ್ಯಾಪಕರಲ್ಲಿ ಗುಂಪುಗಳನ್ನು ಕಟ್ಟಿಸಿ ಆ ಕಡೆಯವರು ಈ ಕಡೆಯವರ ಮೇಲೆ, ಈ ಕಡೆಯವರು ಆ ಕಡೆಯವರ ಮೇಲೆ ಬಡಿದಾಡುವಂತೆ ಮಾಡಿ ಆ ಮೂಲಕ ತಮ್ಮ ರಾಜಕೀಯದ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಉನ್ನತ ಅಧಿಕಾರದಲ್ಲಿರುವವರು ಪ್ರಯತ್ನ ಮಾಡುತ್ತಿದ್ದಾರೆ. ಇಂತಹವರಿಗೆ ವಿಶ್ವವಿದ್ಯಾನಿಲಯ ಸ್ಥಾನವಲ್ಲ. ಅವರಿಗೆ ರಾಜಕೀಯ ಬೇಕಾಗಿದ್ದರೆ, ಅವರು ಈಗಿರುವ ಸ್ಥಾನ

ವನ್ನು ಬಿಟ್ಟು ಅದಕ್ಕಾಗಿಯೇ ಇರುವ ರಾಜಕೀಯ ವೇದಿಕೆಯ ಮೇಲೆ ಬಂದು ತಮ್ಮ ರಾಜಕೀಯವನ್ನು ನಡೆಸಲಿ, ಆದರೆ ವಿಶ್ವವಿದ್ಯಾನಿಲಯವು ರಾಜಕೀಯ ನಡೆಸುವುದಕ್ಕೆ ಮತ್ತು ಜಾತೀಯತೆಯನ್ನು ಬೆಳೆಸುವುದಕ್ಕೆ ಸ್ಥಾನವಲ್ಲವೆಂಬುದನ್ನು ಅವರಿಗೆ ಸರ್ಕಾರದವರು ಸ್ಪಷ್ಟವಾಗಿ ತಿಳಿಸಬೇಕು. ಈಗ ಈ ಬಗ್ಗೆ ಬಂದಿರುವ ಅಪಾದನೆಗಳು ರುಜುವಾತಾದರೆ ಅವರಿಗೆ ಯೋಗ್ಯವಾದ ಶಿಕ್ಷೆಯನ್ನು ವಿಧಿಸಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ) —ಮಾನ್ಯ ಸಭಾಧ್ಯಕ್ಷರೇ ನಮ್ಮ ಮುಂದೆ ಇರತಕ್ಕ ವಿದ್ಯಾ ಇಲಾಖೆಯ ೧೨, ೨೨. ಮತ್ತು ೨೫ನೇ ಬೇಡಿಕೆಗಳು ಏನಿವೆ ಈ ಬೇಡಿಕೆಗಳ ಬಗ್ಗೆ ನಾನು ನನ್ನ ಒಪ್ಪಿಕೆಯನ್ನು ಕೊಡುವುದಕ್ಕೆ ಮೊದಲು ನನ್ನ ಸಲಹೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಒಂದನೆಯದಾಗಿ ಸರ್ಕಾರದವರು ನಮಗೆ ಒಂದು ವಾರ್ಷಿಕ ವರದಿಯನ್ನೇನು ಕೊಟ್ಟಿದ್ದಾರೆ ಅದರಲ್ಲಿ ಹೇಳಿರುವ ಹಾಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿದವರ ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಡುತ್ತಿದ್ದಾರೆ ಅವರಿಗೆ ೫೦ ಪರ್ಸೆಂಟ್ಸ್ ಮಾರ್ಕ್ಸ್ ಬಂದರೆ ಮಾತ್ರ ಅವರಿಗೆ ಸ್ಕಾಲರ್‌ಷಿಪ್ ಕೊಡುತ್ತೇವೆ ಎನ್ನುವ ಒಂದು ಷರತ್ತನ್ನು ಹಾಕಿದ್ದಾರೆ ಅವರು ದೇಶಕ್ಕಾಗಿ ದುಡಿದದ್ದರಿಂದ ನಮಗೆ ಸ್ವಾತಂತ್ರ್ಯ ಸಿಕ್ಕಿತು. ಅವರಿಗೆ ವಯಸ್ಸಾಗಿದ್ದು ಅವರ ಮಕ್ಕಳಿಗೆ ಓದುವುದಕ್ಕೆ ೫೦ ಪರ್ಸೆಂಟ್ ಮಾರ್ಕ್ಸ್ ಬಂದಿದ್ದರೆ ಅಂಥವರಿಗೆ ಮಾತ್ರ ತಿಂಗಳಿಗೆ ಹತ್ತು ರೂಪಾಯಿ ಸ್ಕಾಲರ್‌ಷಿಪ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ರೀತಿ ಇವರು ಕೊಡತಕ್ಕದು ಒಂದು ಸಾವಿರ ಜನಗಳಿಗೆ ಒಂದು ಲಕ್ಷ ರೂಪಾಯಿಗಳಾಗುತ್ತದೆ. ಈ ಒಂದು ವಿದ್ಯಾಭ್ಯಾಸ ಖಾತೆಗೆ ೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಸ್ವಾತಂತ್ರ್ಯಕ್ಕಾಗಿ ದೇಶಕ್ಕಾಗಿ ದುಡಿದವರ ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಡುವುದಕ್ಕೆ ಆ ಒಂದು ಕಂಡೀಷನ್ ಹಾಕತಕ್ಕದ್ದು ಬಹಳ ವಿಚಿತ್ರವಾದ ವಿಷಯ ಆದ್ದರಿಂದ ಆ ಕಂಡೀಷನ್ ತೆಗೆದು ೩೫ ಪರ್ಸೆಂಟ್ ಮಾರ್ಕ್ಸ್ ತೆಗೆದು ಪಾಸು ಮಾಡಿರತಕ್ಕವರಿಗೆ ಸ್ಕಾಲರ್‌ಷಿಪ್ ಕೊಡಬೇಕು ಎಂದು ನಾನು ಬಹಳ ವಿನಯದಿಂದ ಪ್ರಾರ್ಥಿಸುತ್ತೇನೆ.

ಎರಡನೆಯದಾಗಿ ಈಗ ಈ ವಿದ್ಯಾಖಾತೆಗೆ ೮೦ ಕೋಟಿ ರೂಪಾಯಿಗಳ ಬೇಡಿಕೆ ಏನಿದೆ ಇದು ೧೦೦ ಕೋಟಿ ರೂಪಾಯಿಗಳಾದರೂ ನನ್ನ ಅಭ್ಯಂತರವಿಲ್ಲ. ನಮಗೆ ಕೊಟ್ಟಿರತಕ್ಕ ವಾರ್ಷಿಕ ವರದಿಯಲ್ಲಿ ೧೯೭೧ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಎಸ್ ಎಸ್ ಎಲ್.ಸಿ. ಪರೀಕ್ಷೆಗೆ ೫೫ ಸಾವಿರ ಜನ ಮಕ್ಕಳು ಕುಳಿತುಕೊಂಡಿದ್ದರು. ಇವರಲ್ಲಿ ಪಾಸಾಗಿರತಕ್ಕ ಪರ್ಸೆಂಟೇಜ್ ೨೨.೨೭. ಆ ಮೇಲೆ ೧೯೭೩ನೇ ಇಸವಿಯಲ್ಲಿ ಅಕ್ಟೋಬರ್ ತಿಂಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ೮೫ ಸಾವಿರ ಜನ ಮಕ್ಕಳು ಕುಳಿತುಕೊಂಡಿದ್ದರು, ಇವರಲ್ಲಿ ಪಾಸಾಗಿರತಕ್ಕವರು ೨೧.೧೮ ಪರ್ಸೆಂಟ್ ಪಾಸಾಗಿದ್ದಾರೆ. ಸರ್ಕಾರಕ್ಕೆ ನಾನಾ ರೀತಿಯಲ್ಲಿ ಹಾಗೂ ತೆರಿಗೆ ರೂಪದಲ್ಲಿ ಬರತಕ್ಕ ಹಣವನ್ನು ವಿದ್ಯಾ ಇಲಾಖೆಗೆ ವರ್ಷೇ ವರ್ಷೇ ಜಾಸ್ತಿ ಜಾಸ್ತಿ ಹಣವನ್ನು ಕೊಡುತ್ತಾ ಕೊಡುತ್ತಾ ವಿದ್ಯಾ ಇಲಾಖೆಯಲ್ಲಿ ದಕ್ಷತೆ ಜಾಸ್ತಿಯಾಗುವ ಬದಲು ಕಡಿಮೆಯಾಗುತ್ತಿದೆ. ವಿದ್ಯಾ ಇಲಾಖೆಯವರು ಎಷ್ಟರಮಟ್ಟಿಗೆ ವಿದ್ಯಾ ಇಲಾಖೆಯ ವಿಷಯದಲ್ಲಿ ಎಚ್ಚರಿಕೆಯಿಂದಿದ್ದಾರೆ ಎನ್ನುವುದಕ್ಕೆ ಅವರು ಕೊಟ್ಟಿರತಕ್ಕ ವರದಿಯೇ ಸಾಕ್ಷಿ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ವಿದ್ಯಾ ಇಲಾಖೆ ದಿನೇ ದಿನೇ ಬೆಳೆಯುತ್ತಾ ಹೋಗಬೇಕು. ದೇಶದಲ್ಲಿ ಮಕ್ಕಳು ಒಳ್ಳೆಯ ವಿದ್ಯಾವಂತರಾಗುವುದಕ್ಕೆ ಸಾಕಷ್ಟು ಶ್ರಮ ಇರಬೇಕು. ಮತ್ತೆ ೧೯೭೧ ರಿಂದ ೭೩ನೇ ಇಸವಿಗೆ ಹೋಲಿಸಿದರೆ ಎಸ್.ಎಸ್.ಎಲ್ ಸಿ ಪಾಸಾಗಿರತಕ್ಕವರ ಸಂಖ್ಯೆ ಕಳಗೆ ಇಳಿಯುತ್ತಿದೆ. ಆದರೆ ನಮ್ಮ ಅಧಿಕಾರಿಗಳಿಗೆ ಏನು ಹೇಳಬೇಕೋ ಎಂದು ವ್ಯಸನವಾಗುತ್ತಿದೆ. ನಾವೇನಾದರೂ ಅಧಿಕಾರಿಗಳ ಮೇಲೆ ಹೇಳಿದರೆ ಸದಸ್ಯರು ಈ ರೀತಿ ಹೇಳುತ್ತಾರೆ ಎಂದು ಮನಸ್ಸಿಗೆ ಬೇಸರ ಮಾಡಿಕೊಳ್ಳುತ್ತಾರೆ. ಈಗ ಸಾರ್ವಜನಿಕ ಹಿತದೃಷ್ಟಿಯಿಂದ ಅದನ್ನು ಹೇಳದೇ ವಿಧಿಯಿಲ್ಲ. ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ವಿದ್ಯಾ ಇಲಾಖೆಯಲ್ಲಿರತಕ್ಕ ಜನಗಳಿಗೆ ಒಳ್ಳೆಯದು ಮಾಡಬೇಕು ಎನ್ನುವ ಅಭಿಪ್ರಾಯ ಇದೆಯೋ ಏನು ನಾನು ನೋಡುತ್ತಿದ್ದೇನೆ, ಸರ್ಕಾರದವರು ಕೊಟ್ಟಿರುವ ವರದಿಯಲ್ಲಿ ಇರುವ ಪ್ರಕಾರ ಬೆಂಗಳೂರು ನಗರದಲ್ಲಿ ಸರ್ಕಾರಿ ಪ್ರೈಮರಿ ಶಾಲೆಗಳು ೨೧೯ ಇವೆ. ೨೦ ಲಕ್ಷ ಜನಸಂಖ್ಯೆ ಇರುವ ಬೆಂಗಳೂರು ನಗರದಲ್ಲಿ ೨೧೯ ಪ್ರೈಮರಿ ಶಾಲೆಗಳು ಇವೆ. ತುಮಕೂರು ಜಿಲ್ಲೆಯಲ್ಲಿ ೭೧೫೭ ಸರ್ಕಾರಿ ಪ್ರೈಮರಿ ಶಾಲೆಗಳು ಇವೆ, ಇದು ಯಾವ ನ್ಯಾಯ ? ವಿದ್ಯಾಭ್ಯಾಸವನ್ನು ಕೊಡುವುದರ ಇಷ್ಟರಮಟ್ಟಿಗೆ ತಾರತಮ್ಯವನ್ನು ಬೆಳೆಸಿಕೊಂಡು ಹೋದರೆ ಸಮಾಜವಾದದ ದೇಶ ಎಂದು ಕರೆಯುವುದಕ್ಕೆ ಸಾಧ್ಯವಿದೆಯೋ ? ಪ್ರೈಮರಿ ವಿದ್ಯಾಭ್ಯಾಸದಿಂದ ಪಿ.ಯು.ಸಿ.ವರೆಗೆ ಹೀಗೆಯೇ ಇದೆ. ನಾನು ಹೇಳಬೇಕಾದರೆ ಕಳೆದ ೨೫ ವರ್ಷಗಳಿಂದ ವಿದ್ಯಾ ಇಲಾಖೆಯಲ್ಲಿ ಯಾರೇ ಮಂತ್ರಿಗಳಾಗಿ ಬಂದರೂ ಕೂಡ ಯಾರೇ ಅಧಿಕಾರಿಗಳು ಬಂದರೂ ಕೂಡ

ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಅವರವರ ಜಿಲ್ಲೆಗಳಿಗೆ ಹೆಚ್ಚು ಹೆಚ್ಚಿಗೆ ವಿದ್ಯಾಭ್ಯಾಸವನ್ನು ಒದಗಿಸುವ ವ್ಯವಸ್ಥೆಯಾಗಿದೆ. ಆದ್ದರಿಂದ ಈ ಬಗ್ಗೆ ಒಂದು ಕಾನೂನು ಮಾಡಿ ಪ್ರತಿಯೊಂದು ಲಕ್ಷ ಜನಸಂಖ್ಯೆಗೂ ಇಷ್ಟು ಪ್ರೈಮರಿ ಸ್ಕೂಲುಗಳು, ಇಷ್ಟು ಹೈಸ್ಕೂಲುಗಳು ಇಷ್ಟು ಜೂನಿಯರ್ ಕಾಲೇಜುಗಳು ಇರಬೇಕು ಎಂದು ಒಂದು ಕಾನೂನು ಮಾಡಿ. ಇಲ್ಲದಿದ್ದರೆ ನಾವು ಸಮಾಜವಾದವನ್ನು ತರುತ್ತೇವೆ ಎಲ್ಲರಿಗೂ ವಿದ್ಯಾಭ್ಯಾಸವನ್ನು ಕೊಡುತ್ತೇವೆ ಎಂದು ಹೇಳಿ ಇಷ್ಟೊಂದು ಅಂತರವನ್ನು ಇಡವುದಾದರೆ ನಮ್ಮನ್ನು ಯಾರು ಕೇಳುವುದಿಲ್ಲ ಎನ್ನುವ ಮಾತನ್ನು ನೀವು ಹೇಳುವುದಾದರೆ ನಾವು ಒಪ್ಪಿಕೊಳ್ಳಬಹುದು. ಆದರೆ ನಾವು ಜನಗಳ ಹತ್ತಿರ ಹೋದರೆ ಛೀಮಾರಿ ಮಾಡಿಸಿಕೊಳ್ಳಬೇಕಾಗುತ್ತದೆ. ವಿದ್ಯಾ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಮಾಡುವುದು ನ್ಯಾಯವೇ ಎಂದು ನೋಡಬೇಕಾಗಿದೆ. ಇಷ್ಟೊಂದು ಅಂತರ ಇದ್ದರೆ ನಾವು ಚುನಾಯಿತ ಪ್ರತಿನಿಧಿಗಳು ಏನು ಹೇಳುತ್ತಾ ನನ್ನ ಕ್ಷೇತ್ರದಲ್ಲಿ ಒಂದಾದರೂ ಸರ್ಕಾರಿ ಪ್ರೌಢಶಾಲೆ ಇದೆಯೋ ಎಂದು ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಬೇಕಾಗುತ್ತದೆ ನನ್ನ ಕ್ಷೇತ್ರದ ಜನ ಏನು ಪಾಪ ಮಾಡಿದ್ದಾರೆ ? ಅಧಿಕಾರದ ದುರುಪಯೋಗ ಎಂದು ಹೇಳಿದರೆ ತಪ್ಪು ಯಾರೇ ಮಾಡಲಿ ಅಧಿಕಾರಿಗಳೇ ಮಾಡಿರಬಹುದು ಅಥವಾ ಮಂತ್ರಿಗಳೇ ಮಾಡಿರಬಹುದು. ಅದು ಆಗಬಾರದು. ಸಮಾಜವಾದದ ಸರ್ಕಾರ ನಡೆಸತಕ್ಕ ವಿದ್ಯಾಭ್ಯಾಸವಾದರೂ ಎಲ್ಲಾ ಬಡಮಕ್ಕಳಿಗೂ ಸರಿಸಮನಾಗಿ ರಾಜ್ಯದ ೩ ಕೋಟಿ ಜನಗಳಿಗೆ ಸರಿಸಮನಾಗಿ ವಿದ್ಯಾಭ್ಯಾಸ ಸಿಕ್ಕುವಂಥಾ ಅವಕಾಶ ಈಗಿನ ವಿದ್ಯಾಮಂತ್ರಿಗಳ ಕಾಲದಲ್ಲಿ ಆಗಬೇಕು. ಬಡವರ ಬಗ್ಗೆ ಈಗಿನ ವಿದ್ಯಾಮಂತ್ರಿಗಳಾದ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿ ಅವರಿಗೆ ನನಗಿಂತ ಹೆಚ್ಚು ಕನಿಕರ ಇದೆ. ಆದ್ದರಿಂದ ಅವರು ನೂರಾರು ವರ್ಷಗಳಿಂದ ಸಮಾಜದಲ್ಲಿ ಯಾರು ಹಿಂದುಳಿದಿದ್ದಾರೆ ಅಂಥವರನ್ನು ಉದ್ಧಾರ ಮಾಡುವ ಸಲುವಾಗಿ ಒಂದು ಯೋಚನೆ ಮಾಡಬೇಕು. ಇದಕ್ಕೆ ನಾವೆಲ್ಲರೂ ನಮ್ಮ ಬೆಂಬಲವನ್ನು ಕೊಡುತ್ತೇವೆ ಈ ಒಂದು ವಿದ್ಯಾ ಇಲಾಖೆಗೆ ೮೦ ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡುವಾಗ ಕರ್ನಾಟಕದಲ್ಲಿರುವ ಯಾವ ಯಾವ ಮಕ್ಕಳು ಹುಟ್ಟುತ್ತವೆಯೋ ಆ ಎಲ್ಲ ಮಕ್ಕಳಿಗೂ ಕೂಡ ಸರಿಸಮನಾಗಿ ಓದುವುದಕ್ಕೆ ಅವಕಾಶ ಮಾಡಿಕೊಡಬೇಕು. ಖಾಸಗೀ ಪಾಠಶಾಲೆಗಳ ಬಗ್ಗೆ ಹೇಳುವುದಾದರೆ ಅನೇಕ ಮಾನ್ಯ ಸದಸ್ಯರು ಅನೇಕ ರೀತಿಯಲ್ಲಿ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಖಾಸಗೀ ಪಾಠಶಾಲೆಗಳಲ್ಲಿ ಒಂದೇ ಕುಟುಂಬದವರು ಉಪಾಧ್ಯಾಯರು, ಅವರೇ ಪ್ರಿನ್ಸಿಪಾಲರು ಪ್ರತಿಯೊಂದೂ ಎ. ಟು ಜಡ್ ಅವರೇ ಆಗಬಾರದು. ಸರ್ಕಾರದವರು ಈ ಖಾಸಗೀ ಪಾಠಶಾಲೆಗಳಿಗೆ ೮೫ ಪರ್ಸೆಂಟ್ ಗ್ರಾಂಟ್ ಕೊಡುವಾಗ ಅವರೇ ಪಾಠಶಾಲೆಗಳನ್ನು ನಡೆಸಲಿ. ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಅದರ ಕುಟುಂಬದವರೇ ಉಪಾಧ್ಯಾಯರು ಆಗಬಾರದು ಸಾರ್ವಜನಿಕರ ತೆರಿಗೆ ಹಣವನ್ನು ಒಂದೇ ಕುಟುಂಬದವರು ಪಡೆಯುವುದಕ್ಕೆ ಹೇಗಾಗುತ್ತದೆ ? ಖಾಸಗೀ ಪಾಠಶಾಲೆಗಳನ್ನು ನಡೆಸತಕ್ಕವರು ಯಾರೇ ಆಗಲಿ ಅಧಿಕಾರ ದುರುಪಯೋಗ ಮಾಡಬಾರದು. ಎಷ್ಟೋ ಜನ ಶಾಸಕರು ಈಗ ಖಾಸಗೀ ಪಾಠಶಾಲೆಗಳನ್ನು ನಡೆಸುತ್ತಿದ್ದಾರೆ. ಅವರು ಮೊದಲು ಶಾಸಕರಲ್ಲದೇ ಇರಬಹುದು. ಈಗ ಶಾಸಕರು ಇರಬಹುದು. ಒಬ್ಬರು ಶಾಸಕರು ಲಾ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜು ತೆರೆಯುತ್ತೇವೆ ಎಂದು ಬೋರ್ಡ್ ಹಾಕಿ ಹುಡುಗರ ಅಪ್ಲಿಷನ್ ಕೂಡ ತೆಗೆದುಕೊಂಡ ಮೇಲೆ ಅವರು ಅದನ್ನು ಮಾಡುವುದಕ್ಕೆ ಆಗದೇ ಅದನ್ನು ಸರ್ಕಾರ ಮಾಡಬೇಕಾದ ಪರಿಸ್ಥಿತಿ ಬಂತು. ನಾವು ಶಾಸಕರಾಗಿ ನ್ಯಾಯವನ್ನು ಹೇಳುವಂಥಾ ಜನ ನಮಗೆ ಇರತಕ್ಕ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಾದರೆ ಆಗ ಅಧಿಕಾರಿಗಳು ಮಾಡುವುದು ತಪ್ಪು ಎಂದು ಹೇಳುವುದಕ್ಕೆ ಬರುವುದಿಲ್ಲ. ಈ ದೃಷ್ಟಿಯಿಂದ ೮೦ ಕೋಟಿ ರೂಪಾಯಿಗಳನ್ನು ಈ ವಿದ್ಯಾ ಖಾತೆಗೆ ಖರ್ಚು ಮಾಡುವಾಗ ಖಾಸಗೀ ಪಾಠಶಾಲೆಗಳನ್ನು ನಡೆಸತಕ್ಕ ಮ್ಯಾನೇಜ್‌ಮೆಂಟಿನವರಾಗಲೀ ಶಾಸಕರಾಗಲೀ ಅಥವಾ ವಿದ್ಯಾ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಾಗಲೀ ನ್ಯಾಯವಾದ ಒಳ್ಳೆಯ ದೃಷ್ಟಿಯಿಂದ ಎಲ್ಲರಿಗೂ ಸರಿಸಮಾನವಾಗಿ ಒಂದು ವಿದ್ಯಾಭ್ಯಾಸವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಉಪಾಧ್ಯಾಯರುಗಳನ್ನು ನಾನು ನೋಡಿದ್ದೇನೆ. ಹಲವಾರು ಕಡೆ ಅವರು ಬಹಿರಂಗವಾಗಿ ಭಾಷಣ ಮಾಡುತ್ತಾರೆ. ನಮ್ಮ ಸರ್ಕಾರಿ ಪಾಠಶಾಲೆಗಳ ಹಾಗೂ ಕಾಲೇಜುಗಳಲ್ಲಿ ೩೫ ಜನ ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರು ಇದ್ದರೆ ಖಾಸಗೀ ಪಾಠಶಾಲೆಗಳು ಮತ್ತು ಕಾಲೇಜುಗಳಲ್ಲಿ ೧೦ ಜನ ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರು ಇರುತ್ತಾರೆ ಆ ಹುಡುಗರನ್ನು ಒಂದು ಸಣ್ಣ ರೂಮಿನಲ್ಲಿ ಸೇರಿಸಿ ಉಪಾಧ್ಯಾಯರು ಬಹಿರಂಗ ಭಾಷಣ ಮಾಡುತ್ತಾರೆ ಕೆಲವರು ಮೌನವಾಗಿ ಭಾಷಣ ಮಾಡುತ್ತಾರೆ, ಕೆಲವರು ಬ್ಲಾಕ್‌ಬೋರ್ಡಿನಲ್ಲಿ ಬರೆದು ಇಡುತ್ತಾರೆ. ಇಂಥಾದ್ದನ್ನು ವಿದ್ಯಾಭ್ಯಾಸ ಎಂದು ಕರೆಯುವುದಕ್ಕೆ ಸಾಧ್ಯವೇ ? ಸರ್ಕಾರದವರೇ ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಒಂದು ತರಗತಿಗೆ ೨೫ ಜನ ವಿದ್ಯಾರ್ಥಿಗಳು ಇದ್ದರೆ ಮಾತ್ರ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸಾಧ್ಯ. ಸರ್ಕಾರದವರೇ ಕೊಟ್ಟಿರತಕ್ಕ ರಿಪೋರ್ಟಿನಲ್ಲಿ (೧೯೭೦) ರಿಂದ ೩ನೇ ಇಸವಿಯವರೆಗೆ ಎಷ್ಟರಮಟ್ಟಿಗೆ ವಿದ್ಯಾಭ್ಯಾಸ ಮುಂದುವರಿದಿದೆ ಎಂಬುದನ್ನು ಹೇಳುವುದಾದರೆ ಸರ್ಕಾರದ ರಿಪೋರ್ಟ್ ಸಾಕ್ಷಿಯಾಗಿದೆ.

ಇದು ಆಗಬಾರದು. ಕಡಿಮೆ ಮಕ್ಕಳು ಇರಬೇಕು ಶಿಕ್ಷಿ-ಶಿಕ್ಷಿತ ಜಾಸ್ತಿ ಇರದು ಆ ವ್ಯವಸ್ಥೆ ಇಲ್ಲದಿದ್ದರೆ ಬಹುಶಃ ವಿದ್ಯಾಭ್ಯಾಸ ಇಲಾಖೆಯಲ್ಲಿಯೂ ಕೂಡ ಸರಿಸಮವಾಗಿ ವಿದ್ಯಾಭ್ಯಾಸವನ್ನು ಎಲ್ಲರಿಗೂ ಕೊಡುವುದಕ್ಕೆ ಸಾಧ್ಯವಾಗದೇ ಹೋಗತಕ್ಕ ಪರಿಸ್ಥಿತಿ ಬರಬಹುದು. ನಮ್ಮ ಕಾಲದಲ್ಲಿಯೇ ಇನ್ನು ಮುಂದೆ ಇಂತಹ ತೊಂದರೆ ಆಗಬಾರದು. ಇನ್ನೊಂದು ವಿಷಯ. ನನ್ನ ಕ್ಷೇತ್ರದಲ್ಲಿ ವ್ಯವಸಾಯವನ್ನೇ ಕಸುಬಾಗಿ ಇಟ್ಟುಕೊಂಡಿರುವವರಿಗೆ ನಾನೇ ಅನೇಕ ಸಾರಿ ಹೇಳಿದ್ದೇನೆ. ನನ್ನನ್ನು ಆರಿಸಿದ ಜನರು ಅಲ್ಲಿಗೆ ಒಂದು ಪ್ರೌಢ ಶಾಲೆಯನ್ನು ಕೊಡಿಸಿ ಎಂದು ಕೇಳಿದಾಗ ಹಿಂದಿನ ಮಂತ್ರಿಗಳು ಅದನ್ನು ಕೊಡುತ್ತೇವೆಂದು ಹೇಳಿದರು. ಹಣದ ಕೊರತೆ ಆಗುವುದಿಲ್ಲವೆಂದೂ ಹೇಳಿದರು. ಏಕೆಂದರೆ ಅಲ್ಲಿ ಜನಗಳಿಗೆ ಅದರಲ್ಲಿ ಬಡವರಿಗೆ ಹೆಚ್ಚು ತೊಂದರೆಯಾಗಿದೆ, ಅವರಲ್ಲಿ ಅನೇಕರು ಹೆಚ್ಚು ಸಂಕಟಕ್ಕೆ ಸಿಕ್ಕಿದ್ದಾರೆ. ಬರುವ ವರ್ಷದೊಳಗೆ ನಿಜವಾಗಿ ಪ್ರೌಢ ಶಾಲೆಯ ಅವಕಾಶ ಸಿಗದಿದ್ದರೆ ನಾನು ನಾಳೆ ಸಾರ್ವಜನಿಕರ ಮುಂದೆ ಹೋಗುವ ಪ್ರಸಂಗ ಬರಬಹುದು. ಅದೊಂದೇ ಅಲ್ಲ. ಬೆಂಗಳೂರಿನಲ್ಲಿ ವಿದ್ಯಾ ಇಲಾಖೆಯಿಂದ ಆಗಿರತಕ್ಕ ಅನ್ಯಾಯವನ್ನು ಪ್ರತಿಯೊಂದು ಕ್ಷೇತ್ರಕ್ಕೆ ಹೋಲಿಸಿ ನೋಡಿದರೆ ನಮ್ಮ ಕ್ಷೇತ್ರಕ್ಕೆ ಆಗಿರುವ ಅನ್ಯಾಯ ಯಾವಕ್ಷೇತ್ರಕ್ಕೂ ಆಗಿಲ್ಲವೆಂದು ಹೇಳುತ್ತೇನೆ. ಹೆಚ್ಚಿಗೆ ಹೇಳುವ ಅವಕಾಶವಿದ್ದರೂ ಸಹ ಅಧ್ಯಕ್ಷರು ಈಗಾಗಲೇ ಎರಡು ಸಾರಿ ಗಂಟೆ ಬಾರಿಸುತ್ತಾ ಇರುವುದರಿಂದ ವಿದ್ಯಾಭ್ಯಾಸ ಇಲಾಖೆ ಬೆಂಗಳೂರಿಗೆ ಅನೇಕ ದೃಷ್ಟಿಯಿಂದ ಅಪರಾಧ ಮಾಡಿದ್ದಾರೆ ಅದು ಇನ್ನು ಮುಂದೆ ಆಗಬಾರದು.

ಕೊನೆಯದಾಗಿ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ): ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾಮಂತ್ರಿಗಳು ಮಂಡಿಸತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾತನಾಡಿದತಕ್ಕಂಥ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಪ್ರೈಮರಿ ಎಜುಕೇಷನ್ ಕಾಲೇಜ್ ಎಜುಕೇಷನ್, ಅಡ್ಮಿನಿಸ್ಟ್ರೇಷನ್—ಹೀಗೆ ಹಲವಾರು ವಿಷಯಗಳನ್ನು ಕುರಿತು ವಿಚಾರಮಾಡಿದ್ದಾರೆ. ನಾನು ನನಗೆ ಸಿಕ್ಕಿರುವ ಸಮಯದಲ್ಲಿ ಪ್ರಮುಖವಾದ ಕೆಲವು ಅಂಶಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ದೇಶದಲ್ಲಿ ತಮಗೆ ಗೊತ್ತಿರುವ ಹಾಗೆ ಯೂನಿವರ್ಸಿಟೀಸ್ ಮೂರು ಇವೆ, ಹಿಂದೆಯೂ ಕೂಡ ಇದರ ಬಗ್ಗೆ ಪ್ರಸ್ತಾಪ ಬಂದಿತ್ತು. ಇನ್ನೂ ಜಾಸ್ತಿ ವಿಶ್ವವಿದ್ಯಾನಿಲಯಗಳನ್ನು ಸರ್ಕಾರದವರು ಸ್ಥಾಪನೆ ಮಾಡತಕ್ಕ ಯೋಜನೆ ಇದೆಯೆನ್ನುವ ಮಾತನ್ನು ಹಿಂದಿನ ವಿದ್ಯಾಮಂತ್ರಿಗಳಾಗಿದ್ದ ಮಾನ್ಯ ಶ್ರೀ ಬದರಿನಾರಾಯಣ ಅವರು ತಿಳಿಸಿದ್ದರು. ಆದ್ದರಿಂದ ನಾನು ತಮ್ಮ ಉತ್ತರದಲ್ಲಿ ನಿರೀಕ್ಷಣೆ ಮಾಡುತ್ತೇನೆ. ಈ ರಾಜ್ಯಕ್ಕೆ ವಿಶ್ವವಿದ್ಯಾನಿಲಯಗಳನ್ನು ಈಗ ಇರುವುದಕ್ಕಿಂತಲೂ ಹೆಚ್ಚಿಗೆ ಮಾಡುವುದಕ್ಕೆ ಸರ್ಕಾರದವರು ಯೋಜನೆ ಮಾಡಿದ್ದಾರೆ. ಇದು ನಿಜವಾಗಿದ್ದ ಪಕ್ಷದಲ್ಲಿ ಅಂತಹ ಯಾವ ಯೋಜನೆ ಇದೆಯೆನ್ನುವ ಬಗ್ಗೆ ನಾನು ಈಗ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ. ನಾನು ಇನ್ನು ಕೊಠಾರಿ ಕಮಿಷನ್ನವರು ಏನು ಹೇಳಿದರೋ ಅದರ ಚರ್ಚೆಗೆ ಹೋದರೆ ಬಹಳ ಕಾಲಾವಕಾಶ ಬೇಕಾಗುತ್ತದೆ, ಅದನ್ನು ಪ್ರಸ್ತಾಪಮಾಡುವುದಿಲ್ಲ, ಅನೇಕ ಮಾನ್ಯ ಸದಸ್ಯರು ಅಭಿಪ್ರಾಯ ಪಟ್ಟಿರುವ ಹಾಗೆ ಬಿ.ಎ. ಬಿ.ಎಸ್ಸಿ. ಮತ್ತು ಇವರ ಪದವಿಗಳು ಯಾವುವೇ ಇರಲಿ, ಅವು ಯಾವೂ ಒಳ್ಳೆಯದಲ್ಲ ಎಂಬು ತೀರ್ಮಾನಕ್ಕೆ ಬರುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಸಿವಿಲ್ ಇಂಜಿನಿಯರಿಂಗ್ ಹಿಂದೆ ಆಗಿರುವಂಥವನು ಮುಂದೆ ಇದಕ್ಕೆ ಬಹಳ ಒಳ್ಳೆಯ ಬೆಲೆ ಇದೆಯೆಂದು ಕಾಲೇಜಿಗೆ ಸೇರುತ್ತಾನೆನ್ನೋಣ. ಅವನಿಗೆ ಕೆಲಸ ಸಿಕ್ಕಿತು ಅಂದರೆ, ಆಗ ವಿಪರೀತವಾಗಿ ಇಂಜಿನಿಯರಿಂಗ್ ಕಾಲೇಜಿಗೆ ಸೇರಬೇಕಾಗುತ್ತದೆ. ಆದರೆ ಸರ್ಕಾರದವರು ಸಿವಿಲ್ ಇಂಜಿನಿಯರ್ಸ್ ಇನ್ನು ಮುಂದೆ ಬೇಕಾಗಿಲ್ಲ ಎಂಬುದಾಗಿ ಸರ್ಕಾರದಿಂದ ಯಾವುದೋ ಘೋಷಣೆ ಬಂದಮೇಲೆ ಅವನು ಅಲ್ಲಿಗೇ ಸಿಕ್ಕಿಹಾಕಿಕೊಂಡರೂ ಅಮೇಲೆ ಮೆಕಾನಿಕಲ್. ಎಲೆಕ್ಟ್ರಿಕಲ್‌ಗೆ ಒಳ್ಳೆಯ ಡಿಮ್ಯಾಂಡ್, ಬೆಲೆ ಇದೆಯೆಂದು ಬಂತು ಅಂದರೆ ಆಗ ಒಂದು ಯೋಜನೆಯನ್ನು ಸರ್ಕಾರ ಹಾಕಿದಮೇಲೆ ಆ ಯೋಜನೆ ಪ್ರಕಾರ ತರಬೇತನ್ನು ಅನೇಕ ಮಕ್ಕಳಿಗೆ ಸರ್ಕಾರ ಕೊಡುತ್ತವೆಂದು ಹೇಳಿದ ಮೇಲೆ ಅಲ್ಲಿ ಲಕ್ಷಾಂತರ ರೂಪಾಯಿಗಳನ್ನು ಮತ್ತು ಕೋಟ್ಯಾಂತರ ರೂಪಾಯಿಗಳನ್ನು ರಾಜ್ಯ ಸರ್ಕಾರದ ಮೂಲಕ ಖರ್ಚು ಮಾಡಬೇಕಾಗುತ್ತದೆ. ಹಿಂದಿನ ಸರ್ಕಾರದಲ್ಲಿಯೂ ಮಾನ್ಯ ಶ್ರೀ ವೀರೇಂದ್ರ ಪಾಟೀಲರೂ ಸಹ, ಅದನ್ನೇ ಹೇಳುತ್ತಾ ಇದ್ದರು, ಆದರೆ ನಾವು ಓದಿದ ಮಕ್ಕಳಿಗೆಲ್ಲಾ ನೌಕರಿಯನ್ನು ಕೊಡುತ್ತೇವೆಂದು ಹೇಳಿಲ್ಲವೆಂದು ತಿಳಿಸಿದ್ದಾರೆ. ಕೊನೆಯ ಪಕ್ಷ ನನಗನ್ನಿಸುತ್ತದೆ ನಮ್ಮ ದೇಶದ ಪರಿಸ್ಥಿತಿಗನುಗುಣವಾಗಿ ಕಾಲೇಜುಗಳಿಂದ, ಸ್ಕೂಲುಗಳಿಂದ ಹೊರಗೆ ಬರತಕ್ಕ ಒಟ್ಟು ಸಂಖ್ಯೆಯಲ್ಲಿ ಅರ್ಹ ಮಕ್ಕಳಿಗೆ ನೀವು ನೌಕರಿ ಕೊಡುವ ಯೋಜನೆಯನ್ನು ಹಾಕಬಹುದಾಗಿತ್ತೆಂದು, ಈ ದೇಶದಲ್ಲಿ ಇದು ಸಂಪೂರ್ಣವಾಗಿ ವಿಫಲವಾಗಿರುವುದನ್ನು ನಾನು ಹಿಂದೆ ಪ್ರಧಾನ ಮಂತ್ರಿಗಳಾಗಿದ್ದ ನೆಹರೂ ಅವರ ಕಾಲದಿಂದಲೂ ವಿಚಾರಮಾಡಿದೇನೆ. ಈ ಯೋಜನೆ ನಮ್ಮ ರಾಷ್ಟ್ರದಲ್ಲಿರುವ ಮಕ್ಕಳಿಗಂದಲ್ಲ, ನಮ್ಮ ದೇಶದ ವಿಷಯ ಮಾತ್ರ

ಮಾತನಾಡೋಣ. ನನಗೆ ಪರರಾಜ್ಯಗಳ ವಿಷಯ ಬೇಕಾಗಿಲ್ಲ. ರಾಷ್ಟ್ರದ ವಿಷಯ ಬಂದಾಗ್ಗೆ ಮಾತ ನಾಡಬಹುದು, ಈಗ ನಮ್ಮ ದೇಶದ ವಿಷಯ ನಮಗೆ ಬೇಕು, ಎಷ್ಟು ಜನರು ಕಾಲೇಜಿಗೆ ಸೇರಿ ಹೊರಗೆ ಬರುತ್ತಾರೆಂಬುದನ್ನು ನೋಡಬೇಕು, ಅವರಲ್ಲಿ ಎಷ್ಟು ಜನ ಟೆಕ್ನಿಕಲ್ ಎಜುಕೇಷನ್ ಮತ್ತು ನಾನ್ ಟೆಕ್ನಿಕಲ್ ಎಜುಕೇಷನ್ನಿಗೆ ಹೋಗುತ್ತಾರೆಂಬುದು ಮುಖ್ಯ ಆದಾದನಂತರ ನೌಕರಿಗೆ ಎಷ್ಟು ಜನ ಹೋಗುತ್ತಾರೆನ್ನುವುದು ಒಂದು. ಇದರ ಬಗ್ಗೆ ಸರ್ಕಾರ ಈಗ ಯೋಜನೆ ಮಾಡದೇ ಹೋದರೆ, ನೀವು ಏತಕ್ಕೋಸ್ಕರ ಈ ಕಾಲೇಜುಗಳನ್ನು ತೆಗೆಯುತ್ತೀವೆಂದು ಹೇಳುತ್ತೀರಿ? ಇದರ ಬಗ್ಗೆ ಬಹು ಸುಲಭವಾಗಿ ಉತ್ತರ ಕೊಡುವ ಜವಾಬ್ದಾರಿ ನಿಮಗೆ ಇದೆಯೆಂಬುದು ನನಗೆ ಗೊತ್ತಿದೆ. ಇವತ್ತು ಕಾಲೇಜು, ಹೈಸ್ಕೂಲುಗಳಿಂದ ಹೊರಗೆ ಬಂದ ಕೂಡಲೆ ಕಛೇರಿಯಿಂದ ಅವರಿಗೆ ನೌಕರಿ ಕೊಡುತ್ತೇವೆಂದು ಹೇಳುತ್ತೀರಿ ಅರ್ಧ ಮಿಲಿಯನ್ ಜನರಿಗೆ ಕೆಲಸಗಳನ್ನು ಕೊಡುವ ಪ್ರೋಗ್ರಾಂ ಇದೆಯೆಂದು ಹೇಳುತ್ತೀರಿ. ಇದರಿಂದ ಮಕ್ಕಳೆಲ್ಲಾ ಮೋಸ ಬಿದ್ದು ಈಗ ಅವರು ಬೀದಿಯಲ್ಲಿ ಭಿಕಾರಿಯಾಗಿ ಕುಳಿತಿದ್ದಾರೆ. ಈ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತೆ. ಏನೋ ಅಪ್ಪಿತಪ್ಪಿ ಯಾವನಾದರೂ ಒಬ್ಬ ಇಂಟರ್‌ವ್ಯೂಗೆ ಬಂದಾಗ ಪಬ್ಲಿಕ್ ಸರ್ವಿಸ್ ಕಮಿಷನ್ ಆಗಲೀ ಅಥವಾ ಯಾವುದೇ ಒಂದು ಕಮಿಟಿಯಾಗಲೀ ಎಂತಹ ಪ್ರಶ್ನೆಗಳನ್ನು ಹಾಕುತ್ತಾರೆಂದರೆ, ಉಗಾಂಡದ ಪ್ರಧಾನಿ ಯಾರು, ಕಟಾಂಗದ ಪ್ರಧಾನಿ ಯಾರು ಎಂಬುದಾಗಿ ಕೇಳುತ್ತಾರೆ. ಇವನು ಉಗಾಂಡದ ಸರ್ಕಾರದ ವಿಷಯ ಹೇಗೆ ತಿಳಿದುಕೊಳ್ಳಬೇಕು? ಆ ತರಹದಲ್ಲಿ ಪ್ರಶ್ನೆ ಹಾಕುವುದು ಸರಿಯಲ್ಲ. ಮಕ್ಕಳು ಎಷ್ಟರಮಟ್ಟಿಗೆ ಓದಬಹುದು? ಇಂತಹ ಒಂದು ವೈಜ್ಞಾನಿಕ ಯುಗದಲ್ಲಿ ಇಂಟರ್‌ವ್ಯೂ ಮಾಡತಕ್ಕ ಸದಸ್ಯರಿಗೆ ಹೇಗೋ ಅವನಿಗೆ ನೌಕರಿ ಸಿಗುವುದಿಲ್ಲ, ಅವನಿಂದ ಉತ್ತರ ಸಿಗದಿದ್ದರೆ ಹೋಗಲಿ ಎಂದು ಒಂದು ರೀತಿಯ ಮನೋಭಾವ ಪಡೆಯುತ್ತಿದ್ದಾರೆ ಇದು ಸರಿಯಲ್ಲ. ಆಗ ಅವನು ನಾನೇ ಒಂದು ಪ್ರಶ್ನೆ ಹಾಕಿ ಕಳುಹಿಸುತ್ತೇನೆ, ಹೇಗೂ ನೌಕರಿ ಸಿಗುವುದಿಲ್ಲ ಉತ್ತರ ಅವರೇ ಕೊಡಲಿ ಎಂದು ಹೇಳಿ ಬಿಡುತ್ತಾನೆ. ಏಕೆಂದರೆ ಅಲ್ಲಿ ಮೊದಲೇ ಕೆಲಸಕ್ಕೆ ಯಾರದಾದರೂ ಒಬ್ಬರ ಹೆಸರು ರಿಸರ್ವ್ ಆಗಿರುತ್ತದೆ. ಸುಮ್ಮನೆ ಇಂಟರ್‌ವ್ಯೂ ಮಾಡಿದ್ದಾಯಿತು ಎಂದು ಹೇಳುವುದಕ್ಕೆ ಇದೆಲ್ಲಾ ಪ್ರೊಸೀಜರ್ ಅಡಾಪ್ಟ್ ಮಾಡಿದ್ದೇವೆಂದು ಬೇರೆ ಹೇಳುವುದಕ್ಕೆ ಮಾಡುವುದು ಆಗಿದೆ. ಪದವೀಧರ ವಿದ್ಯಾರ್ಥಿಗಳ ಮೇಲೆ ಇವರ ಶಕ್ತಿ ಉಪಯೋಗ ಮಾಡಿ, ಉಗಾಂಡದ ಪ್ರಧಾನಿ ಯಾರು, ಕಟಾಂಗದ ಪ್ರಧಾನಿ ಯಾರು ಎಂಬುದಾಗಿ ಪ್ರಶ್ನೆ ಮಾಡುವುದೆಂದರೇನು? ಇಂತಹ ಒಂದು ಆಟತೆ ಗೋಳನ್ನು ಸರ್ಕಾರ ಕೈಬಿಡಬೇಕು.

ನಮ್ಮ ದೈನಂದಿನ ಜೀವನದಲ್ಲಿ ನಾವು ಹಲವಾರು ಸಮಸ್ಯೆಗಳನ್ನು ಕಾಣುತ್ತಿದ್ದೇವೆ. ಆದರೆ ಅವು ಗಳಿಗೆ ಇಲ್ಲಿ ಅವಕಾಶ ಸಿಕ್ಕತಕ್ಕ ರೀತಿಯಲ್ಲಿ ಈ ಒಂದು ಪರೀಕ್ಷೆ ನಡೆಯಬೇಕು. ಅದನ್ನು ಬಿಟ್ಟು ಏನೋ ಒಂದು ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಮನಸ್ಸಿಗೆ ಬಂದ ಹಾಗೆ ಪ್ರಶ್ನೆ ಹಾಕುವುದು ಸರಿಯೊವಲ್ಲ. ಇದೇ ವಿಚಾರದಲ್ಲಿ ಇನ್ನೂ ಒಂದು ಉದಾಹರಣೆ ನನ್ನ ಗಮನಕ್ಕೆ ಬಂದಿದೆ ಬೇರೆ ಹೀಗೆ ಇನ್ನೊಂದು ಕಡೆ ಈ ಮೈಮಾವ್ರೋಸಿ ಎಗ್ಸಾಮಿನೇಷನ್ ನಡೆಯತಕ್ಕ ಕಾಲದಲ್ಲಿ ಅಲ್ಲಿನ ಪ್ರೊಫೆಸರುಗಳು ಕುಡಿದು ಬಂದು ಕುಳಿತಿದ್ದರಂತೆ. ಹೀಗೆ ನಡೆದದ್ದು ನಮ್ಮ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ. ಆದರೆ ಇದಕ್ಕೆ ಸಂಬಂಧಪಟ್ಟ ಹುಡುಗ ಯಾರು ಎಂಬುದನ್ನು ಹೇಳದೆ ಮಾನ್ಯ ಸಚಿವರಿಗೆ ಬೇಕಾದರೆ ನಾನು ಆ ಪ್ರೊಫೆಸರ್ ಹೆಸರನ್ನು ತಿಳಿಸಬಲ್ಲೆ. ಅಂದರೆ ನಾನು ಹೇಳುತ್ತಿರುವುದು ಈ ರೀತಿಯಾಗಿ ಪರೀಕ್ಷೆಗಳು ನಡೆಯುವುದು ತಪ್ಪಬೇಕು ಎಂದು. ಆದರೆ ಅವುಗಳೆಲ್ಲಾ ಅಟಾನಮಸ್ ಬಾಡಿಗಳು ಅದರಲ್ಲಿ ನಮ್ಮ ಜವಾಬ್ದಾರಿಯಿಲ್ಲ ಎಂದು ಮಾನ್ಯ ಸಚಿವರು ನುಣಚಿಕೊಳ್ಳುವುದಕ್ಕೆ ಹೋಗಬಾರದು.

4-00 P.M.

ಇನ್ನು ಈ ಪ್ರಾಥಮಿಕ ಶಾಲೆಗಳ ವಿಚಾರಕ್ಕೆ ಬಂದರೆ ಇವು ನಾಯಿಕೊಡೆಗಳಂತೆ ಎದ್ದಿರುತ್ತವೆ. ಇದೇ ಬೆಂಗಳೂರಿನಲ್ಲಿ ಚಂದ್ರೋದಯ ಎಂಬ ಒಂದು ಪ್ರಾಥಮಿಕ ಶಾಲೆಯಿದೆ...

ಉಪಾಧ್ಯಕ್ಷರು:— ಅದರ ಬಗ್ಗೆ ಸಾಕಷ್ಟು ಈಗಾಗಲೆ ಹೇಳಿ ಆಗಿದೆ.

ಶ್ರೀ ಎಸ್. ಬಂಗಾರಪ್ಪ:— ಇದೇ ಬೆಂಗಳೂರು—ಕ್ಕೆ ಸೇರಿದ ಇನ್ನೊಂದು ಶಾಲೆ ಕಮ್ಮನಹಳ್ಳಿ ಯಲ್ಲಿ ಇದೆ. ಅದರ ಹೆಸರು ಸೆಯಿಂಟ್ ಛಾರಲೆಸ್ ಸ್ಕೂಲ್ ಎಂದು. ಅಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಉಪಾಧ್ಯಾಯಿನಿ ಆಕೆಯ ಲಗ್ನಕ್ಕಾಗಿ ೩ ತಿಂಗಳು ರಜೆ ಬೇಕೆಂದು ಅರ್ಜಿ ಹಾಕಿದ್ದರೆ ಅದನ್ನು ತಿರಸ್ಕಾರ ಮಾಡಿ ಆಕೆಯ ಸರ್ವೀಸನ್ನು ಟರ್ಮಿನೇಟ್ ಮಾಡಿದ್ದಾರೆ. ಹೀಗೆ ಈ ಖಾಸಗೀ ಶಾಲೆಗಳವರು ತಮ್ಮ ಮನಸ್ಸಿಗೆ ಬಂದಹಾಗೆಲ್ಲಾ ಆಡಳಿತ ನಡೆಸುತ್ತಿದ್ದಾರೆ. ಇವರ ಬಗ್ಗೆ ಯಾರೂ ನಿಗಾ ಇಡುತ್ತಿಲ್ಲ. ಅವರು ಆಡಿದ್ದೇ ಆಟವಾಗಿದೆ. ಆ ಉಪಾಧ್ಯಾಯಿನಿಯ ತಂದೆ ಈ ವಿಚಾರದಲ್ಲಿ ಡಿ. ಪಿ. ಐ. ಅವರಿಗೆ ಬರೆದು ಕೊಂಡಿದ್ದರಂತೆ ಅವರಿಂದ ಏನೂ ಆಗಲಿಲ್ಲ ಎಂದು ಬಂದು ನನ್ನಲ್ಲಿ ದೂರು ಹೇಳಿಕೊಂಡರು. ಇಂಥಾದ್ದನ್ನು ಸರ್ಕಾರದವರು ತಡೆಗಟ್ಟಬೇಕೆಂದು ಹೇಳುತ್ತೇನೆ.

ಇನ್ನು ಶಾಲಾ ಕಟ್ಟಡಗಳ ವಿಚಾರಕ್ಕೆ ಬಂದರೆ ಅದನ್ನು ಹೇಳತೀರದಾಗಿದೆ. ಈಗ ತಾಲೂಕ್ ಬೋರ್ಡ್‌ಗಳ ವತಿಯಿಂದ ಕೆಲವು ಶಾಲೆಗಳನ್ನು ನಡೆಸಲಾಗುತ್ತಿದೆ. ಆದರೆ ತತ್ರಾಪಿ ಆ ಬೆಳಗಾಂನಲ್ಲಿ ಕನ್ನಡ ಶಾಲೆಗಳು ಎಲ್ಲಿ ನೋಡಲಿ ಲೇವೇಟರಿ ಪಕ್ಕದಲ್ಲಿರುತ್ತವೆ. ಆ ಅಸಹ್ಯವನ್ನು ಸಹಿಸುವುದಕ್ಕಾಗುವುದಿಲ್ಲ. ಹಾಗಿದ್ದರೂ ಇಲ್ಲಿ ಮಾತ್ರ ಹಿಂದೊಂದಸಾ ಅವರು ಇಲ್ಲಿ ಬೆಂಗಳೂರಿನಲ್ಲಿ ಶಾಲೆಗಳು ಸರಿಯಾದ ಜಾಗದಲ್ಲಿ ಇಲ್ಲ ಎಂದು ಹೇಳುತ್ತಿದ್ದರು. ಆದರೆ ಅದೇ ಮರಾಠಿಶಾಲೆಗಳು ಒಳ್ಳೆ ಭವ್ಯವಾದ ಕಟ್ಟಡಗಳಲ್ಲಿ ಒಳ್ಳೇ ಜಾಗದಲ್ಲಿರುತ್ತವೆ. ಇವಕ್ಕೆ ರಾಜ್ಯ ಸರ್ಕಾರ ಕೊಡತಲೆ ಒಳ್ಳೆ ಭವ್ಯವಾದ ಕಟ್ಟಡಗಳಲ್ಲಿ ಒಳ್ಳೇ ಜಾಗದಲ್ಲಿರುತ್ತವೆ. ಇದಕ್ಕೆ ರಾಜ್ಯ ಸರಕಾರದವರು ಕೂಡಲೆ ಗಮನಕೊಡಬೇಕು. ಗಡಿ ಸರಹದ್ದಿನ ಪ್ರದೇಶಗಳನ್ನು ಉದಾಸೀನ ಮಾಡಬಾರದು.

ಇನ್ನು ನಾನೀಗ ಮೈಸೂರು ವಿಶ್ವವಿದ್ಯಾನಿಲಯದ ವಿಚಾರಕ್ಕೆ ಬರುತ್ತೇನೆ. ಇಲ್ಲಿ ಇತ್ತೀಚಿಗೆ ಅನೇಕ ಪ್ರಕರಣಗಳು ನಡೆದಿವೆ. ಅಲ್ಲಿ ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿಯಮೇಲೆ ಎತ್ತಿಕಟ್ಟುವುದೊಂದೇ ಅಲ್ಲದೇ ಇನ್ನೂ ಅನೇಕ ಕೃತ್ಯಗಳು ನಡೆಯುತ್ತಿವೆ. ಇತ್ತೀಚಿಗೆ ಅಲ್ಲಿ ಕೋಮುವಾರು ಭಾವನೆ ಮೇಲೆ ಕೆಲಸಗಳಾಗುತ್ತಿವೆಯೆಂಬ ದೂರು ಹೆಚ್ಚಾಗಿ ಕೇಳಬರುತ್ತಿದೆ. ನಾನೂ ಕೂಡ ಹಿಂದೊಮ್ಮೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸಮಾಡಿದ ವಿದ್ಯಾರ್ಥಿ. ಆದರೆ ಆಗಿನ ಕಾಲಕ್ಕೂ ಈಗ ಅಲ್ಲಿರತಕ್ಕ ವಾತಾವರಣಕ್ಕೂ ಏನೇನೂ ಸಂಬಂಧವಿಲ್ಲ. ಈಗ ಅಲ್ಲಿ ಕಾಲೇಜಿನ ವಿದ್ಯಾರ್ಥಿಗಳು—ಸೈಕಲ್ ಚೈನ್, ಕಬ್ಬಿಣದ ಬಾರ್, ಪಿಸ್ತೂಲ್, ಕುಡಿಗೋಲು ಮಚ್ಚು ಇತ್ಯಾದಿಗಳನ್ನು ತೆಗೆದುಕೊಂಡು ಬರುತ್ತಿದ್ದಾರೆಂದರೆ ಅಲ್ಲಿ ಯಾರಿಗೆ ಇನ್ನು ಬೆಲೆ ಇದೆ? ಸಿಂಡಿಕೇಟಿಗಾಗಲೀ, ಸೆನೆಟ್ಟಿಗಾಗಲೀ, ವೈಸ್ ಛಾನ್ಸಲರಿಗಾಗಲೀ ಯಾರಿಗೂ ಬೆಲೆಯಿಲ್ಲ ಎಂದಾಯಿತು. ಅಲ್ಲಿ ವೈಸ್ ಛಾನ್ಸಲರ್ ಬಗ್ಗೆ ನನಗೆ ವಿಶೇಷಗೌರವವಿತ್ತು. ಆದರೆ ಅಲ್ಲಿ ಅವರಿಗೆ ಇತ್ತೀಚೆಗೆ ೩ ವರ್ಷಗಳ ಅಧಿಕಾರ ಸಿಕ್ಕಿದನಂತರ ಅಲ್ಲಿ ಜನರಿಗೆ ಬಹಳ ತೊಂದರೆಯಾಗಿದೆ ಎಂದು ಕೇಳುತ್ತಿದ್ದೇನೆ. ಅಂತೂ ಅಲ್ಲಿಯ ಆಡಳಿತ ದಿನ ದಿನಕ್ಕೂ ಹದಗೆಡುತ್ತಿದೆ ಎಂಬ ದೂರನ್ನು ಕೇಳುತ್ತಿದ್ದೇನೆ. ಅದಕ್ಕೆ ಕಾರಣ ಅಲ್ಲಿ ಪ್ರತಿಯೊಂದು ಜಾತೀ ಆಧಾರದ ಮೇಲೆ ನಡೆಯುತ್ತಿರುವುದೇ ಕಾರಣವೆಂದು ಹೇಳಲಾಗುತ್ತಿದೆ. ಅಲ್ಲಿ ಮಾನಸಗಂಗೋತ್ರಿಯಲ್ಲಿ ಪಾಠ ಮಾಡುತ್ತಿದ್ದವರನ್ನು ಎಳೆದು ತಂದು ಹೊಡೆಯುವುದು ಎಂದರೇನು? ಹೆಣ್ಣು ಮಕ್ಕಳ ರೂಮಿಗೆ ನುಗ್ಗುವುದೆಂದರೇನ ? ಹೀಗೆ ಅಲ್ಲಿ ದೊಡ್ಡ ಗೂಂಡಾಯಿಸಂ ನಡೆಯುತ್ತಿದೆಯೆಂದು ಕೇಳಿ ನನಗೆ ತುಂಬಾ ವ್ಯಥೆಯಾಯಿತು. ಸರ್ಕಾರ ಆ ಸಂಸ್ಥೆಗೆ ಕೊಟ್ಟ ಅಧಿಕಾರವನ್ನೆಲ್ಲಾ ಅದು ಸಂಪೂರ್ಣವಾಗಿ ದುರುಪಯೋಗಮಾಡಿಕೊಂಡಿದೆ, ಆದರಿಂದ ಅಲ್ಲಿ ಆ ಶ್ರೀ ಜವರೇಗೌಡರನ್ನು ಕೂಡಲೆ ಅಲ್ಲಿಂದ ಬದಲಾಯಿಸಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಅಲ್ಲಿನ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗುತದೆ. ಆದುದರಿಂದ ಅಲ್ಲಿಯ ಆಡಳಿತ ಕೂಡಲೇ ಬದಲಾವಣೆಯಾಗಬೇಕು, ಆ ಬಗ್ಗೆ ಒಂದು ವಿಚಾರಣೆ ನಡೆಸಿ ಒಂದು ವರದಿಯನ್ನು ಸರ್ಕಾರ ಈ ಸದನದ ಮುಂದಿಡಬೇಕೆಂದು ಒತ್ತಾಯಮಾಡುತ್ತೇನೆ.

ಈಗಾಗಲೇ ಒಬ್ಬ ಹುಡುಗ ವಿಷ ತೆಗೆದುಕೊಂಡು ಸತ್ತ. ಅದು ಮಹಾರಾಜ ಕಾಲೇಜಿಗೆ ಸಂಬಂಧಪಟ್ಟಹಾಗೆ ಎಂದು ಕಾಣುತ್ತದೆ. ಇಲ್ಲಿ ಮಾನ ಮರ್ಯಾದೆ ಪ್ರಶ್ನೆಯಿದೆ. ಮೈಸೂರು ಯೂನಿವರ್ಸಿಟಿಯ ಬಗ್ಗೆ ಬೇಕಾದಷ್ಟು ಅಪಾದನೆಗಳಿವೆ. ಆದುದರಿಂದ ದಯಮಾಡಿ ಅದಕ್ಕಾಗಿ ಒಬ್ಬ ಹೈಕೋರ್ಟ್ ಜಡ್ಜನ್ನು—ರಿಟೈರ್ ಆಗಿರುವವರಲ್ಲ, ಅಧಿಕಾರದಲ್ಲಿರುವವರನ್ನು ಹಾಕಿ ನ್ಯಾಯಾಂಗ ಅಧಿಕಾರಿಯಿಂದ ತನಿಖೆ ಮಾಡಿಸಬೇಕು, ಸತ್ಯ ಮತ್ತು ಅಸತ್ಯವೇನಿದೆ ಅದನ್ನು ಬೆಳಕಿಗೆ ತರಬೇಕು ಎಂಬ ಬೇಡಿಕೆಯನ್ನು ತಮ್ಮ ಮೂಲಕ ಇಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

†SRI M. VEERAPPA MOILY (Karkal) : Mr. Deputy Speaker, while lending my support to the Demands presented by the Hon'ble Minister for Education, I would like to analyse a few facts about the system of education and the evils prevailing in our system. The great man Mr. H. G. Wel's once stated that human history becomes more and more a race between education and catastrephy. I would like to stress this point while analysing the education that we are receiving, viz., ubran education. Emphasis should be more on rural education. From the Annul Report presented to this House, I find that by education we mean only the urban education, and what we find from the report and what is prevailing is that schooling is the only system of education by which we can educate the people. In a democratic set-up like this,

it may take 50 years or more than 100 years to fulfil the ambitions and aspirations that we have chalked out while framing the Constitution, and we have to see whether this constitutional setup, this democrathe set up will remain stable and it could be sustained if we postpone of only think in terms of school education The preamble of our Constitution assures in a democratic society justice, social, economic and political; liberty of thought, expression belief, faith and worship, equality of status and opportunity. It also assures promoting fraternity, the dignity of the individual to unity of the Nation. All form of inequalities and exploitation are based on individual liberty and social solidarity and co-operation. I would like to deal with this subject later in detail. But before that I would like to point out that our Universities are facing the crisis of five kinds: (1) crisis of numbers the number is increasing and over-increasing and the Government trying to chase at it and often do provide more number. Is it going to solve the question or is it possible to increase the quantity at the cost of the quality The second is the crisis of finance, and the third is the crisis of relevance. We have to see whether we can make use of this education in our practical life. The fourth is the crisis of new priorities that our Universities are receiving; whether the balance of new and old priorities has got any productive value We have to see whether the University students, when they come out of the University campus, would be in a position to get a fitting job or their knowledge could be applied elsewhere. The fifth is the crisis of the new scepticism. A rational discourse and thought is necessary because truth should be fought from the examination of the world around and not from mysticism and from dark reaches of the mind. This aspect and norms have got to be applied in our system of education. I do not think that any reform has got to be done to improve the quality of education that is being given in the Universities because the Universities are autonomous bodies and they have got their own committees like Text-book Committee and several other committees But in order to overcome the fifth crisis it is necessary that the entire infrastructuse has got to be changed. Inclusion of some principals are some professors of the University or the College from the Text-book committee. It is not just sufficient. The Government has got to see that research scholars in education are put in the Text-book Committee and proper principles and solution is evolved. Much has been stated about the working of the Universities. I do not subscribe to it the Nazi Government instilled superiority in education and we know how the Germans suffered from such aset up of education. We read in the papers that our Universities are instilling caste feelings. the said systems perpetuate the system adopted by the Nazi Government it is necessary that as suggestey by other members a Commission has got to be appointed because we have got to clear the doubts-some doubts are well-founded.

About private institutions-Colleges, Secondary and primary schools, Government is spending so much money by way of maintena-

nce grant, and the pay, allowances, etc., But the evil of indiscipline is all pervading in these institutions. I suggest that a pool of staff is appointed for the private colleges, the Government should take up the responsibility to recruit the staff and maintain discipline.

According to the Kothari Commission, the P.U.C. education has been adopleted in this Junior Colleges. It is a national policy. My personal view is that the P.U.C. education is a luxury. I feel that these two years after the S.S.L.C., could have been better utilised for purposeful education. This will postpone unemployment problem for 2 years, because no sooner a person passes S.S.L.C., he will automatically go to the College. If purposeful education on the lines of Sainik education is taken up and rush to colleges would be avoided and it will make life and education purposefud If schools on the pattern of Sainik schools are started, training coull. be given for creative studies.

By this model pattern, we can just see how it works out. The Sainik pattrn would give a chance, within these two years, to deviate his attention from going to the regular college for studies. By this method, we can decrease the number of students seeking admission in the colleges.

I woud like to make a few suggestions with regard to the rural education in our State and this could be done by several ways. The rural education is particularly necessary now in order to sustain the democracy which has been assured to us by our Constitution. I am suggesting the rual education for many reas on. One important reason is the economic reason. We should know that most of our people are uneducated and those are the people who build the economic structure of our country because they have go tto prepare themselves for the local market, for the national market and the international markets. The elements of economics should be taught to these uneducated people.

The second reason is the political reason. We cannot forget the fact that it is the village panchayats and the several communities which shape the destiny of our country. The uneducated mass should be made knew the elemenrary of laws which governour judicay and the administrative machinery. It is also necessary for the these people to study the programmes and the policies of the various political parties in our country.

The third reason is the social reason. It is the social status which helps a person to live in the society. For all these years. It is now onely the principle of contract which govern a person and not the status as given by him by virtue of his birth in a certain community.

The last but one reason is the ethical reason. It is necessary that the students are made know the equality of individual liberty. The last one is the cultural reason. In order to make him national-minded and to make him know the social solidarity, it is necessary that a perlon should know the importance of these things.

All the above things could be taught not only by schooling but by several modern techniques and methods in the process of rural education, It is necessary to launch a big rural education programme. In this behalf. I do not think that we can sustain our democracy unless our rural education is given more emphasis.

With these few words, I thank the Chair and conclude my speech.

† ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಸಭಾಪತಿಗಳೇ, ಕೇವಲ ಹತ್ತು ನಿಮಿಷಗಳಲ್ಲಿ ಈ ರಾಜ್ಯದ ಮಹತ್ವದ ಬೇಡಿಕೆಯ ಮೇಲೆ ಅಭಿಪ್ರಾಯ ವ್ಯಕ್ತ ಮಾಡುವುದು ಕಠಿಣವಾದರೂ ಅಷ್ಟೇ ಸಮಯದಲ್ಲಿ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮುಖ್ಯವಾಗಿ ಪ್ರೀ ಪ್ರೈಮರಿ ಎಜುಕೇಷನ್ ಮತ್ತು ಶಿಕ್ಷಣದ ವಿವಿಧ ಭಾಗಗಳ ಬಗ್ಗೆ ಮಾತನಾಡುತ್ತೇನೆ. ಅನೇಕ ಸದಸ್ಯರು ಯೂನಿವರ್ಸಿಟಿ, ಹೈಸ್ಕೂಲು ಮೇಲೆ ಮಾತನಾಡಿದ್ದಾರೆ. ನಾವು ಹಳ್ಳಿಗಾಡಿನಿಂದ ಬಂದಂಥ ಮನುಷ್ಯ. ಶಿಕ್ಷಣಕ್ಕಾಗಿ ಸುಮಾರು ೮೧ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇದರಲ್ಲಿ ಹಳ್ಳಿಗರ ಉದ್ಧಾರಕ್ಕೆ ಎಷ್ಟು ಮಾತ್ರ ಸಹಾಯವಾಗುತ್ತದೆಂದು ವಿಚಾರ ಮಾಡಿದರೆ ಶಿಕ್ಷಕರಿಗೆ, ಸರ್ಕಾರಿ ನೌಕರರಿಗೆ ಪಗಾರ ಕೊಡುವ ಮಟ್ಟಿಗೆ ಸಹಾಯವಾಗಬಹುದೇ ಹೊರತು ಯಾವ ಹಳ್ಳಿಯವನಿದ್ದಾನೆ, ಅವನಿಗೆ ಹೆಚ್ಚು ಸಹಾಯವಾಗುವುದಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ೮೦ ಪರ್ಸೆಂಟ್ ಹಳ್ಳಿಗರಿರುವ ಈ ರಾಜ್ಯದಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಅವರಿಗೆ ವಿದ್ಯಾಭ್ಯಾಸ ಕೊಡುವುದಕ್ಕೆ ಖರ್ಚು ಮಾಡಿದರೂ ಸಾಲದು. ಕನಿಷ್ಟಪಕ್ಷ ಎರಡು ಮೂರು ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಿ ಹಳ್ಳಿಗಳಲ್ಲಿ ಬಾಲವಾಡಿಗಳನ್ನು ತೆರೆಯುವ ವ್ಯವಸ್ಥೆ ಮಾಡಬೇಕು. ಹಳ್ಳಿಯಲ್ಲಿರುವ ಕುಟುಂಬಗಳಲ್ಲಿ ಹತ್ತಿಪ್ಪತ್ತು ಕುಟುಂಬಗಳು ಉತ್ತಮ ಸ್ಥಿತಿಯಲ್ಲಿರಬಹುದು. ಹರಿಜನ ಗಿರಿಜನರು ಮತ್ತು ಬಡವರು ಒಂದೇ ಸ್ಥಿತಿಯಲ್ಲಿದ್ದು ಯಾರಿಗೂ ಭೂಮಿ ಇಲ್ಲ, ಉದ್ಯೋಗ ವ್ಯವಸ್ಥೆ ಇಲ್ಲ. ಹರಿಜನ ಗಿರಿಜನರಿಗೂ ಇತರರಿಗೂ ಭೇದ ಮಾಡಲಾರದೆ ಪ್ರತಿಯೊಬ್ಬರಿಗೂ ಬಾಲವಾಡಿ ವ್ಯವಸ್ಥೆಯನ್ನು ಮಾಡಲೇಬೇಕು. ಬಾಲಕರಿಗೆ ಶಾಲೆಗೆ ಕಳುಹಿಸುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಒಂದು ಕಾಯಿದೆಯನ್ನು ಮಾಡಿ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು. ಇಲ್ಲದೆ ಹೋದರೆ ಗುನ್ಹೆಯಾಗುತ್ತದೆ ಎಂದು ತಿಳಿಯಪಡಿಸಬೇಕು. ರಾಜ್ಯದಲ್ಲಿ ಕಳ್ಳರಿದ್ದರೂ ಚಿಂತೆ ಇಲ್ಲ, ಸುಳ್ಳರಿದ್ದರೂ ಚಿಂತೆ ಇಲ್ಲ. ಆದರೆ ಮಳ್ಳರು ಮಾತ್ರ ಉಳಿಯಬಾರದು. ದೇಶಕ್ಕೆ ಬರುವಂಥ ತೊಂದರೆ ಕಳ್ಳರಿಂದಲ್ಲ. ಕಳ್ಳರು ವಕೀಲರ ಸಹಾಯದಿಂದ ಉಳಿಯುತ್ತಾನೆ ಅಥವಾ ಜೈಲಿಗೆ ಹೋಗುತ್ತಾನೆ. ಸುಳ್ಳನು ಏನಾದರೂ ಯೋಜನೆಮಾಡಿ ಒಂದು ರೀತಿಯಲ್ಲಿ ಜೀವನ ಸಾಗಿಸುತ್ತಾನೆ. ಮಳ್ಳರು ಎಂದರೆ ಅಜ್ಞಾನಿಗಳ ಸಲುವಾಗಿ ಬಾಲವಾಡಿಗಳನ್ನು ಮಾಡಲೇಬೇಕು. ಎಲ್ಲ ಮಕ್ಕಳನ್ನೂ ಬಾಲವಾಡಿಗೆ ಕಡ್ಡಾಯವಾಗಿ ಕಳುಹಿಸಲೇಬೇಕು ಎನ್ನುವ ನಿರ್ಬಂಧವನ್ನು ಹಾಕಬೇಕು. ಈ ಹೊಣೆಯನ್ನು ಅಲ್ಲಿನ ಪಂಚಾಯಿತಿಯ ಮೇಲೆ ಮತ್ತು ಪ್ರಮುಖರ ಮೇಲೆ ಹಾಕಬೇಕು. ವಿದ್ಯಾ ಇಲಾಖೆಯಲ್ಲಿ ಏನಾದರೂ ಅನ್ಯಾಯವಾದರೆ ಅದಕ್ಕೆ ನಾವು ಮಂತ್ರಿಗಳನ್ನು ಹೇಗೆ ಜವಾಬ್ದಾರಿ ಹಿಡಿಯುತ್ತೇವೆಯೋ ಅದೇ ಪ್ರಕಾರವಾಗಿ ಪಂಚಾಯಿತಿ ಸದಸ್ಯರು ಪ್ರಮುಖರು ಯಾರಿದ್ದಾರೆ ಅವರನ್ನು ಆ ಊರಿನಲ್ಲಿರುವ ಮಕ್ಕಳನ್ನು ಶಾಲೆಗೆ ಮತ್ತು ಬಾಲವಾಡಿಗೆ ಕಳುಹಿಸದೆ ಇದ್ದರೆ ಜವಾಬ್ದಾರರನ್ನಾಗಿ ಮಾಡಿ ಗುನ್ಹೆ ಹಾಕಬೇಕು. ಇಂಥ ತಪ್ಪಿಗೆ ಇಡೀ ಊರೇ ಜವಾಬ್ದಾರಿ ಎಂದು ತಿಳಿದುಕೊಂಡು ಅವರ ಮೇಲೆ ಕೇಸನ್ನು ಹಾಕಲಿಕ್ಕೆ ಅವಕಾಶ ಮಾಡಬೇಕು. ಯಾವ ಪಕ್ಷದವರೆ ಮಾತನಾಡಲಿ ಮಹಾತ್ಮ ಗಾಂಧೀಜಿಯವರ ಹೆಸರು ಹೇಳದಿದ್ದರೂ ಪರ್ಯಾಯವಾಗಿ ಹೇಳಿಕೊಂಡೇ ಬರುತ್ತಾರೆ. ನಮ್ಮ ಮಾನ್ಯ ವಿದ್ಯಾಮಂತ್ರಿಗಳು ಶಿಕ್ಷಣ ತಜ್ಞರು ಮತ್ತು ರಾಜಕಾರಣಿಗಳು ಯಾವ ಯಾವ ಪ್ರಾಂತದಲ್ಲಿ ಸರ್ಕಾರಿ ಶಿಕ್ಷಣದ ವ್ಯವಸ್ಥೆಯಲ್ಲಿ ಏನು ಸೂಚನೆ ಮಾಡಿದ್ದಾರೆ, ಶಿಕ್ಷಣದ ವ್ಯವಸ್ಥೆಯಲ್ಲಿ ಏನೇನು ಸೂಚನೆ ಮಾಡಿದ್ದಾರೆ ಮತ್ತು ತಮ್ಮ ಜವಾಬ್ದಾರಿಯನ್ನು ನೀಗಿಸಿಕೊಂಡು ಸ್ವಾವಲಂಬನೆಯ ದೃಷ್ಟಿಯಿಂದ ತಮ್ಮ ಉಪಜೀವನವನ್ನು ಹೇಗೆ ಸಾಗಿಸುತ್ತಾರೆ ಎನ್ನುವ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು ನಮ್ಮ ರಾಜ್ಯದಲ್ಲಿಯೂ ಅದರಂತೆ ವ್ಯವಸ್ಥೆ ಮಾಡಬೇಕು. ಯಾವಾಗಲೂ ಶೋಷಣೆ ಮಾಡತಕ್ಕದ್ದು ಅಜ್ಞಾನಿಗಳನ್ನು. ಅಜ್ಞಾನಿ ನಿರುದ್ಯೋಗಿಗಳಿಗಿಂತ ವಿದ್ಯಾವಂತ ನಿರುದ್ಯೋಗಿಗಳಿದ್ದರೆ ಏನಾದರೂ ವ್ಯವಸ್ಥೆ ಮಾಡುತ್ತಾರೆ, ಅಷ್ಟಾದರೂ ಉಪಯೋಗವಾಗುತ್ತದೆ. ಶಿಕ್ಷಿತರ ಮೇಲೆ ಶೋಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಏನಾದರೂ ಕ್ರಾಂತಿ ಮಾಡುತ್ತಾರೆ. ಏನು ಶಿಕ್ಷಣ ಸಿಕ್ಕಲಿ ಚಲೋ ಶಿಕ್ಷಣ ಸಿಕ್ಕಲಿ ಎನ್ನುವುದು ಎರಡನೆ ವಿಚಾರ. ಅದರ ಸಲುವಾಗಿ ಬಾಲವಾಡಿಗಳನ್ನು ಹಳ್ಳಿಗಳಲ್ಲಿ ಮಾಡಬೇಕು.

4-30 P.M.

ಇದರ ಸಲುವಾಗಿ ನಾನು ಹೇಳುವುದು ಪ್ರತಿಯೊಂದು ಹಳ್ಳಿಯಲ್ಲೂ ಬಾಲವಾಡಿಗಳನ್ನು ತೆರೆಯ ಬೇಕು. ಇಂದು ಹಳ್ಳಿಗಳಲ್ಲಿ ಬರುವ ಲ್ಯಾಂಡ್ ರೆವೆನ್ಯೂ ಉತ್ಪನ್ನ ಇಲ್ಲಿರುವ ಪ್ರೈಮರಿ ಶಾಲೆಗಳಿಗೆ ಕೊಡಲು ಸಾಕಾಗುವುದಿಲ್ಲ. ಇದರಲ್ಲಿ ಪ್ರೈಮರಿ ಹಾಗೂ ಮಾಧ್ಯಮಿಕ ಶಾಲೆಗಳೂ ಬರುತ್ತವೆ. ಇದಲ್ಲದೆ ಇಂದು ಮಾಧ್ಯಮ ಶಾಲೆಗಳಲ್ಲಿ ಹಾಗೂ ಪ್ರೈಮರಿ ಶಾಲೆಗಳಲ್ಲಿ ಬರುತ್ತಿರುವ ಶಿಕ್ಷಕರಿಗೆ ಸರಿಯಾದ ತರಬೇತಿಯೇ ಇರುವುದಿಲ್ಲ. ಇದರಿಂದಾಗಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಚೆನ್ನಾಗಿ ಕೊಡುವುದಾದರೂ ಹೇಗೆ? ಮುಖ್ಯವಾಗಿ ಶಿಕ್ಷಕರುಗಳಿಗೆ ಗ್ರಾಮರ್ ಎಂದರೆ ವ್ಯಾಕರಣದ ಜ್ಞಾನ ಚೆನ್ನಾಗಿರಬೇಕು. ಇಂದಿನ ಶಿಕ್ಷಕರಲ್ಲಿ ಇದು ಕಾಣುವುದೇ ಇಲ್ಲ. ಯಾವನಾದರೂ ಒಬ್ಬರು ಶಿಕ್ಷಕರನ್ನು ವ್ಯಾಕರಣದ ಬಗ್ಗೆ ಉದಾಹರಣೆಯಾಗಿ ಪ್ರಥಮ ಪುರುಷಕ್ಕೆ ಸರ್ವನಾಮ ಪದದ ಒಂದು ಧಾತು ಸೇರಿದರೆ ಕ್ರಿಯಾಪದವಾಗುತ್ತದೆ ಎಂದು ಒಂದು ಸೂತ್ರ ವ್ಯಾಕರಣದಲ್ಲಿದೆ. ಇದರ ಬಗ್ಗೆ ಯಾವ ಶಿಕ್ಷಕರನ್ನಾದರೂ ಕೇಳಿದರೆ ಅವರಿಗೇನೂ ಗೊತ್ತಿಲ್ಲ ಎನ್ನುತ್ತಾರೆ. ಇಂದು ದೇಶದಲ್ಲಿ ಉತ್ತಮ ರಾಜ್ಯದ ಆಡಳಿತ ಮಾಡಬೇಕೆಂದು ಜನರ ಮೇಲೆ ಇಲ್ಲದ ಕರಭಾರವನ್ನು ಹೇರಿ ಅಂತಹವರಿಂದ ಯದ್ವಾತದ್ವಾ ವೋಟುಗಳನ್ನು ಯದ್ವಾತದ್ವಾ ಸರಕಾರವನ್ನು ಮಾಡುವಂತಹ ಸರಕಾರವಾಗಿದೆ ಈಗ. ಇಂತಹ ವೇಳೆಯಲ್ಲಿ ಚುನಾವಣೆ ಮಾಡಿದರೆ ಇದಕ್ಕೇನು ಮಹತ್ವ ಸಿಕ್ಕುತ್ತದೆ? ಇಂದು ನಮ್ಮ ಪೋಲೀಸು ಡಿಪಾರ್ಟ್‌ಮೆಂಟು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಿಮ್ಮಲ್ಲಿರುವ ಪೋಲೀಸು ಅಧಿಕಾರಿಗಳಲ್ಲಿ ಕ್ರಿಮಿನಲ್ ಮೆಂಟಾಲಿಟಿ ಏಕೆ ಹೆಚ್ಚಾಗುತ್ತದೆ ಎನುವುದನ್ನು ಯಾರಾದರೂ ಪರಿಶೀಲಿಸಿದ್ದಾರೆಯೇ. ಇತ್ತೀಚೆಗೆ ರತ್ನಗಿರಿ ಹಾಗೂ ಕಾರವಾರಗಳಲ್ಲಿರುವ ಪೋಲೀಸರಿಂದ ಇಂತಹ ನಿದರ್ಶನಗಳು ನಡೆಯುವುದನ್ನು ನಾವು ನೋಡಿದ್ದೇವೆ ಇದಕ್ಕಾಗಿ ಎಲ್ಲರಿಗೂ ಸರಿಯಾದ ವಿದ್ಯೆ ಕೊಡುವಂತಹ ಶಿಕ್ಷಕರು ನಮಗೆ ಇಂದು ಅವಶ್ಯವಾಗಿದೆ. ಶಿಕ್ಷಣ ಸರಿಯಾಗಿ ಕೊಡಬೇಕು. ಇದಕ್ಕಾಗಿ ನಾನು ಹೇಳುವುದು ಇಂದು ಪಾಶ್ಚಿಮಾತ್ಯ ದೇಶಗಳಲ್ಲಿರುವಂತೆ ನಮ್ಮಲ್ಲೂ ಕೂಡ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು. ಇಂದು ನಾವು ನೋಡುತ್ತಿರುವಂತೆ ಎಸ್‌ಎಸ್‌ಎಲ್‌ಸಿ ಪಾಸಾದ ನಂತರ ಯಾರಾದರೂ ಎಂಎಲ್‌ಎ ಗಳಿಂದ ಸರ್ಟಿಫಿಕೇಟು ಪಡೆದು ಕೆಲಸಗಳಿಗಾಗಿ ಪರದಾಡುತ್ತಿದ್ದಾರೆ. ನಮ್ಮ ಕರ್ನಾಟಕ ದೇಶದಲ್ಲಿ ಸಮಾಜ ಯಾವ ರೀತಿ ಇದೆ ಎಂದರೆ ಯಾರು ಸರಕಾರದ ನೌಕರರುಗಳು ಇರುತ್ತಾರೋ ಇವರಿಗೆ ಯಾವ ಸಮಸ್ಯೆಗಳೂ ಇಲ್ಲ ಎಂದು ಒಂದು ರೀತಿಯಾದ ಮನೋಭಾವನೆ ಕಂಡು ಬರುತ್ತಿದೆ ಇಂದು ಹಳ್ಳಿಗಾಡಿನ ಜನರ ಕಷ್ಟ ಸುಖಗಳೇನು ಎಂದು ಇಲ್ಲಿ ನಾವು ಅಸೆಂಬ್ಲಿಯಲ್ಲಿ ಹೇಳಬಹುದು ಆದರೆ ಶಿಕ್ಷಕರಾಗಿ ಬರುವವರು ಸರಕಾರದಿಂದ ಪಗಾರ ಪಡೆಯುತ್ತಾರೆ ಮತ್ತು ಏನೋ ಒಂದು ರೀತಿಯಾದ ಶಿಕ್ಷಣ ಕೊಡಬೇಕೆಂದು ಕೊಡುತ್ತಾರೆ. ಇಂತಹ ಒಂದು ಮನೋಭಾವ ಶಿಕ್ಷಕರಲ್ಲಿರಬಾರದು. ಶಿಕ್ಷಕರಾದವರು ಶಿಕ್ಷಣದ ಮಹಿಮಾ ಏನು ಎಂದು ಅರಿತುಕೊಂಡು ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಬೇಕು ಇದಕ್ಕಾಗಿ ನಾನು ಸಲಹೆ ಮಾಡುವುದು ಇಂದು ಬಿಎ ಮಾಡಿರುವ ಗ್ರ್ಯಾಜುಯೇಟರುಗಳು ಕೆಲಸವಿಲ್ಲದೆ ಇದ್ದಾರೆ. ಇಂತಹವರಿಗೆ ಬಿಎಡ್ ಹಾಗೂ ಟಿಟಿ ಕೋರ್ಸುಗಳಲ್ಲಿ ತರಬೇತಿ ಕೊಡಿಸಿ ಇಂತಹವರನ್ನು ಮೊದಲಿಗೇ ಪ್ರೈಮರಿ ಶಾಲೆಗಳಿಗೆ ನೇಮಿಸಿದರೆ ಇವರಿಂದ ಮಕ್ಕಳಿಗೆ ಒಳ್ಳೆಯ ವಿದ್ಯೆ ಪಡೆಯಲು ಅವಕಾಶ ಸಿಗುತ್ತದೆ. ಪ್ರೈಮರಿ ಶಾಲೆಗಳಲ್ಲಿ ನಾನೂರು ಪಗಾರ ಕೊಡಲು ಸಾಧ್ಯವಾಗದಿರಬಹುದು, ಆಯಾ ಸ್ಥಳದಲ್ಲಿರುವ ಇಂತಹವರಿಗೆ ಅಲ್ಲಿನ ಪ್ರೈಮರಿ ಶಾಲೆಗಳಲ್ಲಿ ನೇಮಕ ಮಾಡಿ ನೂರು ರೂಪಾಯಿಗಳ ಪಗಾರ ಕೊಟ್ಟರೆ ಇದರಿಂದ ಎಷ್ಟೋ ಅನುಕೂಲಗಳಾಗುತ್ತವೆ. ಇನ್ನು ಕೋ ಎಜುಕೇಷನ್ ಬಗ್ಗೆ ಒಂದೇ ಒಂದು ಮಾತು ಇಲ್ಲಿ ಹೇಳಬೇಕಾಗಿದೆ. ಕಾಲೇಜುಗಳಲ್ಲಿ ಹೆಣ್ಣು ಮಕ್ಕಳೊಡನೆ ಗಂಡು ಮಕ್ಕಳಿಗೂ ಸೇರಿದಂತೆ ಶಿಕ್ಷಣ ಕೊಡುವುದು ಒಳ್ಳೆಯದಲ್ಲ ಎನ್ನುವುದು ನನ್ನ ಪ್ರಾಮಾಣಿಕವಾದ ಅಭಿಪ್ರಾಯ. ಇಂದು ಇಂಗ್ಲೆಂಡಿನಲ್ಲಿ ಇಂತಹ ಪದ್ಧತಿ ಇರಬಹುದು. ಅದನ್ನು ನಾವೇಕೆ ಇಲ್ಲಿ ಅನುಕರಣೆ ಮಾಡಬೇಕು? ನಮ್ಮ ದೇಶದಲ್ಲಿ ಕೋ ಎಜುಕೇಷನ್ ಇರಬಾರದು. ನಾನು ಈ ಅಸೆಂಬ್ಲಿಗೆ ಬಂದಾಗ ಕಾಲೇಜು ವಿದ್ಯಾರ್ಥಿಯಾಗೂ ಇದ್ದೆ ಆದುದರಿಂದ ಕಾಲೇಜುಗಳಲ್ಲಿರುವ ಹುಡುಗರು ಏನು ಮಾಡುತ್ತಾರೆ ಎನ್ನುವುದನ್ನು ನಾನು ಅರಿತುಕೊಂಡೇ ಇದನ್ನು ಹೇಳುತ್ತಿರುವುದು. ಎಂತಹ ಅಶ್ಲೀಲವಾದ ವಾತಾವರಣ ಇಲ್ಲಿದೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಇದಕ್ಕಾಗಿ ನಾನು ನನ್ನ ಮಗಳನ್ನು ಎಂಬಿಬಿಎಸ್ ವರ್ಗಕ್ಕೆ ಸೇರಿಸಬೇಕೋ ಬೇಡವೋ ಎಂದು ಅನುಮಾನಿಸುತ್ತಿದೆ.

ಇಂತಹ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸದ ಪದ್ಧತಿಯನ್ನು ಬದಲಾವಣೆ ಮಾಡುವುದು ಬಹು ಮುಖ್ಯ. ಹಳ್ಳಿಗಾಡಿನ ಜನಕ್ಕೆ ಅನುಕೂಲವಾಗುವಂತೆ ವಿದ್ಯಾ ಇಲಾಖೆಯಲ್ಲಿ ಖರ್ಚು ಮಾಡಬೇಕು. ಇಲ್ಲಿರುವ ಅನಕ್ಷರಸ್ಥರನ್ನೆಲ್ಲಾ ಅಕ್ಷರಸ್ಥರಾಗಿ ಮಾಡುವಾಗ ಇದಕ್ಕೆ ಸ್ವಲ್ಪ ಹೆಚ್ಚು ಖರ್ಚಾದರೂ ಚಿಂತೆ ಇಲ್ಲ ಎಂದು ಮಾಡಬೇಕು. ಇಂದು ಚುನಾವಣೆಗಳಿಗಾಗಿ ಬೇಕಾದ ಹಾಗೆ ಖರ್ಚು ಮಾಡುತ್ತಿದ್ದಾರೆ. ಲ್ಯಾಂಡ್

ರವೆನ್ನೂ, ಕೊಡುವ ರೈತ ಕೂಡ ಸರ್ಕಾರಕ್ಕೆ ಇಂತಿಷ್ಟು ಹಣ ಎಂದು ಕೊಡುವಾಗ ಅವರು ಸರಕಾರದಿಂದ ಸಾಕಷ್ಟು ಸಹಾಯವನ್ನು ಕೇಳುವುದು ಸಹಜವಾಗಿಯೇ ಇರುತ್ತದೆ. ರೈತರಿಗೆ ಅನ್ಯಾಯಗಳಾಗದಂತೆ ಕೆಲಸಗಳನ್ನು ಮಾಡುವುದು ಅವಶ್ಯವಾಗಿದೆ. ಏನೆಂದರೆ ನಮ್ಮ ರಾಜ್ಯದಲ್ಲಿ ಎಲ್ಲಿ ತಪ್ಪಾಗುತ್ತದೆ ಎನ್ನುವುದನ್ನು ಅವರು ನೋಡಿಕೊಳ್ಳುವದಿಲ್ಲ. ಆದರೆ ಈ ದಿಶೆಯಲ್ಲಿ ಮಹಾರಾಷ್ಟ್ರದಲ್ಲಿ ಸರ್ವೆ ನಡಿಸಿದರು. ಪ್ರತಿಯೊಂದು ಹಳ್ಳಿಯಲ್ಲೂ ಎಷ್ಟು ಹೆಣ್ಣು ಮಕ್ಕಳು ವಿದ್ಯಾವಂತರಾಗಿದ್ದಾರೆ ಮತ್ತು ಎಷ್ಟು ಜನಕ್ಕೆ ವಿದ್ಯೆ ಸಿಗುತ್ತಿಲ್ಲ ಮತ್ತು ಪ್ರತಿಯೊಂದು ಹಳ್ಳಿಯಲ್ಲೂ ಎಷ್ಟು ಜನರಿಗೆ ಉದ್ಯೋಗಗಳನ್ನು ಮಾಡಲಿಕ್ಕೆ ಅವಕಾಶ ಇದೆ ಮತ್ತು ಪ್ರತಿಯೊಂದು ಹಳ್ಳಿಯಲ್ಲೂ ಎಷ್ಟು ಶಾಲೆಗಳಿವೆ ಇವುಗಳ ಬಗ್ಗೆ ವಿವರಗಳನ್ನು ಪಡೆದು ಅದಕ್ಕೆ ತಕ್ಕಂತ ಖರ್ಚನ್ನೂ ಅಳವಡಿಸಬೇಕೆಂದು ಒಂದು ಯೋಜನಾ ಮಾಡಿದ್ದರು ಎಂದು ಕೇಳಿದ್ದೇನೆ. ಇದರಂತೆ ನಮ್ಮ ರಾಜ್ಯದಲ್ಲೂ ಕೂಡ ಜವಾಬುದಾರಿಯುಳ್ಳ ನಿಮ್ಮ ಪಾರ್ಟಿಯವರೇ ಆಡಳಿತದಲ್ಲೂ ಇರುವಾಗ ಇಂತಹ ಒಂದು ಸರ್ವೆ ಮಾಡಿ ಎಲ್ಲರಿಗೂ ವಿದ್ಯಾಭ್ಯಾಸ ಕೊಡುವುದು ಸರಕಾರದ ನೈತಿಕ ಜವಾಬುದಾರಿ. ಇದರ ಮೇಲೆ ಟ್ಯಾಕ್ಸ್ ಹಾಕಿ ಎಂದು ಹೇಳಬಹುದು. ಆದರೆ ಇಂದು ಸೇಂದಿ ಅಂಗಡಿಗಳನ್ನು ತೆರೆಯಲು ಅವಕಾಶ ಕೊಟ್ಟಿರುವುದರಿಂದ ಸರಕಾರಕ್ಕೆ ಹೆಚ್ಚು ಹಣ ಬರುತ್ತಿದೆ. ಇದರಿಂದ ಸ್ವಲ್ಪ ಹಣವನ್ನು ವಿದ್ಯಾ ಖಾತೆಗೆ ಕೂಡ ಕೊಡಬಹುದು. ಇಂದು ಸೇಂದಿ ಅಂಗಡಿಗಳನ್ನು ತೆರೆಯಲು ಅವಕಾಶ ಕೊಟ್ಟಿರುವುದರಿಂದ ಏನಾಗಿದೆ ಎಂದರೆ ಇಲ್ಲಿ ಜನ ಏನು ತಪ್ಪು ಮಾಡಿದರೂ ಅವರಿಗೆ ಶಿಕ್ಷೆಯೇ ಆಗುವುದಿಲ್ಲ. ಕೇಡಿಗಳ ಧರೂ ಫಾಶಿ ಶಿಕ್ಷೆ ಆಗುವುದಿಲ್ಲ. ಆದ್ದರಿಂದ ಸೇಂದಿ ಅಂಗಡಿಗಳನ್ನು ತೆರೆಯಲು ಅವಕಾಶ ಕೊಟ್ಟಿರುವುದು ತಪ್ಪು.

ಇನ್ನು ಒಂದೇ ಒಂದು ವಿಚಾರ ನಮ್ಮ ಬರಗಾಲದ ಪ್ರದೇಶಗಳ ಬಗ್ಗೆ ಹೇಳಬೇಕಾಗಿದೆ. ನಮ್ಮ ಭಾಗದಲ್ಲಿ ಬರಗಾಲದ ಪ್ರದೇಶಗಳು ಹೆಚ್ಚಾಗಿವೆ. ಅದರಲ್ಲೂ ನನ್ನ ಕ್ಷೇತ್ರ ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತದೆ ಎಂದರೆ ಬಿಜಾಪುರ, ಸಿಂಧಗಿ ಹಾಗೂ ಇಂಡಿ ಇವೆಲ್ಲಾ ಬ್ಯಾಕ್‌ವರ್ಡ್ ಏರಿಯಾಗಳು. ಇದಕ್ಕಾಗಿ ನಾನು ಸಲಹೆ ಮಾಡುವುದು ಮುಂದೆ ಸರಕಾರಿ ಹೈಸ್ಕೂಲುಗಳನ್ನು ಹೊಸದಾಗಿ ಪ್ರಾರಂಭ ಮಾಡುವಾಗ ನಮ್ಮ ಈ ಭಾಗಗಳನ್ನೂ ಸಹ ಗಮನದಲ್ಲಿಟ್ಟುಕೊಂಡು ಆ ಶಾಲೆಗಳಿಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತೇನೆ. ಇದುವರೆಗೆ ನಮ್ಮಲ್ಲಿದ್ದ ಖಾಸಗಿ ಶಾಲೆಗಳು ಈಗ ಎಲ್ಲವನ್ನೂ ಸರಕಾರವೇ ತೆಗೆದುಕೊಳ್ಳುತ್ತದೆ ಎಂದು ಕೇಳಿದ್ದೇವು. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೈಸ್ಕೂಲುಗಳು ಹೆಚ್ಚು ಇಲ್ಲ. ಇದರ ಕಡೆಗೆ ಲಕ್ಷ್ಯ ಕೊಡಬೇಕು ಮತ್ತು ಇಂದು ಇರುವ ಶಿಕ್ಷಣ ಪದ್ಧತಿಯನ್ನು ಪೂರ್ಣವಾಗಿ ಬದಲಾವಣೆ ಮಾಡುವುದು ಅವಶ್ಯ ಇದೆ. ಇದರ ಬಗ್ಗೆ ಸರಕಾರ ಲಕ್ಷ್ಯ ಕೊಡಬೇಕೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್). – ಮಾನ್ಯ ಅಧ್ಯಕ್ಷರೇ, ಈ ದಿವಸ ವಿದ್ಯಾಮಂತ್ರಿಗಳು ಇಲ್ಲಿ ೧೮, ೨೧ ಹಾಗೂ ೨೪ನೇ ಡಿಮ್ಯಾಂಡುಗಳು ಏನು ತಂದಿದ್ದಾರೋ ಅದನ್ನು ಸಂಪೂರ್ಣವಾಗಿ ಬೆಂಬಲಿಸುತ್ತ ಕೆಲವಾರು ಸಲಹೆಗಳನ್ನು ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಇಲ್ಲಿ ನಮಗೆ ಒದಗಿಸಿರುವ ವಾರ್ಷಿಕ ವರದಿಯನ್ನು ನೋಡಿದಾಗ ಬಹು ಭಾಗ ಸಾಕ್ಷರತೆಯಲ್ಲಿ ನಿರೀಕ್ಷಿಸಿದಂತೆ ಆಗಿಲ್ಲ ಎನ್ನುವುದು ಇದರಲ್ಲಿರುವ ಮೂರನೇ ಪುಟದಲ್ಲಿರುವ ಅಂಕಗಳಿಂದ ವ್ಯಕ್ತವಾಗುತ್ತದೆ. ಇವರ ವರದಿಯ ಮೂರನೇ ಪುಟದಲ್ಲಿ ಹೇಳಿರುವಂತೆ ೧೯೬೦ನೇ ಇಸವಿಯಲ್ಲಿ ೩೨,೦೦೦ ಪ್ರೈಮರಿ ಸ್ಕೂಲುಗಳು ಇದ್ದದ್ದು ೧೯೬೩-೬೪ರಲ್ಲಿ ೩೨,೮೪೦ಕ್ಕೇರಿದೆ. ಹೀಗೆ ಸೆಕಂಡರಿ ಎಜುಕೇಷನ್ ಬಗ್ಗೆ ಹೇಳುತ್ತ ೧೯೬೦ರಲ್ಲಿ ೧೯೩೪ ಎಂದು ಇದ್ದದ್ದು ೧೯೬೩-೬೪ರಲ್ಲಿ ೨೨೨೩ಕ್ಕೇರಿದೆ. ಇದಕ್ಕೆ ತಕ್ಕಂತೆ ಉಪಾಧ್ಯಾಯರುಗಳ ಸಂಖ್ಯೆ ಬಹುಶಃ ದ್ವಿಗುಣವಾಗಿದೆ. ಇದರ ಎಲ್ಲ ವಿವರಗಳನ್ನೂ ಇಲ್ಲಿ ಕೊಡಲು ಹೋಗುವುದಿಲ್ಲ. ಇದನ್ನು ನೋಡಿದರೆ ದಿನೇ ದಿನೇ ವಿದ್ಯಾ ಕ್ಷೇತ್ರದಲ್ಲಿ ಮಹತ್ವವಾದ ಸಾಧನೆಗಳು ಏನಾದರೂ ಆಗುತ್ತಿದೆಯೇ ಇಲ್ಲವೆ ಎನ್ನುವುದನ್ನು ಇಲ್ಲಿ ವಿಚಾರಮಾಡಬೇಕಾಗಿದೆ. ಈ ಸಂದರ್ಭದಲ್ಲಿ ನನಗೆ ಒಬ್ಬರು ವಿಜ್ಞಾನಿಗಳು ಹೇಳಿರುವ ಮಾತು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ. ಅವರು ಹೀಗೆ ಹೇಳುತ್ತಾರೆ.—"Education without character, Science without humanity, Commerce without morality are useless anb dangerous to a society" ಎಂದು.

ಈ ದಿವಸ ವಿದ್ಯಾರಂಗದಲ್ಲಿ ಇದನ್ನು ನಾವು ವಿಚಾರ ವಿನಿಮಯ ಮಾಡಿದಾಗ ಇಲ್ಲೂ ಕೂಡ ಇಂತಹ ಒಂದು ದೋಷಗಳಿಂದ ನಡೆಯುತ್ತಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು ಎಂದು ನನ್ನ ಭಾವನೆ. ಇಂದು ಪ್ರೈಮರಿ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಇಲ್ಲಿರತಕ್ಕ ಉಪಾಧ್ಯಾಯರುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಆಗಲಿ ಒಬ್ಬರಿಗೊಬ್ಬರಿಗೆ ಯಾವ ಹೊಂದಾಣಿಕೆಯೂ ಇಲ್ಲ. ಇದಕ್ಕೆ ಅಧಿಕಾರ ವರ್ಗದವರೂ ಕಾರಣ

ರಾಗುತ್ತಾರೆಯೇ ಎನ್ನುವುದನ್ನು ಪ್ರಶ್ನೆ ಮಾಡಬೇಕಾಗಿದೆ. ಸರಿಯಾದ ವ್ಯವಸ್ಥೆಯಿರುವ ರೀತಿಯಲ್ಲಿ ಸೂಪರ್‌ವಿಷನ್ ಇಲ್ಲದಿದ್ದರೆ ಪ್ರೈಮರಿ ಎಜುಕೇಷನ್‌ನಿಂದ ಏನೂ ಸಾಧನೆಯಾಗುವುದಿಲ್ಲ ಎಂದು ಇಲ್ಲಿ ಒತ್ತಿ ಹೇಳಬೇಕಾಗಿದೆ.

ಇಂದು ಪ್ರೈಮರಿ ಶಾಲೆಗಳಲ್ಲಿ ಕೆಲಸ ಮಾಡುವ ಅನೇಕ ಉಪಾಧ್ಯಾಯರುಗಳು ಅವರ ಕಾರ್ಯ ವ್ಯಾಪ್ತಿಯನ್ನು ಬಿಟ್ಟು ರಾಜಕೀಯ ಗೊಂದಲದಲ್ಲಿ ಇಳಿದಿದ್ದಾರೆ. ಇದರಿಂದ ಅನೇಕ ಶಾಲೆಗಳನ್ನು ಮುಚ್ಚಬೇಕಾದ ಪರಿಸ್ಥಿತಿ ಬಂದಿದೆ. ಇನ್ನೂ ಮುಖ್ಯವಾದ ಅಂಶವೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಕಡೆ ಶಾಲೆಗಳು ಇದ್ದರೆ ಉಪಾಧ್ಯಾಯರು ಇರುವುದಿಲ್ಲ. ಉಪಾಧ್ಯಾಯರು ಇರುವ ಕಡೆ ಮಕ್ಕಳೇ ಇರುವುದಿಲ್ಲ, ಮಕ್ಕಳು ಮತ್ತು ಉಪಾಧ್ಯಾಯರು ಇದ್ದ ಕಡೆ ಕಟ್ಟಡಗಳೇ ಇರುವುದಿಲ್ಲ. ಇಂತಹ ಒಂದು ಪರಿಸ್ಥಿತಿಯನ್ನು ಹೋಗಲಾಡಿಸಲು ಮಾನ್ಯ ವಿದ್ಯಾ ಮಂತ್ರಿಗಳು ಅವಶ್ಯ ಜಾಗ್ರತೆ ಈ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ನೋಡಬೇಕು.

ಇನ್ನು ಪ್ರೌಢಶಾಲೆಗಳ ವಿಚಾರದಲ್ಲಿ ಹೇಳಬೇಕೆಂದರೆ, ಇಂದು ಖಾಸಗಿ ಶಾಲೆಗಳು ಹೆಚ್ಚುತ್ತಿವೆ. ಕಳೆದ ೨೫ ವರ್ಷಗಳಿಂದ ಏನು ನಡೆದುಕೊಂಡು ಬಂದಿದೆ ಎಂದರೆ, ಯಾರೋ ಕೆಲವರು ತಮ್ಮ ನೆಂಟರು ಎಂದುಕೊಂಡು, ತಮ್ಮ ಸಂಬಂಧಿಗಳು ಎಂದು ಹೇಳಿಕೊಂಡು ಆವ ಮೂಲಕ ಮಂಜೂರಾತಿ ಪಡೆದುಕೊಂಡು ನಡೆಸುತ್ತಿದ್ದಾರೆ. ಇಂದು ಅನೇಕ ಗೊಂದಲಗಳನ್ನು ಅವರು ಉಂಟುಮಾಡಿದ್ದಾರೆ; ಮತ್ತೆ ಕೆಲವರು ರಾಜಕೀಯವನ್ನು ನಿರ್ಮಾಣ ಮಾಡಿಕೊಂಡು ನಮ್ಮ ವಿದ್ಯಾ ಇಲಾಖೆಗೆ ಕೆಟ್ಟ ಹೆಸರನ್ನು ತರುತ್ತಿದ್ದಾರೆ. ಈ ರೀತಿ ಕೆಟ್ಟ ಹೆಸರು ಬರದಂತೆ ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕು. ನನ್ನ ಕ್ಷೇತ್ರದಲ್ಲಿ ಇರುವ ಮುತ್ತಿನಹಲ್ಲೂರು ಎಂಬಲ್ಲಿ ಒಂದು ಪ್ರೌಢಶಾಲೆ ಇದೆ. ದೇವಗೆರೆಯವರದು. ಅಲ್ಲಿಯ ಹೆಡ್‌ಮಾಸ್ಟರ್ ಅವರು ಒಂದು ಹೆಣ್ಣುಮಗುವಿನ ಮೇಲೆ ಅತ್ಯಾಚಾರ ಮಾಡಿದರು. ಈ ವಿಚಾರವನ್ನು ನಾನು ಕಳೆದ ಅಧಿವೇಶನದಲ್ಲಿ ಸಹ ಹೇಳಿದ್ದೆ. ಆದರೆ ಇದುವರೆಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಇದು ನಿಜಕ್ಕೂ ನನಗೆ ವಿಷಾದವಾಗಿದೆ. ಅಲ್ಲಿ ರಾತ್ರಿ ಹೊತ್ತು ಪಾಠ ಹೇಳಿಕೊಡುತ್ತೇನೆಂದು ಈ ಹೆಡ್‌ಮಾಸ್ಟರ್ ಅವರು ಹತ್ತಾರು ಹೆಣ್ಣುಮಕ್ಕಳನ್ನು ಕರೆಸಿಕೊಂಡು, ನಂತರ ಒಂದು ಹೆಣ್ಣುಮಗುವಿನ ಮೇಲೆ ಅತ್ಯಾಚಾರ ಮಾಡಿದ್ದಾರೆ. ನಂತರ ಆ ಹೆಣ್ಣುಮಗು ಕೆರೆಗೆ ಬಿದ್ದು ಪ್ರಾಣ ತೆಗೆದುಕೊಂಡಿತು. ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಇದನ್ನು ತಂದರೂ ಸಹ ಇದುವರೆಗೆ ಆ ಹೆಣ್ಣುಮಗುವಿಗೆ ತಂದೆ ತಾಯಿಗಳಿಗೆ ಪರಿಹಾರ ಕೊಟ್ಟಿಲ್ಲ. ಮತ್ತು ನ್ಯಾಯ ದೊರಕಿಸಿಕೊಟ್ಟಿಲ್ಲ. ಈ ಪ್ರಕರಣವನ್ನು ಏಕೆ ಮುಚ್ಚಿಟ್ಟಿದ್ದಾರೆಂದು ನಾನು ಕೇಳುತ್ತೇನೆ. ಇಂತಹ ಪ್ರಕರಣಗಳಲ್ಲಿ ಸೂಕ್ತ ಕಾರ್ಯಕ್ರಮ ಕೈಕೊಳ್ಳದಿದ್ದರೆ ಮುಂದೆ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರುತ್ತದೆಂದು ಹೇಳುತ್ತೇನೆ. ಹಿಂದೆ ಇದ್ದ ವಿದ್ಯಾಮಂತ್ರಿಗಳು ಅನೇಕ ಜೂನಿಯರ್ ಕಾಲೇಜುಗಳನ್ನು ತೆರೆಯುವುದಕ್ಕೆ ಅನುಮತಿ ಕೊಟ್ಟರು. ನನ್ನ ಕ್ಷೇತ್ರದಲ್ಲಿಯೂ ಸಹ ಎರಡು ಜೂನಿಯರ್ ಕಾಲೇಜ್‌ಗಳನ್ನು ತೆರೆಯುವುದಕ್ಕೆ ಅನುಮತಿ ಕೊಟ್ಟರು. ಆದರೆ ಇಂದು ಅಲ್ಲಿ ಸರಿಯಾದ ಉಪಕರಣಗಳು ಇಲ್ಲ, ಸರಿಯಾದ ವ್ಯವಸ್ಥೆಯಿಲ್ಲ, ಮತ್ತು ಉಪಾಧ್ಯಾಯರುಗಳು ಇಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ಕಾಲೇಜು ಪ್ರಾರಂಭ ಮಾಡಿದ ಮೇಲೆ ಎಲ್ಲ ಕೆಲಸ ಮುಗಿಯಿತು ಎಂದು ಸರ್ಕಾರದವರು ಭಾವಿಸದೆ, ಎಲ್ಲ ಅನುಕೂಲಗಳನ್ನು ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಶ್ರೀ ರಾಮುಲು ಅವರು ಹೇಳಿದಂತೆ, ರಾಜಕೀಯ ಸಂತ್ರಸ್ತರ ಮಕ್ಕಳಿಗೆ ವಿದ್ಯಾರ್ಥಿವೇತನ ಕೊಡಲು ಅವರು ೫೦ ಪರ್ಸೆಂಟ್ ಮಾರ್ಕ್ಸ್ ತೆಗೆದಿರಬೇಕು ಎಂಬ ತಕ್ಕಂಥ ನಿಯಮವನ್ನು ಇಟ್ಟಿರುವುದು ಸರಿಯಲ್ಲ; ಏಕೆಂದರೆ ಅವರು ದೇಶಕ್ಕಾಗಿ ತ್ಯಾಗ ಮಾಡಿದವರು; ತಮ್ಮ ತನುಮನಧನವೆಲ್ಲಾ ತ್ಯಾಗ ಮಾಡಿದ್ದಾರೆ. ಆದಕಾರಣ ಇಂತಹ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡುವ ಬಗ್ಗೆ ಯಾವುದೇ ಈ ನಿರ್ಬಂಧ ಇರಬಾರದು. ಈಗ ಇಟ್ಟಿರತಕ್ಕ ಕಲಮನ್ನು ತೆಗೆದುಹಾಕಬೇಕೆಂದು ಸಲಹೆ ಮಾಡುತ್ತೇನೆ. ಮುಖ್ಯವಾಗಿ ಇವರಿಗೆ ಹೆಚ್ಚಿನ ರಿಯಾಯಿತಿ ಕೊಡಬೇಕು.

ಇನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೈಂಟಿಫಿಕ್ ಸೋಷಿಯಲಿಜಂ ಬಗ್ಗೆ ಒಂದು ಇನ್‌ಸ್ಟಿಟ್ಯೂಟ್ ಸ್ಥಾಪನೆ ಮಾಡಿದ್ದಾರೆ. ಇದನ್ನು ಸ್ಥಾಪನೆ ಮಾಡಲು ಈ ಮನೆಯಲ್ಲಿ ಸದಸ್ಯರಾಗಿರುವ ಶ್ರೀ ಎಂ. ಸೂರ್ಯನಾರಾಯಣಗೌಡರು, ಶ್ರೀ ಎಂ. ಬೈರೇಗೌಡರು ಮತ್ತು ಶ್ರೀ ಎಂ. ಕೋಣಂದೂರು ಲಿಂಗಪ್ಪನವರು ಬಹಳ ಶ್ರಮಪಟ್ಟಿದ್ದಾರೆ. ಅದಕ್ಕಾಗಿ ಈ ಮೂರು ಜನರನ್ನು ನಾನು ನಮ್ಮ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ. ಇಂತಹ ಒಂದು ಇನ್‌ಸ್ಟಿಟ್ಯೂಟ್ ಇಡೀ ಭಾರತದೇಶದಲ್ಲಿಯೇ ಇರಲಿಲ್ಲ, ನಮ್ಮ ರಾಜ್ಯದಲ್ಲಿಯೇ ಮೊದಲು ಇದನ್ನು ಸ್ಥಾಪನೆ ಮಾಡಿದ್ದಾರೆ. ಇದಕ್ಕೆ ಸರ್ಕಾರದವರು ೨೦ ಸಾವಿರ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಈ ಹಣ ಸಾಲದು. ಇದಕ್ಕೆ ೨೦ ಲಕ್ಷ ರೂಪಾಯಿಗಳನ್ನಾದರೂ ಇಟ್ಟರೆ ಈ ಒಂದು ಸಂಸ್ಥೆಯ ಕಾರ್ಯವ್ಯಾಪ್ತಿ ಬೆಳೆದು ಹೆಚ್ಚಿನ ಜನರಿಗೆ ಅನುಕೂಲವಾದೀತು ಎಂದು ಹೇಳಬೇಕಾಗಿದೆ. ಇಂದು ನಮ್ಮ ರಾಜ್ಯದಲ್ಲಿ ಒಟ್ಟು ೪ ವಿಶ್ವವಿದ್ಯಾನಿಲಯಗಳಿವೆ

ನಾವು ಯಾವಾಗಲೂ ಸಿದ್ಧಾಂತವಾದ ಮತ್ತು ಸಮತಾವಾದದ ಬಗ್ಗೆ ಮಾತನಾಡುತ್ತೇವೆ. ಆದರೆ ಕಳೆದ ೨೫ ವರ್ಷಗಳಿಂದ ಈ ನಾಲ್ಕು ವಿಶ್ವವಿದ್ಯಾನಿಲಯಗಳ ಪೈಕಿ ಒಂದಕ್ಕಾದರೂ ಹರಿಜನರನ್ನು ಉಪಕುಲಪತಿಗಳನ್ನಾಗಿ ನೇಮಕ ಮಾಡಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ೩೦ ಜನ ಪ್ರೊಫೆಸರ್‌ಗಳಿದ್ದಾರೆ. ಇವರುಗಳ ಪೈಕಿ ನಾಲ್ಕು ಜನ ಮಾತ್ರ ಹರಿಜನರು ಇದ್ದಾರೆ. ಹರಿಜನರಿಗೆ ರಾಜ್ಯಾಂಗದಲ್ಲಿ ಹೇಳಿರತಕ್ಕ ರಕ್ಷಣೆಯನ್ನು ಕೊಡುತ್ತೇವೆಂದು ಹೇಳುತ್ತಾರೆ. ಆದರೆ ನಿಜವಾಗಿಯೂ ಅದನ್ನು ಅನುಷ್ಠಾನದಲ್ಲಿ ತಂದಿದ್ದಾರೆಯೇ ಎಂದು ಕೇಳಬೇಕಾಗುತ್ತದೆ. ಈಗಿನ ವಿದ್ಯಾ ಮಂತ್ರಿಗಳು ಒಳ್ಳೆಯವರಿದ್ದಾರೆ ಮತ್ತು ತಜ್ಞರಿದ್ದಾರೆ ಇವರ ಕಾಲದಲ್ಲಿಯಾದರೂ ಹರಿಜನರಿಗೆ ಸಿಗಬೇಕಾದ ರಕ್ಷಣೆಯನ್ನು ದೊರಕಿಸಿಕೊಡುತ್ತಾರೆಂದು ನಂಬಿದ್ದೇನೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೪೦ ಜನ ಪ್ರೊಫೆಸರ್‌ಗಳ ಪೈಕಿ ಒಬ್ಬರು ಮಾತ್ರ ಹರಿಜನರು ಇದ್ದಾರೆ, ಅಂದರೆ ಹರಿಜನರಿಗೆ ಹೆಚ್ಚು ಸೀಟುಗಳನ್ನು ಕೊಡಬಾರದೆಂದು ನಿಯಮವಿದೆಯೋ ಅಥವಾ ಅಪ್ಲಿಕೇಷನ್‌ಗಳೇ ಬರಲಿಲ್ಲವೇ ಎಂಬುದನ್ನು ತಿಳಿಸಬೇಕು. ಮುಖ್ಯವಾಗಿ ಈಗ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ೨೯ ಜನ ಪ್ರೊಫೆಸರ್‌ಗಳಿದ್ದಾರೆ. ಆದರೆ ಹರಿಜನರು ಅವರ ಪೈಕಿ ಒಬ್ಬರೂ ಇಲ್ಲ. ವಿಶ್ವವಿದ್ಯಾನಿಲಯಗಳು ಆಟಾನಮಸ್ ಬಾಡಿಗಳು ಇರಬಹುದು, ಆದರೆ ಎಲ್ಲ ಸವಲತ್ತುಗಳನ್ನು ಮತ್ತು ಹಣದ ಸಹಾಯ ಮಾಡುವುದು ಸರ್ಕಾರ. ಆದಕಾರಣ ಅಲ್ಲಿ ರಾಜ್ಯಾಂಗಕ್ಕೆ ಏನಾದರೂ ಧಕ್ಕೆ ಬರುವ ರೀತಿಯಲ್ಲಿ ಕೆಲಸಗಳಾದರೆ ಅದನ್ನು ತಡೆಗಟ್ಟುವುದು ಸರ್ಕಾರದ ಕರ್ತವ್ಯವಾಗಿದೆ. ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ೩೦ ಜನ ಪ್ರೊಫೆಸರ್‌ಗಳಿದ್ದಾರೆ. ಇವರುಗಳ ಪೈಕಿ ಒಬ್ಬರೂ ಹರಿಜನರು ಇಲ್ಲ. ಏತಕ್ಕೆ ತಗೆದುಕೊಂಡಿಲ್ಲ ಎಂದು ಯಾರಾದರೂ ಕೇಳುವುದಕ್ಕೆ ಹೋದರೆ ಅವರು ಇದು ಆಟಾನಮಸ್ ಬಾಡಿ ಎಂದು ಹೇಳುತ್ತಾರೆ. ಇಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಬೇಕೆಂದು ನಾನು ಮಾನ್ಯಮಂತ್ರಿಗಳಿಗೆ ಒತ್ತಾಯಮಾಡಿ ಹೇಳುತ್ತಿದ್ದೇನೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ೭೦ ಜನ ರೀಡರ್‌ಗಳಿದ್ದಾರೆ. ಇವರ ಪೈಕಿ ಹರಿಜನರು ಒಬ್ಬರೂ ಇಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೭೦ ಜನ ರೀಡರ್ಸ್ ಇದ್ದಾರೆ. ಅಲ್ಲಿಯೂ ಸಹ ಹರಿಜನರು ಒಬ್ಬರೂ ಇಲ್ಲ, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ೫೦ ಜನ ರೀಡರ್ಸ್ ಇದ್ದಾರೆ. ಮತ್ತು ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ೫೦ ಜನ ರೀಡರ್ಸ್ ಇದ್ದಾರೆ, ಆದರೆ ಹರಿಜನರು ಮಾತ್ರ ಒಬ್ಬರೂ ಇಲ್ಲ. ಈಗಿನ ವಿದ್ಯಾ ಮಂತ್ರಿಗಳು ಒಳ್ಳೆಯ ಅನುಭವಶಾಲಿಗಳಿದ್ದಾರೆ. ಆದಕಾರಣ ಹಿಂದಿನಿಂದ ನಡೆದುಕೊಂಡು ಬಂದಿರುವ ಅನ್ಯಾಯಗಳನ್ನು ಹೋಗಲಾಡಿಸುವುದರ ಮೂಲಕ ಹರಿಜನರಿಗೆ ರಾಜ್ಯಾಂಗದಲ್ಲಿ ಏನು ಒಂದು ಮೀಸಲು ಹುದ್ದೆಗಳನ್ನು ಇಷ್ಟು ಪರ್ಸೆಂಟ್‌ವರೆಗೆ ಕೊಡಬೇಕೆಂದು ಹೇಳಲಾಗಿದೆಯೋ ಅಷ್ಟನ್ನಾದರೂ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ಸಾಧ್ಯವಾದರೆ ಆಗಿರುವ ನೇಮಕಗಳಲ್ಲಿ ತಿದ್ದುಪಡಿಯನ್ನಾದರೂ ಮಾಡಿಸಿ ಬಡವರಿಗೆ ಅನುಕೂಲ ಮಾಡಿಕೊಡಬೇಕು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ೦೦ ಜನ ಲೆಕ್ಚರರ್ಸ್ ಇದ್ದಾರೆ ಆದರೆ ಹರಿಜನರು ಇಬ್ಬರು ಮಾತ್ರ ಇದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೨೭೦ ಜನ ಲೆಕ್ಚರರ್ಸ್ ಇದ್ದಾರೆ. ಹರಿಜನರೂ ಒಬ್ಬರು ಸಹ ಇಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ೨೦ ಜನ ಲೆಕ್ಚರರ್ಸ್ ಪೈಕಿ ಹರಿಜನರು ಒಬ್ಬರೂ ಇಲ್ಲ. ವ್ಯವಸಾಯ ವಿಶ್ವವಿದ್ಯಾನಿಲಯದಲ್ಲಿ ೧೦೦ ಜನ ಲೆಕ್ಚರರ್ಸ್ ಇದ್ದಾರೆ. ಹರಿಜನರು ಒಬ್ಬರೂ ಇಲ್ಲ. ಈ ಅನ್ಯಾಯಗಳನ್ನು ಕೂಡಲೇ ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಎಲ್ಲ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟಂತೆ ಒಂದು ಕಾಮನ್ ಬಿಲ್ಲನ್ನು ಸರ್ಕಾರದವರು ತರುವವರಿದ್ದಾರೆ. ಆ ಸಮಯದಲ್ಲಿ ಯಾರಾದರೂ ಈ ಬಡವರಿಗೆ ಆದರಲ್ಲಿಯೂ ವೀಕರ ಸೆಕ್ಷನ್ ಅವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಸಿ. ಬೈರೇಗೌಡ: (ವೇಮಗಲ್) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತ ಸುಮಾರು ೮೦ ಕೋಟಿ ರೂಪಾಯಿಗಳ ಬೇಡಿಕೆಯನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಅದನ್ನು ನಾನು ವಿರೋಧ ಮಾಡಬೇಕಾಗಿದೆ. ಕಾರಣವೇನೆಂದರೆ, ನನ್ನ ಹಿಂದೆ ಮಾತನಾಡಿದಂಥ ಸದಸ್ಯರೆಲ್ಲರೂ ಅಭಿಪ್ರಾಯ ಪಟ್ಟ ಪ್ರಕಾರ ಈ ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ನರ್ಸರಿ ಶಾಲೆಗಳನ್ನು ರಾಜ್ಯದಲ್ಲಿ ತೆರೆದಿಲ್ಲ. ಮಕ್ಕಳ ೩ರಿಂದ ೫ ವರ್ಷದ ಅವಧಿ ಏನಿದೆ, ಇದು ಬಹಳ ಪ್ರಾಮುಖ್ಯವಾದ ಅವಧಿ, ಈ ಅವಧಿಯಲ್ಲಿ ಅಂದರೆ, ಈ ಎರಡು ವರ್ಷಗಳಲ್ಲಿ ಮಕ್ಕಳು ಏನನ್ನು ಕಲಿಯುತ್ತಾರೆ, ಅದನ್ನು ಮುಂದಿನ ೫೦ ವರ್ಷಗಳಲ್ಲಿ ಸಹ ಕಲಿಯುವುದಕ್ಕೆ ಸಾಧ್ಯವಿಲ್ಲ ಎಂದು ರೋಂ ದೇಶದವರು ಹೇಳುತ್ತಾರೆ. ಈ ಬಗ್ಗೆ ಸರ್ಕಾರದವರನ್ನು ನೇರವಾಗಿ ನಾನು ಪ್ರಶ್ನೆ ಮಾಡಬೇಕಾಗಿದೆ, ಏನೆಂದರೆ ನಮ್ಮ ರಾಜ್ಯದಲ್ಲಿ ನರ್ಸರಿ ಶಾಲೆಗಳು ಎಲ್ಲೆಲ್ಲಿವೆ ಎಂಬ ಬಗ್ಗೆ ಮತ್ತು ಅವುಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಎಂಬ ಬಗ್ಗೆ ಅಂಕಿಅಂಶಗಳನ್ನು ನಮಗೆ ಒದಗಿಸಿದ್ದರೆ ನಾನು ಸಂತೋಷಪಡುತ್ತಿದ್ದೆ.

ಆದರೆ ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಏನು ಪರಿಸ್ಥಿತಿ ಇದೆ? ಅಲ್ಲಿಗೆ ಮೂರರಿಂದ ೧೬ ವರ್ಷದ ಮಕ್ಕಳಿಗೂ ಮೈಗೆ ಬಟ್ಟೆ ಇಲ್ಲ, ಹಾಕಿಕೊಳ್ಳುವುದಕ್ಕೆ ಒಂದು ಅಂಗಿಯೂ ಇಲ್ಲ,

ಹೊಟ್ಟೆಗೆ ಅನ್ನವೂ ಇಲ್ಲ. ಇಂಥವರಿಗೆ ಫ್ರೀ ಪ್ರೈಮರಿ ಎಜುಕೇಷನ್ ಆಗಲೀ, ಪ್ರೈಮರಿ ಎಜುಕೇಷನ್ ಆಗಲೀ ಇದರಿಂದ ಯಾವ ಪ್ರಯೋಜನ ಆಗುತ್ತದೆ? ಇದನ್ನೇ ತಾವು ಮುಂದುವರಿಸಿಕೊಂಡು ಹೋಗುವುದಾದರೆ ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ, ನಾನು ಓದಿದಂಥ ಶಾಲೆ, ಒಂದು ಹರುಕುಮುರುಕು ಕಟ್ಟಡದಲ್ಲಿತ್ತು. ಅದಕ್ಕೆ ಬಾಗಿಲು ಕಿಟಿಕಿ ಯಾವುದೂ ಇಲ್ಲ. ನಾನು ಓದುವಾಗ ಅಲ್ಲಿ ಸುಮಾರು ೭-೮ ಅಂಗುಲ ಹಳ್ಳ ಕೊಳ್ಳ ಇತ್ತು. ಈಗಲೂ ಅಲ್ಲಿ ಇದೇ ಪರಿಸ್ಥಿತಿ ಇದೆ. ಆದಾದಮೇಲೆ ನಾನು ಪ್ರೌಢ ಶಾಲೆಯಲ್ಲಿ ಓದಿದೆ, ಅದು ಗ್ರಾಮಾಂತರ ಪ್ರೌಢಶಾಲೆಯಾದ್ದರಿಂದ ಅಲ್ಲಿ ಸ್ವಾಭಾವಿಕವಾಗಿ ಏನೂ ಬದಲಾವಣೆಯಾಗಿಲ್ಲ. ಅದಾದ ಮೇಲೆ ನಾನು ಸೆಂಟ್ರಲ್ ಕಾಲೇಜಿನಲ್ಲಿ ಓದಿದೆ, ಇದನ್ನು ನೋಡಿದರೆ ಸಂತೋಷವಾಗುತ್ತದೆ. ಇದು ಬೃಹದಾಕಾರವಾಗಿ ಬೆಳೆದಿದೆ. ಅದೇ ರೀತಿಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯವೂ ಬೆಳೆದು ಬಂದಿದೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಇಂಥ ಬದಲಾವಣೆಯಾಗಿದೆಯೇ? ಅಲ್ಲಿರತಕ್ಕ ಪಾಠಶಾಲೆಗಳು, ಅಲ್ಲಿರತಕ್ಕ ವಿದ್ಯಾಪದ್ಧತಿಯಾಗಲೀ ಈ ರೀತಿಯಲ್ಲಿ ಬದಲಾವಣೆಯಾಗಿದೆಯೇ? ಪಟ್ಟಣಗಳಲ್ಲಿರತಕ್ಕ ವಿದ್ಯಾಭ್ಯಾಸ ಪಟ್ಟಣಗಳಲ್ಲಿರತಕ್ಕ ಕಟ್ಟಡಗಳು ಬೃಹದಾಕಾರವಾಗಿ ಬೆಳೆದಿವೆ. ಬೆಂಗಳೂರು ನಗರದಲ್ಲಿ ಒಂದೆರಡು ಇನ್‌ಸ್ಟಿಟ್ಯೂಟ್ ಇವೆ. ಒಂದು, ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಮತ್ತು ಇನ್‌ಸ್ಟಿಟ್ಯೂಟ್ ಆಫ್ ಸೋಷಿಯೋ ಎಕನಾಮಿಕ್ ಚೇಂಜ್ ಎಂದು ಇದೆ. ಈ ಎರಡು ಇನ್‌ಸ್ಟಿಟ್ಯೂಟ್‌ಗಳನ್ನು ಸೇರಿ ೬೦ ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಒಂದಕ್ಕೆ ಸುಮಾರು ೩೦ ಲಕ್ಷ ರೂಪಾಯಿಗಳನ್ನು, ಇನ್ನೊಂದಕ್ಕೆ ಸುಮಾರು ೨೦ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವರಲ್ಲಿ ಎಷ್ಟು ಜನ ಹಳ್ಳಿಯ ಪರಿಸ್ಥಿತಿ ಏನು ಇದೆ ಎಂದು ತಿಳಿದುಕೊಂಡು ಬಂದಿದ್ದಾರೆ? ಹಳ್ಳಿಯ ಜನತೆಯ ಆಹಾರ ಪರಿಸ್ಥಿತಿ ಹೇಗೆ ಇದೆ, ಅವರ ವೃತ್ತಿಯ ಪರಿಸ್ಥಿತಿ ಹೇಗೆ ಇದೆ ಅವರಿಗೆ ಬರತಕ್ಕ ಆದಾಯದ ಮಾರ್ಪಾಡು ಆಗಿದೆಯೋ ಎನ್ನುವುದನ್ನು ನನಗೆ ಗೊತ್ತಿರುವಷ್ಟು ಮಟ್ಟಿಗೆ ಯಾರೂ ಕೂಡ ಹೋಗಿ ತಿಳಿದುಕೊಂಡು ಬಂದಿಲ್ಲ. ಅವರಿಗೆ ಸರ್ಕಾರದವರು ಕಣ್ಣು ಮುಚ್ಚಿಕೊಂಡು ಹಣ ಕೊಡುತ್ತಿದ್ದಾರೆ, ಸರ್ಕಾರದ ಹಣವನ್ನು ಹೊಡೆಯುವುದಕ್ಕೆ ಮಾತ್ರ ಇಂಥ ಸಂಸ್ಥೆಗಳು ಇವೆ. ಒಂದು ನಾಚಿಕೆಗೇಡಿನ ಪ್ರಸಂಗ ಎಂದು, ಹಳ್ಳಿಗಾಡುಗಳಲ್ಲಿ ಒಂದು ಪಾಠಶಾಲೆಯನ್ನು ಕಟ್ಟಬೇಕಾದರೆ ಕೇವಲ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ ಇದು ಎಂಥ ಸಮಾಜವಾದ ಇಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನವರಿಗೆ ೬೦ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ಸುಮಾರು ೨೨ ಸಾವಿರ ಹಳ್ಳಿಗಳು ಇವೆ. ಆ ಹಳ್ಳಿಯಲ್ಲಿರತಕ್ಕ ಮಕ್ಕಳೆಲ್ಲರೂ ವಿದ್ಯೆಯನ್ನು ಕಲಿಯಬೇಕಾಗಿಲ್ಲವೇ ನಗರದಲ್ಲಿ ಏನು ಸೌಲಭ್ಯಗಳನ್ನು ಕೊಡುತ್ತಿದ್ದೀರಿ, ಅವುಗಳನ್ನು ಹಳ್ಳಿಗಳಲ್ಲಿಯೂ ಕೊಡಬೇಕಾಗಿರತಕ್ಕದ್ದು ನಿಮ್ಮ ಜವಾಬ್ದಾರಿ ಅಲ್ಲವೇ? ಈ ಜವಾಬ್ದಾರಿಯನ್ನು ತಾವು ಏಕೆ ಮರೆಮಾಚಿ ಕೊಂಡಿದ್ದೀರಿ ಇದು ನನಗರ್ಥವಾಗುತ್ತಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಭಾರತದಲ್ಲಿ ಶೇಕಡ ೬೦ರಷ್ಟು ಅವಿದ್ಯಾವಂತರ ಸಂಖ್ಯೆ ಇದೆ. ಇವರೆಲ್ಲರೂ ಭಾರತದ ಹಳ್ಳಿಗಳಲ್ಲಿದ್ದಾರೆ. ಅವಿದ್ಯಾವಂತರಾಗಿರತಕ್ಕ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಹಳ್ಳಿಯಲ್ಲಿರತಕ್ಕ ಉಪಾಧ್ಯಾಯರುಗಳ ಕೆಲಸ ಬರೀ ಸಂಬಳ ತೆಗೆದುಕೊಳ್ಳುವುದು ಆಗಿದೆ, ಇವರು ಮಕ್ಕಳಿಗೆ ಪಾಠ ಹೇಳಿಕೊಡುವುದಕ್ಕೆ ಅಲ್ಲಿಲ್ಲ. ಒಂದೊಂದು ಸಾರಿ ಪಾಠಶಾಲೆಯ ಬೀಗವನ್ನೂ ಇವರು ತೆಗೆಯುವುದಿಲ್ಲ. ಆದರೆ ನಗರದಲ್ಲಿ ಎಲ್ಲಿಯೂ ಕೂಡ ಇಂಥ ಪರಿಸ್ಥಿತಿ ಇಲ್ಲ. ಎಲ್ಲಾ ಸೌಲಭ್ಯಗಳೂ ನಗರದ ಮಕ್ಕಳಿಗೆ ಇದೆ.

ಇನ್ನು ಕೇರ್ ಸಂಸ್ಥೆಯವರು ಕೊಡತಕ್ಕ ಮಿಡ್—ಡೇ—ಮೀಲ್ಸ್ ಬಗ್ಗೆ ಹೇಳುತ್ತೇನೆ ಇದನ್ನು ಯಾರ ಉದ್ಧಾರಕ್ಕೋಸ್ಕರ ಕೊಡತಕ್ಕದ್ದು? ಹಳ್ಳಿಯ ಶಾಲೆಯ ಉಪಾಧ್ಯಾಯರುಗಳಿಂದ ಹಿಡಿದು, ಬೆಂಗಳೂರಿನವರೆಗೂ ಕೂಡ ಇವತ್ತು ಕೇರ್‌ನವರು ಕೊಡತಕ್ಕ ಹಣವನ್ನು ದುರುಪಯೋಗ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಉಪಾಧ್ಯಾಯರುಗಳು ಲಕ್ಷಾಂತರ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದಾರೆ. ಇದನ್ನೆಲ್ಲಾ ಏಕೆ ತಾವು ತಡೆಗಟ್ಟುವುದಕ್ಕೆ ಆಗಲಿಲ್ಲ. ಹಳ್ಳಿಗಳಲ್ಲಿ ಕೇರ್ ನಾಯಿಗಳು ಬೇರೆ ಇವೆ. ಹೊಟ್ಟೆಗಿಲ್ಲದ ಮಕ್ಕಳಿಗೆ ಇದನ್ನು ಕೊಡದೆ, ಈ ನಾಯಿಗಳಿಗೆ ಕೊಡುತ್ತಿದ್ದಾರೆ. ಇವತ್ತಿನ ದಿವಸ ಕೇರ್ ನವರು ಕೊಡತಕ್ಕ ಆಹಾರವನ್ನು ದುರುಪಯೋಗಪಡಿಸಿಕೊಂಡಿರತಕ್ಕವರು ನಾಯಿಗಳಿಗೂ ಕಡೆಯಾಗಿದ್ದವರು, ಅವರೆಲ್ಲರೂ ಕೂಡ ಗೌರವ ಸ್ಥಾನದಲ್ಲಿದ್ದಾರೆ. ದೊಡ್ಡ ದೊಡ್ಡ ಅಧಿಕಾರ ಸ್ಥಾನದಲ್ಲಿದ್ದಾರೆ, ಅವರನ್ನು ಮುಟ್ಟುವುದಕ್ಕೆ ನಿಮಗೆ ಭಯವಾಗುತ್ತದೆ. ಎಂಥ ಒತ್ತಾಯ ತಂದರೂ ನಿಮಗೆ ಇದು ಆಗುವುದಿಲ್ಲ. ಇದರ ಈ ಬಗ್ಗೆ ನಾನು ಒಂದು ಪತ್ರವನ್ನು ತಮಗೆ ಬರೆದಿದ್ದೇನೆ. ಅದಕ್ಕೆ ಉತ್ತರ ಕೂಡ ಬಂದಿಲ್ಲ. ಇದನ್ನೆಲ್ಲಾ ವಿಚಾರ ಮಾಡಿ ಸರ್ಕಾರದವರು ತೀವ್ರವಾಗಿ ಕ್ರಮ ತೆಗೆದುಕೊಳ್ಳದಿದ್ದರೆ ವಿದ್ಯಾ ಇಲಾಖೆಯಲ್ಲಿಯೇ ಒಂದು ಅಶಿಸ್ತು ಬೆಳೆಯುತ್ತದೆ.

ಶ್ರೀ ಕೆ. ಎನ್ ವೀರಪ್ಪಗೌಡ.—ಇವರೆಲ್ಲಾ ಎನ್.ಜಿ.ಓ ಗಳು ಗುಂಪಿಗೆ ಸೇರುತ್ತಾರೆ ತಾನೆ,

ಶ್ರೀ ಸಿ. ಬೈರೇಗೌಡ.—ಎನ್‌ಜಿಓ ಆಗಲೀ ಯಾರೇ ಆಗಲಿ ಅನ್ಯಾಯ ಮಾಡಿದ್ದರೆ ಶಿಕ್ಷೆಯಾಗಲೇಬೇಕು. ಎನ್‌ಜಿಓಗಳು ಸ್ಟ್ರೈಕ್ ಮಾಡಿದ್ದಕ್ಕೆ ಸಹಾನುಭೂತಿ ತೋರಿಸಿ ಮಾತನಾಡಿದ್ದಕ್ಕೆ ತಾವು ಈ ಮಾತನ್ನು ಹೇಳುತ್ತಿದ್ದೀರಿ. ತಪ್ಪು ಮಾಡಿರತಕ್ಕವರು ಯಾರಿದ್ದರೂ ಕೂಡ ಶಿಕ್ಷೆ ಮಾಡಲೇಬೇಕು, ಅಂಥ ಒಂದು ಎವಿಡೆನ್ಸ್ ನಿಮಗೆ ಇಲ್ಲ ಎಂದು ನಮಗೆ ವ್ಯಥೆಯಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಸದಸ್ಯರಾಗಿರತಕ್ಕವರಲ್ಲಿ ನಾನು ಒಬ್ಬ. ಅನೇಕ ಸದಸ್ಯರು, ಕಾಗೋಡು ತಿಮ್ಮಪ್ಪನವರು ಮಾನ್ಯ ಕಕ್ಕಿಲಾಯ ಅವರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏನೋ ದೊಡ್ಡ ಅನಾಹುತವಾಗಿದೆ ಆಗಬಾರದ್ದು ಆಗಿದೆ, ನಡೆಯಬಾರದ್ದು ನಡೆದು ಬಿಟ್ಟಿದೆ, ಇದನ್ನು ಎನ್‌ಕ್ವೈಯರಿ ಮಾಡಬೇಕು ಎಂದು ಹೇಳಿದರು. ಆದರೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ತಪ್ಪು ಮಾಡಿರತಕ್ಕವರು ಯಾರೇ ಆಗಲೀ, ಯಾವುದೆ ಜಾತಿಗೆ ಸಂಬಂಧಪಟ್ಟವರಾಗಲೀ, ಯಾವುದೇ ಉನ್ನತ ಜಾಗದಲ್ಲಿ ಇರಲಿ ಶಿಕ್ಷೆಗೆ ಖಂಡಿತವಾಗಿ ಯಾರು ಅರ್ಹರು ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ, ಇಂದು ಶ್ರೀ ಮನ್ ರಾಮಲಿಂಗ ಅವರ ಪ್ರಕರಣ ಒಂದು ಇದೆ. ಅವರ ಜೊತೆ ಏನು ಎಂದು ನಾನೂ ಕೂಡ ಅವರೊಂದಿಗೆ ಎರಡು ಗಂಟೆಗಳು ಮಾತನಾಡಿ ತಿಳಿದುಕೊಂಡಿದ್ದೇನೆ. ಅವರ ಬಗ್ಗೆ ನಡತೆಯ ಬಗ್ಗೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಸಿಂಡಿಕೇಟ್ ಪರಮಾವಧಿಯಿಂದ ಮಾಡಿರತಕ್ಕ ಉಪಸಮಿತಿಯಲ್ಲಿ ಇವರು ಮಾಡಿರತಕ್ಕ ಆರೋಪಗಳ ಬಗ್ಗೆ ತಮ್ಮದು ಏನಾದರೂ ಹೇಳುವುದು ಇದೆಯೋ ಎಂದು ಹೇಳಿದರೆ, ಅವರು ಸಿಂಡಿಕೇಟ್ ಮಾಡತಕ್ಕ ಸಮಿತಿಯಲ್ಲಿ ವಿಶ್ವಾಸ ನನಗಿಲ್ಲ ನಾನು ಸಾಕ್ಷಿಯನ್ನು ಕೊಡಲು ತಯಾರಿಲ್ಲ ಎನ್ನುವುದನ್ನು ಎನ್‌ಕ್ವೈಯರಿ ಆಗುವ ಸಂದರ್ಭದಲ್ಲಿ ಹೇಳಿದ್ದಾರೆ. ಇದು ಅವರ ಉದ್ಧಟತನವಲ್ಲವೇ ಇನ್‌ಸಬಾರ್ಡಿನೇಷನ್ ಅಲ್ಲವೇ ರಾಮಲಿಂಗಂ ಅವರಾಗಲೀ, ಆ ಸೂಚನೆಗಳನ್ನು ಮಾಡಿರತಕ್ಕ ಬೇರೆಯವರಾಗಲಿ ಅವರ ಮೂಲ ಉದ್ದೇಶ ಒಳ್ಳೆಯದು ಇದ್ದರೆ, ನಾನೂ ಕೂಡ ನನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದೆ ಭಾರತದಲ್ಲಿರತಕ್ಕ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ ಎಲ್ಲಾ ಸಮರ್ಪಕವಾಗಿ ಎಂದು ಒಪ್ಪಿಕೊಳ್ಳುವುದಕ್ಕೆ ನಾನು ತಯಾರು ಇಲ್ಲ. ಅಲ್ಲಿಯೂ ಕೂಡ ಅಲ್ಪಸ್ವಲ್ಪ ಲೋಪದೋಷಗಳು ಇವೆ. ಅಲ್ಪಸ್ವಲ್ಪ ಇರತಕ್ಕದ್ದನ್ನು ದೊಡ್ಡದನ್ನಾಗಿ ಭೂತಕನ್ನಡಿಯಿಂದ ನೋಡುವುದು ಸರಿಯಲ್ಲ ಇದನ್ನು ಬಿಟ್ಟು, ಅಲ್ಲಿಯ ವಿಚಾರ ಏನು ಇದೆ, ಮಾಸವಾಂಶ ಏನು ಇದೆ ನಿಜಾಂಶಗಳು ಏನು ಎನ್ನುವುದನ್ನು ಇತರೆ ಸದಸ್ಯರಾಗಲೀ, ಅಥವಾ ಸಾರ್ವಜನಿಕರು ತಿಳಿದುಕೊಳ್ಳಬೇಕಾಗಿರತಕ್ಕದ್ದು ಅಗತ್ಯ.

ನಾನೂ ಕೂಡ ಅಲ್ಲಿಯ ಸದಸ್ಯನಾಗಿದ್ದೇನೆ. ಅಲ್ಲಿನ ವಿದ್ಯಮಾನಗಳನ್ನು ನಾನು ನೇರವಾಗಿ ನೋಡಿದ್ದೇನೆ. ನನ್ನ ಮಿತ್ರರು ಯಾರೇ ಆಗಲೀ ಅದರ ಬಗ್ಗೆ ಏನು ಹೇಳುತ್ತಿದ್ದಾರೋ ಅಷ್ಟು ಬೃಹದಾಕಾರವಾಗಿ ಏನೂ ಆಗಿಲ್ಲ. ಅವರಿಗೇನೋ ಸಂಶಯವಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಆದರೆ ಆ ಒಂದು ಸಂಶಯ ಪರಿಹಾರ ಮಾಡುವುದಕ್ಕೋಸ್ಕರ ಮತ್ತೂ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಅದರ ಬಗ್ಗೆ ಸಂಶಯ ಪಡೆದಿದ್ದರೆ ವಿಶ್ವವಿದ್ಯಾನಿಲಯ ತಪ್ಪು ಮಾಡಿದೆ ಎಂಬ ಕಾರಣವಿದ್ದರೆ ಚಾನ್ಸಲರ್ ಅವರ ಮೂಲಕವೇ ಅದನ್ನು ಎನ್‌ಕ್ವೈರಿ ಮಾಡಿಸಲಿ. ಇಲ್ಲದಿದ್ದರೆ ವಿಶ್ವವಿದ್ಯಾನಿಲಯದ ಸಿಂಡಿಕೇಟಿನವರು ಎನ್‌ಕ್ವೈರಿ ಮಾಡಲಿ. ಅಥವಾ ಯಾವುದಾದರೂ ಉಪಸಮಿತಿಯವರು ಎನ್‌ಕ್ವೈರಿ ಮಾಡಲಿ. ಏಕೆಂದರೆ ಇದಕ್ಕಾಗಿ ನ್ಯಾಯಾಂಗ ವಿಚಾರಣೆಯಾಗುವ ಅವಶ್ಯಕತೆ ಏನೂ ಇಲ್ಲ. ಅಂತಹ ಒಂದು ದುರಾಡಳಿತವೇನೂ ನಡೆದಿಲ್ಲ ಅಲ್ಲಿ ಏನಾದರೂ ಅಲ್ಪಸ್ವಲ್ಪ ಲೋಪದೋಷಗಳಿದ್ದರೆ ಅವನ್ನು ಚಾನ್ಸಲರ್ ಅವರೇ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ನೇರವಾಗಿ ಒಳಪಟ್ಟಿರುವುದರಿಂದ ಅವರು ಬೇಕಾದರೆ ಎನ್‌ಕ್ವೈರಿ ಮಾಡಿ ನಮ್ಮ ಮಾನ್ಯ ಮಿತ್ರರ ಸಂಶಯವನ್ನು ತೊಲಗಿಸುವುದಕ್ಕೆ ಪ್ರಯತ್ನ ಮಾಡಲಿ ಎಂದು ಹೇಳುತ್ತೇನೆ. ಏಕೆಂದರೆ ನನ್ನಲ್ಲಿ ಅಂಕಿ ಅಂಶಗಳಿವೆ. ಅದರ ಮೂಲಕ ಅಲ್ಲಿನ ನಿಜಾಂಶ ಏನೆಂಬುದು ಗೊತ್ತಿದೆ. ಇದನ್ನು ಅಧ್ಯಕ್ಷರ ಮೂಲಕ ಮಂತ್ರಿಗಳಿಗೆ ಒಪ್ಪಿಸುತ್ತೇನೆ.

ಕೊನೆಯದಾಗಿ ನನಗೆ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—(ವಿದ್ಯಾ ಶಾಖೆಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ ನಿನ್ನೆ ದಿವಸ ನಾನು ವಿದ್ಯಾಭ್ಯಾಸ ಇಲಾಖೆಗೆ ಸಂಬಂಧಪಟ್ಟಹಾಗೆ ಬೇಡಿಕೆಗಳನ್ನು ಮಂಡಿಸಿದ್ದರ ಮೇಲೆ ನಿನ್ನೆ ಮತ್ತು ಇವತ್ತು ಈ ಸಭೆಯಲ್ಲಿ ೧೭ ಜನ ಸನ್ಮಾನ್ಯ ಸಭಾಸದಸ್ಯರು ಆ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿ ಅನೇಕ ಸಲಹೆಗಳನ್ನು ಕೊಡುವುದರ ಜೊತೆಗೆ ವಿದ್ಯಾಭ್ಯಾಸ ಯಾವ ರೀತಿಯಲ್ಲಿ ನಮ್ಮ ದೇಶದ ಜನರಿಗೆ ದೊರಕಬೇಕು, ವಿದ್ಯಾಭ್ಯಾಸದಲ್ಲಿರತಕ್ಕ ಲೋಪದೋಷಗಳೇನು ಎಂಬುದನ್ನೂ ಸಹ ವ್ಯಕ್ತಪಡಿಸಿದ್ದಾರೆ.

ಪ್ರಾಥಮಿಕ ವಿದ್ಯಾಭ್ಯಾಸ ಅದರ ಜೊತೆಗೆ ಪೂರ್ವಭಾವಿಯಾಗಿ ಏನು ವಿದ್ಯಾಭ್ಯಾಸವಿದೆಯೋ ಅಲ್ಲಿಂದ ಹಿಡಿದು ಪ್ರೌಢಶಿಕ್ಷಣ, ಪ್ರೀಯೂನಿವರ್ಸಿಟಿ ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸ ಹಾಗೂ ಸ್ನಾತಕೋತ್ತರ ವಿದ್ಯಾಭ್ಯಾಸ —ಇವೆಲ್ಲದರ ಮೇಲೂ ನಿಜವಾಗಿ ಸನ್ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ವಿದ್ಯಾಭ್ಯಾಸ ಮಹತ್ವವೇನು ಅದರಲ್ಲಿಯೂ ಪೂರ್ವಭಾವಿಯಾಗಿ ಪ್ರಾಥಮಿಕ ಶಿಕ್ಷಣ ಕೊಡುವುದಕ್ಕೆ ಮೊದಲು ಮಕ್ಕಳನ್ನು ಯಾವ ರೀತಿಯಲ್ಲಿ ಪಾಠಶಾಲೆಗಳಲ್ಲಿ ತರಬೇತು ಮಾಡಬೇಕು, ಪಟ್ಟಣಗಳಲ್ಲಿ ಇವತ್ತಿನ ದಿವಸ ಮಕ್ಕಳಿಗೆ ಯಾವ ರೀತಿಯಲ್ಲಿ ವಿದ್ಯಾಭ್ಯಾಸ ದೊರಕುತ್ತಿದೆ. ಅದಕ್ಕಿಂತಲೂ ಹೆಚ್ಚಿಗೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ವಿದ್ಯಾಭ್ಯಾಸ ಯಾವ ರೀತಿಯಲ್ಲಿ ದೊರಕಬೇಕೆನ್ನುವ ವಿಷಯವನ್ನು ಮಹಿಳಾ ಸದಸ್ಯಣಿಯರು ಹಾಗೂ ಅನೇಕ ಜನ ಮಾನ್ಯ ಮಿತ್ರರು ಹೇಳಿದ್ದಾರೆ. ವಿದ್ಯಾಭ್ಯಾಸ ಆದರೂ ಯಾವ ಬಹಳ ಹಿಂದಿನಿಂದಲೂ ಇರತಕ್ಕ ನಮ್ಮ ರಾಷ್ಟ್ರದಲ್ಲಿ ಎಷ್ಟರಮಟ್ಟಿಗೆ ನಡೆದಿವೆ ಎಂಬತಕ್ಕಂಥ ವಿಚಾರವನ್ನು ಕೂಡ ಸನ್ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ವಿದ್ಯಾಭ್ಯಾಸಕ್ಕೆ ಎರಡು ಮುಖಗಳಿವೆ ಒಂದು ಸಾಮಾಜಿಕ. ಎರಡನೆಯದು ಆರ್ಥಿಕ. ಆದ್ದರಿಂದ ಯೋಜನೆಯನ್ನು ರೂಪಿಸತಕ್ಕವರು ನಾವು ಒಂದು ಕಾಸ್ಟ್ ಬೆನಿಫಿಟ್ ಅಪ್ಲಿಕೇಷನ್ ಮಾಡುವುದಕ್ಕಾಗುವುದಿಲ್ಲದೆನ್ನುವ ದೃಷ್ಟಿಯಿಂದ ಈ ದೇಶದಲ್ಲಿ ಸೋಷಿಯಲ್ ಸರ್ವಿಸಸ್ ಎನ್ನತಕ್ಕಂಥ ಏನೊಂದು ಶಿರೋನಾಮೆ ಇದೆಯೋ ಆದರ ಅಡಿಯಲ್ಲಿ ಇಂತಹ ಯೋಜನೆಗಳನ್ನು ತೆಗೆದುಕೊಂಡು ಬರುವುದು ನಮಗೆಲ್ಲ ತಿಳಿದಿದೆ. ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿರುವ ರಾಷ್ಟ್ರದಲ್ಲಿ ವಿದ್ಯಾಭ್ಯಾಸ ಮಹತ್ವವೇನು ಎನ್ನುವುದನ್ನು ನಾವೆಲ್ಲರೂ ಅರಿತಿದ್ದೇವೆ ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ. ಸಮಾನತೆ, ಸಹೋದರತ್ವ ಹಾಗೂ ದೇಶದ ಒಳಗಡೆ ನಡೆಯುತಕ್ಕಂಥ ಎಲ್ಲ ರೀತಿಯ ಕಾರ್ಯಕ್ರಮಗಳು ಏನಿವೆಯೋ ಅವು ಆರ್ಥಿಕ ಕಾರ್ಯಕ್ರಮವಾಗಬಹುದು ಅಥವಾ ಸಾಮಾಜಿಕ ಭದ್ರತೆಯ ಕಾರ್ಯಕ್ರಮ ಆಗಬಹುದು ಎಲ್ಲ ಕಾರ್ಯಕ್ರಮಗಳಿಗೂ ಇದು ಆಧಾರಭೂತವಾದುದು. ಮೊಟ್ಟ ಮೊದಲನೆಯದಾಗಿ ಪ್ರೀ-ಪ್ರೈಮರಿ ಮತ್ತು ನರ್ಸರಿ ವಿದ್ಯಾಭ್ಯಾಸ ವಿಷಯದಲ್ಲಿ ಸನ್ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರ ಈ ಒಂದು ವಿಷಯದಲ್ಲಿಯೂ ಕೂಡ ಹೆಚ್ಚಿಗೆ ಗಮನವನ್ನು ಕೊಟ್ಟಿದೆ. ಆದರೂ ಬಹುಶಃ ಸರ್ಕಾರ ಸಾಕಾದಷ್ಟು ಗಮನವನ್ನು ಕೊಟ್ಟಿಲ್ಲವೆಂಬ ದೃಷ್ಟಿಯಿಂದ ಸನ್ಮಾನ್ಯ ಸದಸ್ಯರು ಈ ಮಾತನ್ನು ಹೇಳಿದ್ದಾರೆ. ಈ ಒಂದು ಮಟ್ಟದ ವಿದ್ಯಾಭ್ಯಾಸ ಏನಿದೆ ಇದು ಪ್ರಾಥಮಿಕ ಶಾಲೆಗಳಲ್ಲಿ ಇವತ್ತಿನ ದಿವಸ ಮಕ್ಕಳು ಸೇರುವ ಸಂಖ್ಯೆ ನೋಡಿದರೆ ಬೆಟರ್ ಎನ್‌ರೋಲ್‌ಮೆಂಟ್ ಸ್ಪೆಂಟಿಫಿಕ್ಕಾಗಿ ಮಾಡುವುದು ಸರ್ಕಾರದ ಆದ್ಯಕರ್ತವ್ಯವಾಗಿದೆ ಇದನ್ನು ನಾವು ಅರಿತುಕೊಂಡೇ ಸಾಮಾಜಿಕ ಭದ್ರತೆ ಹಾಗೂ ಸಮಾಜ ಕಲ್ಯಾಣ ಕಾರ್ಯಕ್ರಮದಲ್ಲಿ ನಾನ್ ಪ್ಲಾನ್‌ನಲ್ಲಿ ಸುಮಾರು ೩೦ ಲಕ್ಷ ರೂಪಾಯಿಗಳನ್ನೂ ಹಾಗೂ ಪ್ಲಾನ್ ಸ್ಕೀಮಿನಲ್ಲಿ ಸುಮಾರು ೯ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇಷ್ಟು ಮೊಬಲಗನ್ನು ಸರ್ಕಾರಿ ಕಮಿಷನ್ ವೆಲ್‌ಫೇರ್ ಸೆಂಟರುಗಳನ್ನು ಸ್ಥಾಪನೆಮಾಡುವುದಕ್ಕೆ ಈ ಸರ್ಕಾರ ಕೊಟ್ಟಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತಾ ಗಂಡುಮಕ್ಕಳು ಹೆಣ್ಣುಮಕ್ಕಳು ಅವರ ಜೊತೆಗೆ ಪ್ರೀ ಪ್ರೈಮರಿ ಸ್ಕೂಲ್ ಮಕ್ಕಳು ಏನಿದ್ದಾರೆ ಅವರಿಗೆ ಮತ್ತು ಕಮ್ಯೂನಿಟಿ ಡೆವಲಪ್‌ಮೆಂಟ್‌ಗೆ ಈ ವರ್ಷದ ಬಜೆಟ್‌ನಲ್ಲಿಯೂ ಕೂಡ ಹೆಚ್ಚಿಗೆ ಹಣವನ್ನು ಒದಗಿಸಿದ್ದೇವೆ ೪ ಲಕ್ಷ ರೂಪಾಯಿಗಳನ್ನು ಮಹಿಳಾ ಮಂಡಳಿಗೆ ಹಾಗೂ ಪೌಷ್ಟಿಕ ಆಹಾರ ಕೊಡುವ ಕಾರ್ಯಕ್ರಮಗಳಿಗಾಗಿ ಇಟ್ಟಿದ್ದೇವೆ ಅದರ ಜೊತೆಗೆ ಸುಮಾರು ೧೭ ಲಕ್ಷ ರೂಪಾಯಿಗಳನ್ನು ನಮ್ಮ ಇಲಾಖೆಯಲ್ಲಿ ಸ್ಕೂಲ್ ಟೀಚರ್‌ಗಳನ್ನು ನೇಮಕ ಮಾಡುವುದಕ್ಕಾಗಿ ಈ ವರ್ಷದ ಬಜೆಟ್ಟಿನಲ್ಲಿ ಇಟ್ಟಿದ್ದೇವೆ.

ಪಟ್ಟಣಗಳಲ್ಲಿ ವಾಸಮಾಡತಕ್ಕ ಜನರು ಈ ವಿದ್ಯಾಭ್ಯಾಸದ ಮಹತ್ವ ಏನೆಂಬುದನ್ನು ತಿಳಿದವರೂ ಮತ್ತು ಸರ್ಕಾರಿ ನೌಕರಿಯಲ್ಲಿರತಕ್ಕ ಜನರೂ ತಮ್ಮ ತಮ್ಮ ಮಕ್ಕಳನ್ನು ಖಾಸಗೀ ಶಾಲೆಗಳಿಗೆ ಕಳುಹಿಸಿ ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಾದರೋ ಆರ್ಥಿಕಾಭಿವೃದ್ಧಿಯಲ್ಲಿ ಹಿಂದುಳಿದಿರುವುದರಿಂದ ಇಡೀ ರಾಷ್ಟ್ರದ ಬಡತನದ ಒಂದು ಚಿತ್ರವನ್ನು ನೋಡಿದಲ್ಲಿ ಅವರು ಈ ಪ್ರಾಥಮಿಕ ಶಾಲೆಯಿಂದ ಹಿಡಿದು ಕಾಲೇಜಿನ ಮಟ್ಟದ ವಿದ್ಯಾಭ್ಯಾಸದಲ್ಲಿ ಒಳಗಡೆ ವಿದ್ಯಾಭ್ಯಾಸದಲ್ಲಿ ಮತ್ತು ಹೊರಗಡೆಯ ವಿದ್ಯಾಭ್ಯಾಸದಲ್ಲಿ ಬಹಳ ಹಿಂದುಳಿದ್ದಾರೆಂಬುದು ಎದ್ದು ಕಾಣುತ್ತಿದೆ. ಅದಕ್ಕೆ ಕಾರಣಗಳು ಅನೇಕ ಇವೆ. ಸರ್ಕಾರದವರು ಶಾಲಾಕಾಲೇಜುಗಳ ಹೊರಗಡೆ ಕೊಡತಕ್ಕ ವಿದ್ಯಾಭ್ಯಾಸಕ್ಕಿಂತ ಶಾಲಾಕಾಲೇಜುಗಳ ಒಳಗಡೆ ಕೊಡತಕ್ಕ ವಿದ್ಯಾಭ್ಯಾಸಕ್ಕೆ ತೆಗೆದಿಟ್ಟಿರತಕ್ಕ ಹಣದಲ್ಲಿ ಶೇ : ೯೫ ರಷ್ಟನ್ನು ಖರ್ಚುಮಾಡಲಾಗುತ್ತಿದೆ. ಆದರೆ ಅನೇಕ ಮಾನ್ಯ ಸದಸ್ಯರುಗಳು ಶಾಲೆಗಳ ಹೊರಗಡೆಯಲ್ಲಿ ನಡೆಯುತಕ್ಕ ವಿದ್ಯಾಭ್ಯಾಸ ಕೂಡ ಶಾಲಾ ಕಾಲೇಜುಗಳ ಒಳಗಡೆ ನಡೆಯುತಕ್ಕ ವಿದ್ಯಾಭ್ಯಾಸದಷ್ಟೆ ಪ್ರಾಮುಖ್ಯವಾದದೆಂದು ತಿಳಿಸಿದ್ದಾರೆ. ನಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿ ಅಥವಾ ನಮ್ಮ ಪಾಠಪ್ರವಚನಗಳಲ್ಲಿ ಕೆಲವು ಲೋಪದೋಷಗಳಿರಬಹುದು. ಈ ಬಗ್ಗೆ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ನಮ್ಮ ವಿದ್ಯಾಭ್ಯಾಸಕ್ರಮದಲ್ಲಿ ಒಂದು ಘಟ್ಟವನ್ನು ಮುಟ್ಟುವುದಕ್ಕೆ ಮುಂಚೆ ನಡೆಯತಕ್ಕ ವಿದ್ಯಾಭ್ಯಾಸದ ವಿಚಾರದಲ್ಲಿ ನಾವು ನಮ್ಮ ರಾಜ್ಯಾಂಗಕ್ಕನುಸಾರವಾಗಿ ದೇಶದಲ್ಲಿರತಕ್ಕ

ಅಂದರೆ ೬ ರಿಂದ ೧೧ ಮತ್ತು ೧೧ ರಿಂದ ೧೪ ವರ್ಷ ವಯಸ್ಸಿನೊಳಗಿರತಕ್ಕ ಎಲ್ಲ ಮಕ್ಕಳಿಗೂ ಕಡ್ಡಾಯ ಶಿಕ್ಷಣವನ್ನು ಕೊಡಬೇಕೆಂಬುದಾಗಿ ನೀಡಿರತಕ್ಕ ಆದೇಶವನ್ನು ಸರ್ಕಾರದವರು ಸಂಪೂರ್ಣವಾಗಿ ಜಾರಿಗೆ ತರುವುದಕ್ಕಾಗಿಲ್ಲ ಎಂಬುದನ್ನು ನಾನೂ ಒಪ್ಪುತ್ತೇನೆ. ಇದಕ್ಕೆ ಕಾರಣಗಳೇನು ಎದನ್ನು ಮಾನ್ಯ ಸದಸ್ಯರುಗಳೂ ಕೂಡ ಅರ್ಥಮಾಡಿಕೊಂಡಿದ್ದಾರೆ. ಸರ್ಕಾರದವರು ಸಾಮಾನ್ಯವಾಗಿ ಈ ಪ್ರಾಥಮಿಕ ಶಿಕ್ಷಣ ಒಂದಕ್ಕೆ ಎಷ್ಟು ಹಣವನ್ನು ಖರ್ಚುಮಾಡುತ್ತಿದೆ ಎಂಬುದರಿಂದಲೇ ಸರ್ಕಾರ ಈ ವಿದ್ಯೆಯ ಬಗ್ಗೆ ಎಷ್ಟು ಆಸಕ್ತಿಯನ್ನು ವಹಿಸಿದೆ ಎಂಬುದನ್ನು ಮಾನ್ಯ ಸದಸ್ಯರು ಕಂಡುಕೊಳ್ಳಬಹುದು. ಆದರೆ ಈ ಪ್ರಾಥಮಿಕ ಶಿಕ್ಷಣದಲ್ಲಿರತಕ್ಕ ನ್ಯೂನತೆ ಮತ್ತು ಕೊರತೆಗಳೇನೆಂಬುದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಅಲ್ಲದೆ ಮಾನ್ಯ ಕಕ್ಕಿಲಾಯ ಮತ್ತು ಶ್ರೀಮತಿ ಶೀಲಾ ಇರಾನಿ ಇವರುಗಳು ಅಂಕಿ ಅಂಶಗಳನ್ನೂ ಕೂಡ ಸ್ವಲ್ಪ ಮಟ್ಟಿಗೆ ಕೊಟ್ಟಿದ್ದಾರೆ ನಮ್ಮಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭ ಮಾಡಿದ ವರಲ್ಲಿ ಆದರೆ ಕೊನೆಯನ್ನು ಮುಟ್ಟತಕ್ಕವರು ಎಷ್ಟು ಜನರು—ಮತ್ತು ಮಧ್ಯದಲ್ಲೇ ಡ್ರಾಪ್‌ಔಟ್ ಆಗತಕ್ಕ ವರೆಷ್ಟು ಎಂಬುದನ್ನು ಪ್ರಸ್ತಾಪಮಾಡುತ್ತ ಅವರು ಹೇಳಿದರು—ನಮ್ಮಲ್ಲಿ ಸಾಮಾನ್ಯವಾಗಿ ವಿದ್ಯಾಭ್ಯಾಸಕ್ಕೆ ಪ್ರಾರಂಭಮಾಡಿದವರಲ್ಲಿ ಎಲ್ಲರೂ ೩—೪—೫ನೇ ತರಗತಿಗಳವರೆಗೆ ಅಭ್ಯಾಸವನ್ನು ನಡೆಸಿ ಅಲ್ಲಿಗೆ ವಿದ್ಯಾಭ್ಯಾಸವನ್ನು ಕೈಬಿಡತಕ್ಕವರು ಶೇ ೮೦ರಷ್ಟು ಜನರಿದ್ದಾರೆಂದು ಹೇಳಿದರು. ಈ ಅಂಶವನ್ನು ಭಾರತ ಸರ್ಕಾರದ ವರದಿಯಲ್ಲೂ ಮತ್ತು ಯುನೆಸ್ಕೋ ವರದಿಯಲ್ಲೂ ಉಲ್ಲೇಖಿಸಲಾಗಿದೆ. ನಮ್ಮಲ್ಲಿ ಸ್ಕೂಲು ಕಾಲೇಜುಗಳ ವಿದ್ಯಾಭ್ಯಾಸವನ್ನು ತೀರಾ ಕೆಳಮಟ್ಟದಲ್ಲೇ ಕೈಬಿಡತಕ್ಕವರ ಸಂಖ್ಯೆ ನೂರಕ್ಕೆ ೮೦ ರಷ್ಟಿದೆ. ಅಂದರೆ ದೇಶದಲ್ಲಿರತಕ್ಕ ಹನ್ನೊಂದು ಕೋಟಿ ಜನರ ಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಬಹಳ ಕೆಳಮಟ್ಟದಲ್ಲೇ ಕೈ ಬಿಡುತ್ತಾರೆ. ಇನ್ನು ನೂರಕ್ಕೆ ೩೦ರಷ್ಟು ಜನರು ಎಂ. ಎಸ್. ಸಿ ಇತ್ಯಾದಿ ಪ್ರೌಢ ವಿದ್ಯಾಭ್ಯಾಸಕ್ಕೆ ನಿಲ್ಲುತ್ತಾರೆ ಈ ಶೇಕಡ ೦ರಷ್ಟು ಮಕ್ಕಳೇನಿದ್ದಾರೆ ಇವರು ದೇಶದಲ್ಲಿರತಕ್ಕ ೪೮ ಕೋಟಿ ಪ್ರಜೆಗಳ ಮಕ್ಕಳಾಗಿದ್ದಾರೆ. ಭಾರತ ದೇಶಕ್ಕೆ ಪ್ರಜಾಪ್ರಭುತ್ವ ಬಂದ ನಂತರ ನಮಗೆ ಇಲ್ಲಿ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಇಲ್ಲಿ ಜನತೆಗೆ ಪ್ರಾಥಮಿಕ ಮಟ್ಟದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ಕೊಟ್ಟಿದ್ದರಿಂದ ಇಲ್ಲಿ ಅನೇಕರಿಗೆ ವಿದ್ಯಾಭ್ಯಾಸದ ಸೌಲಭ್ಯ ಸಿಕ್ಕಿತು ಇದನ್ನು ಪ್ರಮಾಣಿಕತೆಯಿಂದ ಒಪ್ಪಲೇಬೇಕು,

ಇನ್ನು ಈ ಕ್ಷೇತ್ರದಲ್ಲಿ ಇಂತಿಷ್ಟು ವಯಸ್ಸಿನೊಳಗಿರತಕ್ಕ ಎಲ್ಲ ಮಕ್ಕಳೂ ಶಾಲೆಗೆ ಹೋಗಲೇ ಬೇಕೆಂದು ಕಡ್ಡಾಯ ಮಾಡಿದ ನಂತರ ಇನ್ನು ಅವರಿಗೆ ಅಭ್ಯಾಸಕ್ಕೆ ಆಗತ್ಯವಾಗಿ ಬೇಕಾದ ಶಾಲೆಗಳ ಅಂದರೆ ಕಟ್ಟಡಗಳ ಬಗ್ಗೆ ಮತ್ತು ಒಳ್ಳೆ ತರಬೇತಿ ಪಡೆದ ಶಿಕ್ಷಕರ ಬಗ್ಗೆ ಮತ್ತು ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಇರಬೇಕಾದ ಒಳ್ಳೆ ಸನ್ನಿವೇಶಗಳ ಬಗ್ಗೆ ಕೇಂದ್ರ ಸರ್ಕಾರದ ತಜ್ಞರ ಹಾಗೂ ರಾಜ್ಯ ಸರ್ಕಾರದವರ ಅಭಿಪ್ರಾಯಗಳೇನಿವೆ ಎಂಬದನ್ನೂ ಕೂಡ ಮಾನ್ಯ ಸದಸ್ಯರು ಸಭೆಯಲ್ಲಿ ಪುನರುಚ್ಚರಿಸಿದ್ದಾರೆ. ಈ ಕ್ಷೇತ್ರದಲ್ಲಿ ಏನು ಅಡ್ಡಿ ಅಡಚಣೆಗಳು ಇವೆ ಎಂಬುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅವುಗಳಲ್ಲಿ ಕೆಲವನ್ನು ನಾನೂ ಕೂಡ ಸೂಕ್ಷ್ಮವಾಗಿ ತಿಳಿದುಕೊಂಡಿದ್ದೇನೆ. ಅದಕ್ಕಾಗಿಯೇ ನಾವು ಈ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಬಡತನದ ಗೆರೆಯ ಕೆಳಗೆ ಬರತಕ್ಕ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಅವರಿಗೆ ಒಂದು ಪ್ರೋತ್ಸಾಹ ನೀಡುವುದಕ್ಕಾಗಿ ಕೆಲವು ಕಚ್ಚಿನ ಅನುಕೂಲತೆಗಳನ್ನು ಒದಗಿಸಲಾಗಿದೆ. ಇದೇ ವಿಚಾರವನ್ನು ನಾನು ಹಿಂದೆ ಸಮಾಜ ಕಲ್ಯಾಣ ಇಲಾಖೆಯ ಸಚಿವನಾಗಿದ್ದಾಗ ಇದೇ ವಿಚಾರವನ್ನು ಇದೇ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಹಿಂದುಳಿದ ವರ್ಗದ ಮಕ್ಕಳಿಗೆ—ಹಾಗೂ ಬಡತನದ ಗೆರೆಯ ಕೆಳಗೆ ಬರತಕ್ಕ ಮಕ್ಕಳಿಗೆ ಒಂದು ವಿಶೇಷ ಆಜ್ಞೆಯನ್ನು ಹೊರಡಿಸಲಾಗಿದೆ. ಅದರ ಪ್ರಕಾರ ಅವರಿಗೆ ತಿಂಡಿ ತಿನಿಸುಗಳ ಬಟ್ಟೆ ಸ್ಲೇಟು ಪುಸ್ತಕಗಳನ್ನು ಇತ್ಯಾದಿಗಳನ್ನೆಲ್ಲಾ ಕೊಟ್ಟು ಪ್ರೋತ್ಸಾಹ ಮಾಡಿಸುವುದಕ್ಕೆ ಅವಕಾಶ ಮಾಡಿದೆ. ಶಾಲೆಗೆ ಹೋಗತಕ್ಕ ಮಕ್ಕಳ ಒಂದು ಮಿನಿಮಂ ನೀಡ್ಸಿನಬಗ್ಗೆ ಐದನೇ ಪಂಚ ವಾರ್ಷಿಕ ಯೋಜನೆಯಲ್ಲಿ ಮೂರು ನೂರು ಕೋಟಿ ರೂಪಾಯಿಗಳನ್ನು ತೆಗೆದಿಡಲಾಗಿದೆ, ಈ ಮಿನಿಮಂ ನೀಡ್ಸ್ ಪ್ರೋಗ್ರಾಂ ಸ್ಕೀಮಿನಲ್ಲಿ ಹಿಂದುಳಿದ ವರ್ಗದವರ ಮಕ್ಕಳಿಗೆ ಮತ್ತು ಬಡತನದ ಗೆರೆಯ ಕೆಳಗೆ ಬರತಕ್ಕ ಮಕ್ಕಳಿಗೆ ಈ ಪ್ರೋತ್ಸಾಹವನ್ನು ನೀಡಲು ೬೬ ಕೋಟಿ ರೂಪಾಯಿಗಳನ್ನು ಇಟ್ಟಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದೇನು ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಎಲ್ಲೋ ಪ್ಲಾಟ್ ಫಾರಂ ಮೇಲೆ ನಿಂತು ಭಾಷಣ ಮಾಡತಕ್ಕ ರೀತಿಯಲ್ಲಿ—ಧಾಟಿಯಲ್ಲಿ ಇಲ್ಲಿ ಭಾಷಣ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ಒಟ್ಟಿನಲ್ಲಿಗೆ ಸಮಂಜಸವಾಗಿ ಕೊಡತಕ್ಕ ಉತ್ತರ ಇದ್ದಹಾಗೆ ಕಾಣುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಎತ್ತಿರತಕ್ಕ ಪ್ರಶ್ನೆಗಳಿಗೆ ಈಗ ಉತ್ತರ ಗಳನ್ನು ಕೊಡುತ್ತಿದ್ದೇನೆ. ಆದನ್ನು ಮಾನ್ಯ ಸದಸ್ಯರು ದಯಮಾಡಿ ಲಾಲಿಸಬೇಕು. ಸುಮಾರು ೧೨ ಲಕ್ಷ ಮಕ್ಕಳಿಗೆ ನಾವು ಅಮೇರಿಕಾದ ಕೇರ್ ಸಂಸ್ಥೆಯ ಸಹಾಯದಿಂದ ಮಧ್ಯಾಹ್ನದ ಊಟಕ್ಕೆ ವ್ಯವಸ್ಥೆ ಮಾಡಿದ್ದೇವೆ, ಇದರ ಜೊತೆಗೆ ವರ್ಲ್ಡ್ ಫುಡ್ ಪ್ರೋಗ್ರಾಂ ಪ್ರಕಾರ ಸುಮಾರು ೯೦ ಸಾವಿರ ಮಕ್ಕಳಿಗೆ

ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡುವ ಕಾರ್ಯಕ್ರಮವೂ ಇದೆ. ಕೆಲವು ಅನಾಥಾಲಯಗಳೇನಿವೆ. ಅವುಗಳಿಗೆ ಕೂಡ ಈ ಸಹಾಯ ನೀಡುತ್ತಿದ್ದೇವೆ. ಪೇಟೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿ ಈ ಸಂಸ್ಥೆಗಳಿವೆ ಅವುಗಳಿಗೂ ಸಹಾಯ ನೀಡುತ್ತಿದ್ದೇವೆ. ಮತ್ತು ಬೇಕಾದ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ನಡೆಸಿದ್ದೇವೆ. ಕೆಲವು ಶಾಲೆಗಳಲ್ಲಿ ಒಬ್ಬರೇ ಉಪಾಧ್ಯಾಯರು ಏನಿದ್ದಾರೆ ಅದನ್ನು ಗಮನಿಸಿ ಅಲ್ಲಿನ ವ್ಯವಸ್ಥೆ ಉತ್ತಮಪಡಿಸುವುದಕ್ಕೆ ಮತ್ತು ಮೇಲು ಉಸ್ತುವಾರಿಯ ಬಗ್ಗೆ ಮಾನ್ಯ ಸದಸ್ಯರು ಯಾವ ತರಹ ಕ್ರಮ ಅನುಸರಿಸಬೇಕೆಂದು ಹೇಳಿದರೋ ಅದನ್ನು ಜಾರಿಗೆ ತರಲು ಕ್ರಮ ತೆಗೆದುಕೊಂಡಿದ್ದೇವೆ. ಸಾಧ್ಯವಾದಷ್ಟೂ ಕೂಡ ಇಂಥ ದಿವಸ ಇನ್‌ಸ್ಪೆಕ್‌ಷನ್ನಿಗೆ ಬರುತ್ತೇವೆಂದು ತಿಳಿಸದೆ ಸರ್ಪ್‌ರೈಜ್ ವಿಸಿಟ್ ಕೊಡುವ ವ್ಯವಸ್ಥೆ ಕೂಡ ಮಾಡಿದ್ದೇವೆ. ವಿರೋಧ ಪಕ್ಷದ ನಾಯಕರು ನಿನ್ನೆ ಮಾತನಾಡುತ್ತಾ ಗುಣಮಟ್ಟ ದೃಷ್ಟಿಯಲ್ಲಿಟ್ಟು ಸಾಮಾಜಿಕ ನ್ಯಾಯ ಒದಗಿಸಬೇಕೆಂದು ಸೂಚಿಸಿದರು ಅದರ ಜೊತೆಗೆ ಸಾಕ್ಷರತೆಯನ್ನು ಜಾಸ್ತಿ ಮಾಡಬೇಕೆಂದು ಕೂಡ ಹೇಳಿದ್ದಾರೆ. ಒಂದು ಕೋಟಿ ೧೭ ಲಕ್ಷ ಮಕ್ಕಳೇನಿವೆ ಭರತಖಂಡದಲ್ಲಿ ಅದಗಲ್ಲಿ ೩೦ ರಷ್ಟು ಅಕ್ಷರಸ್ಥರೂ ೭೦ ರಷ್ಟು ಅನಕ್ಷರಸ್ಥರೂ ಇದ್ದಾರೆ, ಇನ್ನೂ ಸೇಕಡ ೫ ರಷ್ಟು ಅಕ್ಷರಸ್ಥರನ್ನು ಹೆಚ್ಚಿಸಲು ಪ್ರಯತ್ನ ನಡೆದಿದೆ. ಎಲ್ಲಾ ಕಡೆಯೂ ಶಾಲೆಗಳಿವೆ, ನಮ್ಮ ಸರಕಾರದ ಗುರಿಯಾದರೂ ಕೂಡ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಎಲ್ಲಾ ಮಕ್ಕಳಿಗೂ ವಿಸ್ತರಿಸಬೇಕೆಂಬುದೇ ಆಗಿದೆ ೪ ವರ್ಷವಾದರೂ ಪ್ರಾಥಮಿಕ ಶಿಕ್ಷಣ ಕೊಟ್ಟರೆ ಲಿಟರೇಟ್ ಆಗುತ್ತಾರೆ ಎಂದು ಯುಎನ್‌ಸ್ಕೋ ಸಹ ಹೇಳಿದೆ.

ಈ ದಿವಸ ಪ್ರೌಢ ಶಿಕ್ಷಣದಲ್ಲಿರುವ ಲೋಪದೋಷಗಳನ್ನು ಪ್ರಸ್ತಾಪಿಸಿದ್ದಾರೆ. ಖಾಸಗಿ ಸಂಸ್ಥೆಗಳಲ್ಲಿ ಇರುವ ಲೋಪದೋಷಗಳನ್ನು ಮಾನ್ಯ ಸದಸ್ಯರು ಕಳಕಳಿಯಿಂದ ಸಭೆಯ ಮುಂದಿಟ್ಟಿದ್ದಾರೆ. ಇದು ಸರಕಾರಕ್ಕೂ ಗೊತ್ತಿದೆ. ಅದಕ್ಕಾಗಿ ಕಾಂಪ್ರಿಹೆನ್ಸಿವ್ ಬಿಲ್ ತರಲು ಪ್ರಯತ್ನ ನಡೆದಿದೆ, ಮಾನ್ಯ ಸದಸ್ಯರು ಹೇಳಿದ್ದನ್ನು ಗಮನಿಸಿ ನಿವೃತ್ತ ವಿದ್ಯಾ ಇಲಾಖೆ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಈಗಾಗಲೇ ಆ ಸಮಿತಿಯ ವರದಿಯು ಬಂದು ವಿಮರ್ಶೆಯಾಗಿ ಅದನ್ನು ಲಾ ಇಲಾಖೆಗೆ ಕಳಿಸಿ ಅಲ್ಲಿಂದ ಮಸೂದೆ ಸರಕಾರದ ಮುಂದೆ ಬರುವುದಿದೆ. ಬಹುಶಃ ಆ ಒಂದು ಮಸೂದೆಯನ್ನು ಈ ಸಭೆಯಲ್ಲಿ ಇಷ್ಟರಲ್ಲೇ ಮಂಡಿಸಲು ಅವಕಾಶ ಆಗಬಹುದು. ಅದರ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಂಡು ಕಾನೂನು ಮಾಡಿದರೆ ಅವ್ಯವಹಾರವೇನಿದೆ ಅದನ್ನು ತಡೆಗಟ್ಟಲು ಸಾಧ್ಯವಾಗಬಹುದು ಎಂಬ ವಿಶ್ವಾಸವನ್ನು ವ್ಯಕ್ತಮಾಡುತ್ತಿದ್ದೇನೆ. ವಿದ್ಯಾ ಕ್ಷೇತ್ರದಲ್ಲಿ ಶೋಷಣೆ ತಪ್ಪಬೇಕು ಎಂದು ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಮಾಡಿದ್ದಾರೆ, ವಿದ್ಯಾಭ್ಯಾಸದ ಗುಣಮಟ್ಟ ಹೆಚ್ಚಬೇಕು, ಉಪಾಧ್ಯಾಯರ ಸಂಬಳ ಸಾರಿಗೆ ಉತ್ತಮವಾಗಿರಬೇಕು, ಹಾಗಾಗಿ ಅವರ ಮನಸ್ಸಿಗೆ ಸಮಾಧಾನವಾಗಬೇಕು, ಹಾಗೆ ಮಾಡಿದರೆ ಅವರು ಸಮಾಧಾನದಿಂದ ಚೆನ್ನಾಗಿ ತಮ್ಮ ಕಾರ್ಯ ನಿರ್ವಹಿಸುವರು ಎಂದು ಹೇಳಿದ್ದಾರೆ. ಶಾಲೆಗಳಿಗೆ ಬೇಕಾದ ಕಟ್ಟಡದ ವಿಷಯವನ್ನು ಸಹ ಪ್ರಸ್ತಾಪಿಸಿದ್ದಾರೆ. ಶಾಲೆಗಳಿಗೆ ಬೇಕಾದ ಕಟ್ಟಡದ ವಿಷಯವನ್ನು ಸಹ ಪ್ರಸ್ತಾಪಿಸಿದ್ದಾರೆ. ಪ್ರಸ್ತಾಪಿಸಿದ್ದಾರೆ. ಪ್ರಾಥಮಿಕ ಶಾಲಾ ಕಟ್ಟಡಗಳಿಗೆ ಸುಮಾರು ೨೦ ಲಕ್ಷ ರೂಪಾಯಿಗಳನ್ನು ಈ ಬಜೆಟ್ಟಿನಲ್ಲಿ ಹಾಕಿದ್ದೇವೆ. ಇದರ ಜೊತೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿ ೩೫ ಲಕ್ಷ ವಾರ್ಷಿಕ ರಿಪೇರಿಗೆ ಖರ್ಚುಮಾಡಬೇಕೆಂದಿದೆ. ಪ್ರತಿಯೊಂದು ತಾಲ್ಲೂಕಿನ ಸದಸ್ಯರಿಗೂ ಇದು ಗೊತ್ತಿದೆ. ಇದರ ಜೊತೆಗೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಶ್ರೀಮತಿ ಶೀಲ ಇರಾನಿಯವರು ಹೇಳುತ್ತಾ ಗ್ರಾಮಾಂತರಗಳಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸಲು ತಂದೆತಾಯಿಗಳು ಹಿಂದೇಟು ಹೊಡೆಯುತ್ತಿದ್ದಾರೆ, ಅವರ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು ಎಂದು ತಿಳಿಸಿದ್ದಾರೆ ನಾವು ಹಿಂದೆ ಹೈಸ್ಕೂಲಿಗೆ ೫ ವರ್ಷ ಎಂದು ಹೇಳಿದ್ದೆವು. ಅದಾದಮೇಲೆ ಹಣಕಾಸಿನ ತೊಂದರೆಯಿರುವುದರಿಂದ ಪ್ರೌಢಶಾಲೆಗೆ ೫ ವರ್ಷ ಕಾಲ ಗ್ರಾಂಟ್ ಇನ್ ಏಡ್ ಕೊಡುವುದಕ್ಕಾಗುವುದಿಲ್ಲ ಎಂದು ಕಳೆದ ವರ್ಷ ಒಂದು ತೀರ್ಮಾನಮಾಡಿದೆವು. ಈಗ ಬೇಕಾದಷ್ಟು ಶಾಲೆಗಳಿವೆ. ನಾವು ಓದುವಾಗ ತಾಲ್ಲೂಕಿಗೆ ಒಂದ ಹೈಸ್ಕೂಲು ಇರುವುದೇ ಕಷ್ಟವಾಗಿತ್ತು. ಈಗ ೧೨ ರಿಂದ ೧೫ರವರೆಗೆ ಹೈಸ್ಕೂಲುಗಳು ಪ್ರತಿ ತಾಲ್ಲೂಕಿನಲ್ಲೂ ಇವೆ,

ಹೋಂ ಸೈನ್ಸ್ ಸಬ್ಜೆಕ್ಟ್ ತೆಗೆದುಹಾಕಿದ್ದೀರಿ ಎಂದು ಮಾನ್ಯ ಸದಸ್ಯರು ಹೇಳಿದರು. ೬೯—೭೦ ರಿಂದ ಎಲೆಕ್ಟೀವ್ಸ್ ಸೆಕೆಂಡರಿ ಎಜುಕೇಷನ್ನಿನಲ್ಲಿ ಜಾರಿಗೆ ತಂದಮೇಲೆ ಅದನ್ನು ತೆಗೆದರೂ ಕೂಡ ಹೋಂ ಸೈನ್ಸ್ ಓದುವುದಕ್ಕೆ ಬೇಕಾದಷ್ಟು ಅನುಕೂಲ ಇದೆ, ವರ್ಕ್ ಎಕ್ಸ್‌ಪೀರಿಯನ್ಸ್ ಎಂದೇನು ತರಗತಿಯಲ್ಲಿ ಇಂಟ್ರೊಡ್ಯೂಸ್ ಮಾಡಿದ್ದೇವೆ ಅದರಲ್ಲಿ ಈ ಸೌಲಭ್ಯ ಅವರು ಪಡೆಯಬಹುದು. ಇದರ ಜೊತೆಗೆ Physical education is an integral part of school programme.

5-30 P. M,

ಶ್ರೀ ದೇವೇ ಗೌಡರು ನಿನ್ನೆಯ ದಿವಸ ಮಾತನಾಡುತ್ತ ಅನೇಕ ವಿಷಯಗಳಲ್ಲಿ ಅವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಷೆಡ್ಯೂಲ್ ಕ್ಯಾಸ್ಟ್ ವಿದ್ಯಾರ್ಥಿಗಳಿಗೆ ಕೋಚಿಂಗ್ ಫೆಸಿಲಿಟೀಸ್ ವಗೈರೆ ಕೊಡಬೇಕೆಂದು ಹೇಳಿದ್ದಾರೆ. ಷೆಡ್ಯೂಲ್ ಕ್ಯಾಸ್ಟ್ ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ special coaching for competitive examination, award of merit scholarship, pre-matric scholarship, payment of boarding charges, supply of dresses to girls in Government hostels and also grant-in-aid to voluntary agencies. ಇದೆಲ್ಲವನ್ನೂ ಕೂಡ ಕೊಡುತ್ತಿರತಕ್ಕದ್ದು ಎಲ್ಲರಿಗೂ ಗೊತ್ತಿದೆ ಪೋಸ್ಟ್ ಮೆಟ್ರಿಕ್ ಸ್ಕಾಲರ್‌ಷಿಪ್ ಪ್ರತಿಯೊಂದು ಹಿಂದುಳಿದ ವಿದ್ಯಾರ್ಥಿಗೂ ಸಿಕ್ಕುತ್ತಿದೆ ಎನ್ನುವುದೂ ಎಲ್ಲರಿಗೂ ಗೊತ್ತಿದೆ ಕಳೆದ ವರ್ಷ ೧೨೫ ಲಕ್ಷ ರೂಪಾಯಿ ಇಂಡಿಯಾ ಸರ್ಕಾರದ ಸ್ಕಾಲರ್‌ಷಿಪ್ ಏನಿದೆ ಅದನ್ನು ಷೆಡ್ಯೂಲ್ ಕ್ಯಾಸ್ಟ್ ವಿದ್ಯಾರ್ಥಿಗಳಿಗೆಲ್ಲರಿಗೂ ಕೊಟ್ಟಿದೆ ಎಂದು ಈ ಸಂದರ್ಭದಲ್ಲಿ ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಜೀವನಕ್ಕೂ ವಿದ್ಯಾಭ್ಯಾಸಕ್ಕೂ ಒಳ್ಳೆಯ ಸಂಬಂಧವಿರಬೇಕು. ಸಾಮಾನ್ಯವಾಗಿ ಎಸ್ ಎಸ್ ಎಲ್ ಸಿ ಯಲ್ಲಿ ಬಹಳ ಜನರು ಶಾಲೆಯನ್ನು ಬಿಟ್ಟುಬಿಡುತ್ತಾರೆಂದು ಸನ್ಮಾನ್ಯ ಸದಸ್ಯರು ಬಹಳ ತೀವ್ರವಾಗಿ ಹೇಳಿದರು ಎರಡು ವರ್ಷ ಕಾಲ ಅವರು ಕೆಲಸ ಸಿಕ್ಕದೆ ಇರತಕ್ಕ ಪರಿಸ್ಥಿತಿಯನ್ನು ಮುಂದೂಡುವ ದೃಷ್ಟಿಯಿಂದ ಕಾಲೇಜುಗಳಿಗೆ ಎರಡು ವರ್ಷ ಹೋಗುತ್ತಾರೆಯೇ ಹೊರತು ಮತ್ತೇನೂ ಇಲ್ಲ ಅವರಿಗೆ ವರ್ಕ್ ಓರಿಯೆಂಟ್ ಎಜುಕೇಷನ್ ಆಗಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಕೊಠಾರಿ ಕಮಿಷನ್‌ನವರು ಕೊಟ್ಟ ವರದಿಯ ಆಧಾರದ ಮೇಲೆ, ಅದರ ಶಿಫಾರಸುಗಳಿಗೆ ತಲೆಬಾಗಿ ಅದನ್ನು ಒಪ್ಪಿಕೊಂಡು ಪ್ರೀ ಯೂನಿವರ್ಸಿಟಿ ಮಟ್ಟದಲ್ಲಿ it has been made terminal in character. ಅನೇಕ ಜನ ಹುಡುಗರು ೧೨_೧೪ ವರ್ಷಕ್ಕೆ ಎಸ್. ಎಸ್. ಎಲ್. ಸಿ ಯಲ್ಲಿ ತೇರ್ಗಡೆಯಾಗಿ ಬರುವುದು ಎಲ್ಲರಿಗೂ ಗೊತ್ತಿದೆ. ಆದುದರಿಂದಲೇ ಟೆಕ್ನಾಲಜಿ, ಕಾಮರ್ಸ್, ಫೈನ್ ಆರ್ಟ್ಸ್, ಅಗ್ರಿಕಲ್ಚರ್ ಈ ಐದು ವಿಷಯಗಳಲ್ಲಿ ವೊಕೇಷನಲ್ ಕೋರ್ಸನ್ನು ಪ್ರೀ ಯೂನಿವರ್ಸಿಟಿ ಮಟ್ಟದಲ್ಲಿ ಕೂಡ ನಾವು ಕೊಡುತ್ತಿದ್ದೇವೆ ಇದರ ಜೊತೆಗೆ ೧೦೦೦ ಉಪಾಧ್ಯಾಯರನ್ನು ನೇಮಕ ಮಾಡಿಕೊಂಡಿರತಕ್ಕದ್ದು ಹಾಗೂ ಮೊಟ್ಟ ಮೊದಲು ಎಲ್ಲರಿಗೂ ಗೊತ್ತಿರುವ ಹಾಗೆ ಪ್ರೀ ಯೂನಿವರ್ಸಿಟಿ ವಿದ್ಯಾಭ್ಯಾಸಕ್ಕೆ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್. ಡೆರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಇದರ ಜೊತೆಗೆ ಡೆರೆಕ್ಟರ್ ಆಫ್ ಪಿ. ಯು. ಸಿ. ಬೋರ್ಡ್ ಇವುಗಳ ಬಗ್ಗೆ ನಿನ್ನೆ ದೇವೇ ಗೌಡರು ಹೇಳಿದರು. ಇದೆಲ್ಲ ಯೂನಿಫೈಡ್ ಕಂಟ್ರೋಲ್‌ನಲ್ಲಿ ಒಂದೇ ಏಜೆನ್ಸಿ ಕೆಳಗಡೆ ಬರಬೇಕು ಎನ್ನುವ ಮಾತನ್ನೂ ಹೇಳಿದರು. ಅದು ಸರ್ವ ಸಮ್ಮತವಾದ ಮಾತು, ಕೇಂದ್ರ ಸರ್ಕಾರದವರು, ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ನವರು ಕೊಠಾರಿ ಕಮಿಷನ್ ವರದಿಯಲ್ಲಿ ಹೇಳಿರುವಂತೆ ಕೇಂದ್ರ ಮಟ್ಟದಲ್ಲಿ ಒಂದು ಸಭೆಯನ್ನು ಮಾಡಿದ್ದಾರೆ. ಅದಕ್ಕೆ ನಮ್ಮ ವಿದ್ಯಾ ಇಲಾಖೆಯ ಕಾರ್ಯದರ್ಶಿ ಹಾಗೂ ಕಮಿಷನರ್ ಸದಸ್ಯರಾಗಿದ್ದಾರೆ. ಪ್ರೀ ಯೂನಿವರ್ಸಿಟಿ ವಿದ್ಯಾಭ್ಯಾಸವನ್ನು ರಾಷ್ಟ್ರದಲ್ಲೆಲ್ಲ ಒಂದೇ ಮಟ್ಟದಲ್ಲಿ ತರಬೇಕಾದರೆ ೩೬ ಕೋಟಿ ರೂಪಾಯಿ ಖರ್ಚಾಗುತ್ತದೆ ಎನ್ನುವುದನ್ನು ಹೇಳಿದ್ದಾರೆ. ಈಗ ಡಿ. ಪಿ. ಐ. ಅವರ ಹತೋಟಿಯಲ್ಲಿ ೨೫೬ ಜೂನಿಯರು ಕಾಲೇಜುಗಳು ಹಾಗೂ ಡಿ. ಸಿ. ಇ. ಅವರ ಹತೋಟಿಯಲ್ಲಿ ೧೯೨ ಕಾಲೇಜುಗಳಿವೆ. ಇದರ ಜೊತೆಗೆ ಇಂಡಿಪೆಂಡೆಂಟ್ ಜೂನಿಯರ್ ಕಾಲೇಜುಗಳು ೫೭ ಇವೆ. ಇವುಗಳಲ್ಲಿ ಒಂದು ಸರ್ಕಾರದ್ದು ಇನ್ನು ೨೬ ನಾನ್ ಗವರ್ನ್‌ಮೆಂಟಲ್ ಏಜೆನ್ಸಿ ನಡೆಸುತ್ತಿರತಕ್ಕದ್ದು ಇಪ್ಪತ್ತೊಂದು ಸಂಸ್ಥೆಗಳಿವೆ. ಮೊನ್ನೆ ತಾನೆ ನಾನು ಕೌನ್ಸಿಲ್‌ನಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಇವನ್ನೆಲ್ಲ ಒಳ್ಳೆಯ ರೀತಿಯಲ್ಲಿ ಒಂದು ಮಟ್ಟಕ್ಕೆ ತರಬೇಕಾದರೆ ಸುಮಾರು ೬೦೦ ಲಕ್ಷ ರೂಪಾಯಿ ಸಿಬ್ಬಂದಿ ವಗೈರೆಗೆ ಕೊಡತಕ್ಕ ಹಣವನ್ನು ಇಟ್ಟು ಕೊಡಬೇಕಾಗುತ್ತದೆ ಮತ್ತು Central Government may also provide special grant of Rs. 50 lakhs for effective implementation for the two year P. U. C. programme ಎಂದು ಹೇಳಿದೆ. There is exclusive expansion in our educational programme ಮತ್ತು ಡೆಮಾಕ್ರಟೈಸೇಷನ್ ಆಫ್ ಎಜುಕೇಷನ ನಮ್ಮ ದೇಶದಲ್ಲಿ ಆಗಿದೆ. ಎಂದು ಶ್ರೀ ದೇವೇಗೌಡರು ಒಂದು ಮಾತನ್ನು ಪ್ರಮುಖವಾಗಿ ಹೇಳಿದರು. ಸಾಮಾಜಿಕ ನ್ಯಾಯ ಮತ್ತು ಗುಣಮಟ್ಟ ಎರಡನ್ನೂ ಕಾಪಾಡಿಕೊಳ್ಳತಕ್ಕ ದೃಷ್ಟಿಯಿಂದ higher education will have to be made selective ಎನ್ನುವ ಮಾತನ್ನು ಕೂಡ ಹೇಳಿದರು. ಇದು ಸಾಧುವಾದರೂ ಎಲ್ಲ ವರ್ಗದ ಜನರಿಗೂ ವಿದ್ಯಾಭ್ಯಾಸ ದೊರೆಯಬೇಕು ಎನ್ನುವ ಪ್ರಬಲವಾದ ಆಸೆ ಆಕಾಂಕ್ಷೆ ಇರತಕ್ಕ ಕಾಲದಲ್ಲಿ ನಾವು ೧೯೬೮ರಲ್ಲೇ ಇಸವಿಯಲ್ಲಿ ತೆಗೆದು ಕೊಂಡ ಎಜುಕೇಷನಲ್ ಪಾಲಿಸಿ

ರೆಸಲ್ಯೂಷನ್ ಏನಿದೆ ಅದರಲ್ಲಿ ಅದನ್ನು ನಾವು ಒಪ್ಪಿಕೊಂಡಿಲ್ಲ. ಎರಡು ತಿಂಗಳ ಹಿಂದೆ ಸರ್ವೋದಯ ನಾಯಕರಾದ ವಿನೋಬಾಜಿಯವರ ತಮ್ಮಂದಿರಾದವರು ವಲ್ಲಭ ನಿಕೇತನದಲ್ಲಿ ಇಳಿದುಕೊಂಡಿದ್ದಾಗ ನಾನು ಅವರನ್ನು ನೋಡುವುದಕ್ಕೆ ಹೋಗಿದ್ದೆ. ಈಗ ಅವರು ನನ್ನನ್ನು ಕುರಿತು ನೀವು ವಿದ್ಯಾಭ್ಯಾಸದ ಮಂತ್ರಿಗಳು, ನೀವು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಕೊಡುತ್ತಿರುವುದು ನಿರುದ್ಯೋಗಿ ಜನರನ್ನು ಸೃಷ್ಟಿ ಮಾಡತಕ್ಕ ಟಂಕಶಾಲೆಯಾಗಿದೆ ಎಂದು ಅವರು ಹೇಳುತ್ತಿದ್ದರು. There is some force in that. There is kernel of tsuth in that statement.

ವಿದ್ಯಾಭ್ಯಾಸವನ್ನು ಉಪಯುಕ್ತವಾದ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕಾದರೆ ಸ್ಪೆಷಲ್ ಕೋಚಿಂಗ್ ವಗೈರೆ ಹಾಸ್ಟಲ್ ಫೆಸಿಲಿಟೀಸ್ ಕೊಡುವುದು, ಬೇರೆ ಮಕ್ಕಳ ಜೊತೆಯಲ್ಲಿ ಸ್ಪರ್ಧೆ ನಡೆಸುವುದು ಇವೆಲ್ಲ ಅನುಕೂಲಗಳನ್ನು ಮಾಡಿಕೊಡಿ ಎನ್ನುವ ಮಾತನ್ನು ಕೂಡ ಮಾನ್ಯ ದೇವೇಗೌಡರು ಹೇಳಿದರು. ಬರೀ ಷೆಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ನವರಿಗೆ ಮಾತ್ರವಲ್ಲ ಇತರ ಹಿಂದುಳಿದ ವರ್ಗಗಳವರು ಎಷ್ಟೋ ಜನರು ಈ ಹೊತ್ತು ವಿದ್ಯಾಭ್ಯಾಸದ ಪ್ರಯೋಜನವನ್ನು ಪಡೆಯುತ್ತಿದ್ದಾರೆನ್ನುವುದನ್ನು ಕೂಡ ನಾವು ಗಮನದಲ್ಲಿ ಇಟ್ಟುಕೊಳ್ಳಬೇಕು. ಒಂದೆರಡು ರಾಜ್ಯದಲ್ಲಿ ಒಂದೆರಡು ರೀತಿಯಲ್ಲಿ ತೀವ್ರವಾಗಿ ಇದಕ್ಕೆ ವಿರೋಧವಿದೆ ಎನ್ನುವುದನ್ನು ಹೇಳುತ್ತೇನೆ. Vocationalisation of education ಎಂದು ಏನು ಹೇಳುತ್ತಾರೆ ಅದರ ಬಗ್ಗೆ ಶ್ರೀಮತಿ ಮಡಿಮನ್ ಮತ್ತು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಒಂದೊಂದು ಕಡೆ ಒಂದೊಂದು ರೀತಿಯ ವಿಶ್ವ ಪ್ರತಿಕ್ರಿಯ ಇದರಲ್ಲಿದೆ. ಅನೂಚಾನವಾಗಿ, ಅನಾದಿಯಿಂದ ಮಾಡಿಕೊಂಡು ಒಂದೊಂದು ಕಸುಬನ್ನು ಮಾಡಿಕೊಂಡು ಬಂದಿರತಕ್ಕ ಜನರ ಮಕ್ಕಳಿಗೆ ವೊಕೇಷನಲೈಸೇಷನ್ ಆಫ್ ಎಜುಕೇಷನ್ ಮಾಡುವುದಾದರೆ ಆ ಮಕ್ಕಳು ವಿದ್ಯಾಭ್ಯಾಸದ ಕಡೆಗೆ ಗಮನ ಕೊಡುವುದಿಲ್ಲ. ಅವರ ತುದೆ ತಾಯಿ ಮಾಡುವ ಕಸುಬಿನ ಕಡೆಗೆ ಗಮನ ಹಾಕುತ್ತಾರೆ. ಆ ಮಟ್ಟಿಗೆ ಅವರಿಗೆ ತೊಂದರೆಯಾಗುವುದರಿಂದ ಹೆಚ್ಚು ಜನರು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮುಂದೆ ಬರುವುದಕ್ಕೆ ಸಾಧ್ಯವೇ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಆದುದರಿಂದ ಈ ಒಂದು ಜೂನಿಯರ್ ಕಾಲೇಜುಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಬೇಕಾದರೆ ಸುಮಾರು ೩ ಲಕ್ಷ ೫೦ ಸಾವಿರ ರೂಪಾಯಿ ಬೇಕಾಗುತ್ತದೆ. ಒಂದು ಲಕ್ಷ ೫೦ ಸಹಸ್ರ ರೂಪಾಯಿ ಕಟ್ಟಡಕ್ಕೆ ೫೦ ಸಾವಿರ ರೂಪಾಯಿ ಲೈಬ್ರರಿಗೆ ೫೦ ಸಾವಿರ ರೂಪಾಯಿ ಎಕ್ವಿಪ್‌ಮೆಂಟಿಗೆ ಮತ್ತು ಲ್ಯಾಬೊರೇಟರಿಗೆ ಒಂದು ಲಕ್ಷ ರೂಪಾಯಿ ಒಟ್ಟು ಮೂರು ಲಕ್ಷ ೫೦ ಸಹಸ್ರ ರೂಪಾಯಿ ಈ ಮಟ್ಟದಲ್ಲಿ ಶಿಕ್ಷಣ ಸರಿಯಾಗಿ ಊರ್ಜಿತವಾಗಬೇಕಾದರೆ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.— ಸಾಮಾಜಿಕ ನ್ಯಾಯ ದೊರಕಿಸಬೇಕು ಎಂದು ಸರ್ಕಾರದ ಅಭಿಪ್ರಾಯ ಇದ್ದರೆ ಅಕಾಡಮಿಕ್ ಸ್ಟಾಂಡರ್ಡ್‌ಗೆ ಸ್ವಲ್ಪ ದಿವಸ ರಜ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಅಕಾಡಮಿಕ್ ಸ್ಟಾಂಡರ್ಡ್ ಗುಣಮಟ್ಟ ಅಷ್ಟು ಚೆನ್ನಾಗಿ ಇಲ್ಲ ಎಂದು ಹೇಳಿ ರಜ ಕೊಡತಕ್ಕಂತ ನೀತಿ ಸರಿಯಲ್ಲ. ಗುಣಮಟ್ಟ ಜಾಸ್ತಿ ಮಾಡುವುದಕ್ಕೆ ಸ್ಟಾಫ್ ಕೊಡತಕ್ಕಂಥಾದ್ದು, ಲ್ಯಾಬೊರೇಟರಿ ಹಾಗೂ ಲೈಬ್ರರಿ ಇತರೆ ಎಕ್ವಿಪ್‌ಮೆಂಟ್ ಕಟ್ಟಡದ ವ್ಯವಸ್ಥೆ ಮಾಡುವುದು ಹಾಗೂ ಪ್ರತಿಯೊಬ್ಬ ಯುವಕನಲ್ಲಿ ಇರತಕ್ಕ ಪ್ರಕೃತಿದಾಯಕವಾದ, ನೈಜವಾದ ಶಕ್ತಿಗಳನ್ನು ಅಭಿವ್ಯಕ್ತಮಾಡಿಕೊಳ್ಳುವುದಕ್ಕೆ ಏನು ಏನು ನೆರವು ಬೇಕೋ ಅವುಗಳನ್ನು ಕೊಡುವಂಥಾದ್ದು ಸರ್ಕಾರದ ಕರ್ತವ್ಯ. ಈ ದಿಸೆಯಲ್ಲಿ ಡೈರೆಕ್ಟರೇಟ್ ಆಫ್ ಯೂತ್ ಸರ್ವೀಸಸ್ ಇದು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಇದರ ಜೊತೆಗೆ ಶಾಲಾ ಕಾಲೇಜುಗಳಲ್ಲಿ ವ್ಯಾಯಾಮಕ್ಕೆ ಸಂಬಂಧಪಟ್ಟ ಎಜುಕೇಷನ್ ಇದೆ ಜಿಲ್ಲೆಗಳಲ್ಲಿ ಎಲ್ಲಾ ಕಾಲೇಜುಗಳಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ೪೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇನ್ನು ಶಾಲೆಗಳಲ್ಲಿ ಪ್ರಾರ್ಥನೆಯ ವಿಷಯ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಯಾವ ನಟರಾಜನ ಪ್ರಾರ್ಥನೆ ಮಾಡಿದರೆ ಒಳ್ಳೆಯದು ಆಗುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ನಟರಾಜನ ಪ್ರಾರ್ಥನೆ ಕೂಡ ಬಹಳ ಮುಖ್ಯವಾದುದು. Man cannot live by bread alone. ಆದುದರಿಂದ ಶಾಲೆ ಪ್ರಾರಂಭವಾಗುವುದಕ್ಕೆ ಮೊದಲು ಪ್ರಾರ್ಥನೆಯನ್ನು ಮಾಡುವುದು ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ಕೀರ್ತನೆ ರೂಪದಲ್ಲಿ ಮಾಡಬೇಕೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಕೀರ್ತನೆ ರೂಪದಲ್ಲಿ ಮಾಡಲು ಕಷ್ಟವಾಗುತ್ತದೆ. ಅದು [illegible]

ಎಲ್ಲಾ ಮಟ್ಟದಲ್ಲಿಯೂ ಕೂಡ ಹಾಕಿಕೊಳ್ಳಬೇಕು. ಹೀಗೆ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ನಾವು ಕನ್‌ಸಾಲಿಡೇಷನ್ ಅನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕೇ ಹೊರತು ಎಕ್ಸ್‌ಪ್ಯಾನ್‌ಷನ್ನಿಂದ ಏನೂ ಪ್ರಯೋಜನ ಆಗುವುದಿಲ್ಲ. ಮೊದಲನೇ ಪಂಚವಾರ್ಷಿಕ ಯೋಜನೆ ಬಂದಂಥ ಕಾಲದಲ್ಲಿ ಆಗ ಇದ್ದಂಥ ಪ್ರಧಾನಿಗಳು ಗುಣಮಟ್ಟದ ಬಗ್ಗೆ ಕೇಳಿದ್ದು ಉಂಟು. ಎಲ್ಲಾ ಮಟ್ಟದಲ್ಲೂ ಇರತಕ್ಕ ಲೋಪ ದೋಷಗಳು ಏನು ಇವೆ ಅವುಗಳನ್ನು ಸರ್ಕಾರ ಹಾಗೂ ಆಡಳಿತ ಯಂತ್ರ, ಇವು ಅಷ್ಟೇ ಅಲ್ಲ ಸಾರ್ವ ಜನಿಕರು ಕೂಡ ವಿಚಕ್ಷಣೆಯಿಂದ ನೋಡಿ ಸರಿಪಡಿಸಬೇಕು, ಉಪಾಧ್ಯಾಯರು ಶಾಲೆಗೆ ಸರಿಯಾಗಿ ಬರು ತ್ತಾರೋ ಇಲ್ಲವೋ ಯಾವ ಒಂದು ಕಾರ್ಯಕ್ರಮವೇ ಆಗಲಿ ಅದು ಸರಿಯಾಗಿ ನಡೆಯುತ್ತಾ ಇದೆಯೋ ಇಲ್ಲವೋ, ಎಂಬುದನ್ನು ಬಾಲಕರ ಪೋಷಕರು ತಂದೆ ತಾಯಿಗಳ ಹಾಗೂ ಸಾರ್ವಜನಿಕರ ಅಭಿಪ್ರಾಯ ವನ್ನು ರೂಪಿಸತಕ್ಕ ಮುಖಂಡರು ಮತ್ತು ಮಾನ್ಯ ಸಭೆಯ ಸದಸ್ಯರು ಎಲ್ಲಾಮಟ್ಟದಲ್ಲಿ ಮತ್ತು ಎಲ್ಲಾ ಘಟ್ಟದಲ್ಲಿ ಇರತಕ್ಕ ಸಾರ್ವಜನಿಕ ಮುಖಂಡರುಗಳು ನಿಗಾ ಇಟ್ಟು ಎಚ್ಚರಿಕೆ ವಹಿಸಿದರೆ ಒಳ್ಳೆಯ ಮಹತ್ತರ ಕಾರ್ಯಕ್ರಮವಾಗುತ್ತದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಆಗಬೇಕಾದುದು ಇದೆ. ಸಾಮಾನ್ಯ ವಾಗಿ ನಿತ್ಯ ಜೀವನದ ಯಾತ್ರೆಯನ್ನು ನಡೆಸತಕ್ಕ ಕಡೆ ಹೆಚ್ಚಿಗೆ ಗಮನ ಕೊಡುವ ತಂದೆ ತಾಯಿಗಳು ಅದನ್ನು ಎಷ್ಟುಮಟ್ಟಿಗೆ ನಿರೀಕ್ಷಿಸುವುದಕ್ಕೆ ಸಾಧ್ಯ ಇದೆ ಎಂಬುದೂ ಸಹ ಒಂದು ವಿಷಯ. ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಚರ್ಚೆ ಮಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—೩—೪ ಅಕಾಡಮಿಗಳನ್ನು ಸೇರಿಸಿ ಒಂದು ಅಕಾಡಮಿ ಮಾಡುವು ದಕ್ಕೆ ಸಾಧ್ಯವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದು ಕೂಡ ಸರ್ಕಾರದ ಗಮನದಲ್ಲಿ ಇದೆ. ಮೂರು ಅಕಾಡಮಿಗಳನ್ನು ಜೊತೆಗೆ ಸೇರಿಸಿ ಒಂದು ಸಂಸ್ಥೆಯ ಅಡಿಯಲ್ಲಿ ತೆಗೆದುಕೊಂಡು ಬರತಕ್ಕ ವಿಷಯ ಸರ್ಕಾರದ ಮುಂದೆ ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವಿಚಾರ ಸರ್ಕಾರ ತೀವ್ರ ಪರಿ ಶೀಲನೆಗೆ ಒಳಪಟ್ಟಿದೆ, ಸಂಬಂಧಪಟ್ಟ ಕಾನ್‌ಸ್ಟಿಟ್ಯೂಷನ್ ಏನು ಇದೆ ಅಂಥಾದ್ದನ್ನು ಕೂಡ ನಾವು ಪರಿ ಶೀಲನೆ ಮಾಡುತ್ತಾ ಇದ್ದೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಕಾಡಮಿ ಡೈರೆಕ್ಟರ್ ಯಾರನ್ನು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಒಳ್ಳೆಯ ರೀತಿಯಲ್ಲಿ ಪರಿಶ್ರಮ ಇರುವ ತಜ್ಞರನ್ನು ಅದಕ್ಕೆ ಡೈರೆಕ್ಟರ್ ಆಗಿ ನೇಮಕ ಮಾಡುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಟೆಕ್ಸ್ಟ್ ಬುಕ್ ವಿಷಯದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದುವರೆಗೆ ಸುಮಾರು ೩೯೧ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಎಲ್ಲಾ ಪುಸ್ತಕಗಳ ಪ್ರತಿಗಳು ಕೂಡ ನಮ್ಮಲ್ಲಿ ಸಾಕಾದಷ್ಟು ಇವೆ. ಆ ಪೈಕಿಯಲ್ಲಿ ನಾಲ್ಕು ಪುಸ್ತಕಗಳು ಮಾತ್ರ ಇರಲಿಲ್ಲ. ಅದನ್ನು ಕೂಡ ಶಾಲೆಗಳು ಪ್ರಾರಂಭ ಆಗುವುದರೊಳಗೆ ದೊರಕುವ ವ್ಯವಸ್ಥೆ ಮಾಡುತ್ತೇವೆ. ಪ್ರತಿ ಜಿಲ್ಲೆಯಲ್ಲಿ ಈಗಾಗಲೇ ಸ್ಥಾಪನೆ ಮಾಡಿರ ತಕ್ಕ ಬುಕ್ ಡಿಪೋಗಳು ಏನು ಇವೆ ಅವುಗಳ ಮುಖಾಂತರ ಈ ಪುಸ್ತಕಗಳನ್ನು ಹಂಚತಕ್ಕ ವ್ಯವಸ್ಥೆಯನ್ನು ನಾವು ಮಾಡುತ್ತೇವೆ ಎಂದು ಹೇಳುತ್ತೇನೆ.

ಪರೀಕ್ಷೆಗಳಿಗೆ ಸಂಬಂಧಪಟ್ಟ ವಿಷಯವನ್ನು ಸನ್ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು ಶ್ರೀಮತಿ ಶೀಲಾ ಇರಾಣಿಯವರು ಈ ವಿಷಯವನ್ನು ಹೇಳುತ್ತಾ ೭ನೇ ತರಗತಿ ಪರೀಕ್ಷೆ ಮತ್ತೆ ಎಸ್.ಎಸ್.ಎಲ್.ಸಿ. ಮಟ್ಟದಲ್ಲಿ ಪರೀಕ್ಷೆ ಇದ್ದರೆ ಸಾಕು ಎಂದು ಹೇಳಿದರು. ಈ ಕ್ಷಣ ಇದರ ಬಗ್ಗೆ ತೀರ್ಮಾನ ತೆಗೆದು ಕೊಳ್ಳುವ ವಿಚಾರ ಇಲ್ಲ. ಇತ್ತೀಚೆಗೆ ನಾವು ಒಂದು ಸಿಸ್ಟಮ್ ಜಾರಿಗೆ ತೆಗೆದುಕೊಂಡು ಬಂದಿದ್ದೇವೆ. ಪಟ್ಟಣದಲ್ಲಿ ಇರತಕ್ಕಂಥ ಶಾಲೆಗಳಲ್ಲಿ ಪ್ರತಿ ತಿಂಗಳು ಅಥವಾ ೧೫ ದಿವಸಕ್ಕೆ ಒಂದು ಸಾರಿ, ಅಥವಾ ವಾರಕ್ಕೆ ಒಂದು ಸಾರಿ ಸಣ್ಣ ಪುಟ್ಟ ಪರೀಕ್ಷೆಗಳನ್ನು ಅಂದರೆ ಟೆಸ್ಟ್‌ನ್ನು ಮಾಡುತಾರೆ. ಸರ್ಕಾರಿ ಕಾಲೇಜುಗಳಲ್ಲಿ ಈ ಒಂದು ವಿಷಯದ ಕಡೆ ಇತ್ತೀಚೆಗೆ ಇಂಟರ್‌ನಲ್ ಅಸೆಸ್‌ಮೆಂಟ್ ಮಾಡುವ ಕಡೆಗೆ ಗಮನ ಕೊಟ್ಟಿ ದ್ದೇವೆ. ಈ ಗುಣಮಟ್ಟವನ್ನು ಜಾಸ್ತಿ ಮಾಡುವ ಸಂದರ್ಭದಲ್ಲಿ ಯು.ಜಿ.ಸಿ. ನೆರವು ಸಿಕ್ಕಿದೆ, ಮೈಸೂರಿನಲ್ಲಿರುವ ಮಹಾರಾಜ ಕಾಲೇಜಿನಲ್ಲಿ ಈ ಕ್ರಮ ತೆಗೆದುಕೊಂಡಿದ್ದಾರೆ. ೭ನೇ ತರಗತಿಯಲ್ಲಿ ಪರೀಕ್ಷೆಗಳನ್ನು ತೆಗೆದು ಹಾಕುವ ಬಗ್ಗೆ ತೀವ್ರವಾದ ವಿರೋಧ ಇದೆ. ಸರ್ಕಾರ ಕೂಡ ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲ ಈ ಸಲಹೆಯನ್ನು ಒಪ್ಪಿಕೊಳ್ಳುವುದಿಲ್ಲ. ಇನ್ನು ಸ್ವಲ್ಪ ದಿವಸ ಪ್ರಯೋಗ ಮಾಡೋಣ, ಆಮೇಲೆ ತೀರ್ಮಾನ ತೆಗೆದು ಕೊಳ್ಳೋಣ S.S.L.C. valuation should not be centralised at Bangalore ಎಂದು ಅಭಿಪ್ರಾಯವನ್ನು ಮಾನ್ಯ ಸದಸ್ಯರು ಹೇಳಿದರು. ಅದನ್ನು ಕೂಡ ಸದ್ಯದ ಒಪ್ಪಿಕೊಳ್ಳುವಂತಹ ಮಟ್ಟದಲ್ಲಿ ಇಲ್ಲ, ಅಡ್ಮಿನಿಸ್ಟ್ರೇಷನ್ ವಿಷಯದಲ್ಲೂ ಕೂಡ ಕೆಲವು ಮಾತನ್ನು ಮಾನ್ಯ ದೇವೇಗೌಡರು ಹಾಗೂ ಇನ್ನು ಒಬ್ಬಿಬ್ಬರು ಮಾನ್ಯ ಸದಸ್ಯರು

ಹೇಳಿದರು. ಮಾನ್ಯ ಸದಸ್ಯರಿಗೆ ಗೊತ್ತಿದ್ದ ಹಾಗೆ ಕರ್ನಾಟಕ ಏಕೀಕರಣವಾದ ಮೇಲೆ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್‌ನ್ನು ಫೈನಲೈಸ್ ಮಾಡುವುದಕ್ಕಾಗಲಿಲ್ಲ. ಕ್ಲಾಸ್ ಒನ್ ಜ್ಯೂನಿಯರ್ ಸ್ಕೇಲಿನಲ್ಲಿ ಇನಚಾರ್ಜ್ ಅರೇಂಜ್‌ಮೆಂಟ್‌ನ್ನು ರದ್ದು ಮಾಡಿ ರೆಗ್ಯುಲರ್ ಅಪಾಯಿಂಟ್‌ಮೆಂಟ್ ಮೊನ್ನೆ ತಾನೇ ಮಾಡಿದ್ದೇವೆ ಎಂದು ಮಾನ್ಯ ಸಭೆಗೆ ತಿಳಿಸುತ್ತೇನೆ. ಜಾಯಿಂಟ್ ಡೈರೆಕ್ಟರ್ ಲೆವೆಲ್‌ನಲ್ಲಿ ಈಗಾಗಲೇ ರೆಗ್ಯುಲರ್ ಅಪಾಯಿಂಟ್‌ಮೆಂಟ್ಸ್ ಮಾಡತಕ್ಕದು ಕೂಡ ಮಾನ್ಯ ಸದಸ್ಯರಿಗೆ ಗೊತ್ತಿದೆ. ಕ್ವಾಲಿಟಿ ಇಂಪ್ರೂವ್ ಮಾಡುವುದಕ್ಕೆ ಬೇಕಾದಂತಹ ಟ್ರೈನಿಂಗ್ ಸೆಂಟರ್ಸ್ ಪ್ರಾಥಮಿಕ ಶಾಲೆಯಿಂದ ಟಿ.ಸಿ.ಎಚ್. ವರೆಗೆ ಟ್ರೈನಿಂಗ್ ಕೊಡತಕ್ಕದ್ದು ಇದೆ.

ಶ್ರೀ ಕೋಣಂದೂರು ಲಿಂಗಪ್ಪ.— ಟಿ.ಸಿ.ಎಚ್. ತೆಗೆದುಬಿಟ್ಟು ಪಿ.ಯು.ಸಿ ಗೆ ಸೇರಿಸಿದರೆ ಅನುಕೂಲವೆಂದು ಸೂಚನೆ ಇದೆ. ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ — ಟಿ.ಸಿ.ಎಚ್. ಟ್ರೈನಿಂಗ್ ಜೊತೆಗೆ ಬಿಎಡ್ ಕಾಲೇಜು ಟ್ರೈನಿಂಗ್ ಕೊಡತಕ್ಕದ್ದು ಇದೆ. ಎರಡು ಸಾವಿರ ಬಿಎಡ್ ಟೀಚರ್ಸ್ ತಯಾರು ಮಾಡಿರುವುದರಲ್ಲಿ ಒಂದು ಸಾವಿರಕ್ಕಿಂತ ಹೆಚ್ಚಿಗೆ ಉಪಾಧ್ಯಾಯರು ಕೆಲಸ ಸಿಕ್ಕದೆ ಇರತಕ್ಕ ಪರಿಸ್ಥಿತಿ ಕೂಡ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕ್ವಾಲಿಟಿ ಇಂಪ್ರೂಮೆಂಟ್ ಮಾಡುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಶ್ರೀಮಾನ್ ಕಕ್ಕಿಲಾಯ ಮತ್ತು ಕೆಲವು ಮಾನ್ಯ ಸದಸ್ಯರು ಸೋಶಿಯಲ್ ಮತ್ತು ಎಕನಾಮಿಕ್ಸ್ ನೀಡ್ಸ್ ಅವನ್ನು ಗಮನದಲ್ಲಿಟ್ಟುಕೊಂಡು ವಿದ್ಯಾಭ್ಯಾಸ ಕ್ರಮವನ್ನು ಮಾಡತಕ್ಕದ್ದು ಸರಿ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದೆಲ್ಲ ಶೀಘ್ರವಾಗಿ ಕಾರ್ಯಗತ ಮಾಡಲು, ಅಡ್ವೈಸರಿ ಬೋರ್ಡ್ ಫಾರ್ ಸ್ಯಾನ್‌ಸ್ಕ್ರಿಟ್ ಎಜ್ಯುಕೇಶನ್ ಕಾಮರ್ಸ್ ಎಜ್ಯುಕೇಶನ್, ಮ್ಯೂಸಿಕ್ ಮತ್ತು ಆರ್ಟ್ ಮತ್ತು ಎಲ್ಲ ಮಟ್ಟದಲ್ಲಿಯೂ ಅಡ್ವೈಸರಿ ಬೋರ್ಡ್ ಮಾಡಿದ್ದೇವೆ. ಇದರ ಜೊತೆಗೆ ಕೊಲೆಜಿಯೇಟ್ ಎಜ್ಯುಕೇಶನ್ ಬೋರ್ಡ್, ಅಡ್ವೈಸರಿ ಬೋರ್ಡ್ ಆನ್ ಸೆಕೆಂಡರಿ ಎಜ್ಯುಕೇಶನ್ ಅಡ್ವೈಸರಿ ಬೋರ್ಡ್ ಆಫ್ ಪ್ರೈಮರಿ ಎಜ್ಯುಕೇಷನ್ ಈ ರೀತಿ ಸುಮಾರು ಏಳು ಬೋರ್ಡ್‌ಗಳು ರಾಜ್ಯದಲ್ಲಿ ಇವೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶಿಸ್ತಿನ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಮಾತನಾಡಿ ವಿದ್ಯಾರ್ಥಿಗಳಲ್ಲಿ ಈ ಒಂದು ಶಿಸ್ತು ಇರಬೇಕು ಎಂದು ಹೇಳಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ — ಶಿಕ್ಷಣ ಪದ್ಧತಿಯಲ್ಲಿ ಮೂಲಭೂತ ಬದಲಾವಣೆ ಬಗ್ಗೆ ಏನು ಯೋಚನೆ ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಮೂಲಭೂತ ಬದಲಾವಣೆ ಏನು ಮಾಡಬೇಕು ಎನ್ನುವ ಬಗ್ಗೆ ಕೇಂದ್ರ ಸರ್ಕಾರ ೧೯೬೮ರನೇ ಇಸವಿಯಲ್ಲಿ ಪಾಲಿಸಿ ರೆಸಲ್ಯೂಶನ್ ತೆಗೆದುಕೊಂಡಿದೆ. ಆ ಪ್ರಕಾರವಾಗಿ ಏನೇನು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಅವೆಲ್ಲವನ್ನು ಸರ್ಕಾರ ಹಾಕಿಕೊಂಡಿದೆ. ಹೈಯರ್ ಎಜ್ಯುಕೇಷನ್ ಸೆಲೆಕ್ಟೀವ್ ಮಾಡಬೇಕೆಂದು ಹೇಳಿದ್ದಾರೆ. ಆದರೆ ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡಬೇಕಾಗಿದೆ. ಹಿಂದುಳಿದ ವರ್ಗದವರು ವಿದ್ಯಾಭ್ಯಾಸದ ಕಡೆಗೆ ದಾವಿಸುತ್ತಾ ಇರುವುದರಿಂದ ಸದ್ಯಕ್ಕೆ ಆ ಸಲಹೆಯನ್ನು ಒಪ್ಪಿಕೊಳ್ಳತಕ್ಕ ಪರಿಸ್ಥಿತಿಯಲ್ಲಿಲ್ಲ. ಮುಂದಿನ ತಿಂಗಳು ೧೨—೧೩ನೇ ತಾರೀಖು ಡೆಲ್ಲಿಯಲ್ಲಿ ರಾಜ್ಯಗಳ ವಿದ್ಯಾಭ್ಯಾಸದ ಇಲಾಖೆ ಸಚಿವರುಗಳ ಸಭೆ ಕರೆದಿರುತ್ತಾರೆ. ಅಲ್ಲಿ ಎಲ್ಲ ವಿಷಯಗಳನ್ನು ಕೂಡ ನಾವು ಚರ್ಚೆ ಮಾಡಬೇಕಾಗಿದೆ. ಸ್ವಾತಂತ್ರ ಬಂದು ೨೫ ವರ್ಷಗಳಾಗಿದ್ದರೂ ಕೂಡ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಹಾಗೆ ಏಕರೂಪ ನೀತಿಯನ್ನು ರೂಪಿಸಿಕೊಂಡಿಲ್ಲವೆಂದು ಹೇಳಿ ಕೇಂದ್ರದ ವಿದ್ಯಾಸಚಿವರಾದ ಪ್ರೊಫೇಸರ್ ನೂರಲ್ ಹುಸೇನ್ ರವರು ನಮಗೆ ಕಾಗದ ಬರೆದಿದ್ದಾರೆ.

ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪತ್ರಿಕೆಗಳಲ್ಲಿ ಬಂದಿರತಕ್ಕ ವಿಚಾರ ಮತ್ತು ಸೆನೆಟ ಸಭೆಗಳಲ್ಲಿ ಸದಸ್ಯರಾಗಿ ಮಾತನಾಡಿದ್ದಾರೆ. ಎಲ್ಲ ಸರಿಯೆಂದು ಹೇಳುವುದಕ್ಕೆ ಬರುವುದಿಲ್ಲ. ಸ್ವಲ್ಪ ಲೋಪದೋಷ ಇರಬಹುದು ಎಂದು ಕೆಲವು ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ, ಶ್ರೀ ಕಾಗೋಡು ತಿಮ್ಮಪ್ಪನವರ ಹಾಗೂ ಮಾನ್ಯ ಬಂಗಾರಪ್ಪ, ಮಾನ್ಯ ಕಕ್ಕಿಲಾಯರವರೂ ಮತ್ತು ಶ್ರೀಮತಿ ಶೈಲ ಇರಾನಿ ಅವರೂ ಕೂಡ ಒಂದು ಎಜ್ಯುಕೇಶನ್ ಕಮಿಷನ್ ಅಪಾಯಿಂಟ್ ಮಾಡಬೇಕು ಎಂದು ಹೇಳಿದ್ದಾರೆ. ಇನ್ನೊಬ್ಬರು ಎನ್‌ಕ್ವೈರಿ ಕಮಿಷನ್ ಆಗಬೇಕು ಎಂದು ಹೇಳಿದ್ದಾರೆ. ಜ್ಯುಡಿಶಿಯಲ್ ಎನ್‌ಕ್ವೈರಿ ಆಗಬೇಕು ಎನ್ನತಕ್ಕ ವಿಚಾರವನ್ನು ಕೂಡ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬ್ರಿಟನ್‌ನಲ್ಲಿ ಕೂಡ ರಾಯಲ್ ಕಮಿಷನ್ ಪ್ರತಿ ಹತ್ತು ವರ್ಷಗಳಿಗೆ ಒಂದು ಸಾರಿ ನೇಮಕ ಮಾಡುತ್ತಾರೆ. ಆ ಸಮಿತಿಯವರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಪರಿಶೀಲನೆ ಮಾಡುತ್ತಾರೆ. ಅದರ ಪೂರ್ಣ

ರೂಪುರೇಶೆಗಳು ನನ್ನ ಮುಂದೆ ಇಲ್ಲ. ಆದರೂ ಕೂಡ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವಿಶ್ವವಿದ್ಯಾನಿಲಯಗಳು ಚೆನ್ನಾಗಿ ಕೆಲಸ ಮಾಡಬೇಕು, ಅವೆಲ್ಲ ಜ್ಞಾನ ಪೀಠಗಳು. ಅದಕ್ಕೋಸ್ಕರ ಅವರಿಗೆ ಒಂದು ಸ್ವಾಯತ್ತತೆಯನ್ನು ಕೊಟ್ಟಿರತಕ್ಕದ್ದು ಅದರ ದುರುಪಯೋಗ ಯಾವತ್ತೂ ಕೂಡ ಆಗಕೂಡದು. ಒಂದು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ವಿಭಾಗಗಳು ಸುಮಾರು ೧೫ ರಿಂದ ೨೬ರ ವರೆಗೆ ಇರುತ್ತವೆ ಅದಕ್ಕೆ ಒಳ್ಳೆಯ ಪ್ರೊಫೇಸರ್, ರೀಡರ್‌ಗಳು, ಲೆಕ್ಚರರ್‌ಗಳನ್ನು ನೇಮಕ ಮಾಡಿದರೆ, ಅದರಲ್ಲೂ ಶೆಡ್ಯೂಲ್ ಕ್ಯಾಸ್ಟ್ ಶೆಡ್ಯೂಲ್ ಟ್ರೈಬ್ಸ್‌ಗೂ ಕೂಡ ಮಿನಿಮಮ್ ಕ್ವಾಲಿಫಿಕೇಶನ್ ಇಟ್ಟುಕೊಂಡು ಒಳ್ಳೆಯ ಉತ್ತಮ ಉಪಾಧ್ಯಾಯರನ್ನು ನೇಮಕ ಮಾಡಿದರೆ ಆಗ ಕಾಂಪಿಟೆಂಟ್ ಟೀಚರ್ಸ್ ಅಲ್ಲಿರುತ್ತಾರೆ. ಅಲ್ಲಿ ಶಿಸ್ತು ಬಹಳಮಟ್ಟಿಗೆ ಬರುವುದಿಲ್ಲ. ನಮ್ಮ ಹಿಂದು ರಾಷ್ಟ್ರದಲ್ಲಿ ಮಾತ್ರವಲ್ಲ ಅಶಿಸ್ತು ನೋಡುತ್ತಾ ಇರುವುದು. ಉನ್ನತ ಸಂಪದಭಿವೃದ್ಧಿಯನ್ನು ಪಡೆದಿರತಕ್ಕ ರಾಷ್ಟ್ರದಲ್ಲಿ ಅಶಿಸ್ತು ಈವತ್ತಿನ ದಿವಸ ನಾವು ನೋಡುತ್ತಾ ಇದ್ದೇವೆ. ಅದಕ್ಕೋಸ್ಕರ ನಾವು ಓದುತ್ತಾ ಇರುವಾಗ ನೀತಿ ಚಿಂತಾಮಣಿ ಇಟ್ಟಿದ್ದರು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನೀತಿ ಚಿಂತಾಮಣಿ ಬಗ್ಗೆ ಮಂತ್ರಿ ಮಂಡಲಕ್ಕೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನೀತಿ ಎಲ್ಲರಿಗೂ ಬೇಕು ಅದಕ್ಕೋಸ್ಕರ ಹೇಳಿದೆ. ಮನಸ್ಸು ಮೊಟ್ಟ ಮೊದಲು ಕೃಷಿಯಾಗಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನೀತಿ ನಮಗೆ ಹೇಳಿಬಿಟ್ಟು ಚಿಂತಾಮಣಿ ನೀವು ಇಟ್ಟುಕೊಂಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದು ಯಾರು ಮಾಡಿದರೂ ತಪ್ಪಾಗುತ್ತದೆ. ಅವರು ಒಳ್ಳೆಯ ಪಂಡಿತರಾಗಬಹುದು ಪ್ರಾಜ್ಞಾವಂತರಾಗಬಹುದು. ಒಳ್ಳೆಯ ರೀತಿಯಲ್ಲಿ ಜಾತೀಯತೆಗೆ ಅವಕಾಶ ಕೊಡದೆ ಒಳ್ಳೆಯ ಮಟ್ಟದ ಉಪಾಧ್ಯಾಯರನ್ನು ನೇಮಕ ಮಾಡಿದರೆ ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಮಕ್ಕಳು ಒಳ್ಳೆಯ ಶಿಸ್ತಿನಿಂದ ಇರುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಚ್ ಡಿ. ದೇವೇಗೌಡ — ಜಾತಿಯತೆ ಬಗ್ಗೆ ಪಾರ್ಲಿಮೆಂಟ್ ಭವನದಿಂದ ಹೇಳಿಕೊಂಡು ಬನ್ನಿ, ಇಲ್ಲಿ ಏಕೆ ಹೇಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಒಂದೇ ಸಲ ಸಮಾಜಿಕ ಬದಲಾವಣೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಸಮಾಜದಲ್ಲಿರತಕ್ಕ ಲೋಪದೋಷಗಳು ವಿಶ್ವವಿದ್ಯಾನಿಲಯ ಮತ್ತು ಇತರ ಸಂಸ್ಥೆಗಳಲ್ಲಿ ಕೂಡ ಸ್ವಾಭಾವಿಕವಾಗಿ ಕಂಡುಬರುತ್ತವೆ. ಗಂಭೀರವಾದಂತಹ ಆರೋಪಣೆಗಳನ್ನು ವಿಶ್ವವಿದ್ಯಾನಿಲಯದ ಮೇಲೆ ಸನ್ಮಾನ್ಯ ಸದಸ್ಯರು ಏನು ಮಾಡಿದ್ದಾರೆ ಅದನ್ನು ನಾನು ಎಚ್ಚರಿಕೆಯಿಂದ ಪರಿಶೀಲನೆ ಮಾಡುತ್ತೇನೆ.

ಈಗಾಗಲೇ ಇವನ್ನು ಕುಲಪತಿಗಳ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ. ಸರ್ಕಾರ ವಿಶ್ವವಿದ್ಯಾನಿಲಯಗಳ ವಿಚಾರದಲ್ಲಿ ಹಸ್ತಕ್ಷೇಪ ಮಾಡತಕ್ಕದ್ದು ಸರಿಯಲ್ಲವೆಂದು ನನ್ನ ಅಭಿಪ್ರಾಯ ಹಾಗೂ ಇಲಾಖೆಯ ಶಿಕ್ಷಣ ತಜ್ಞರೂ ಕೂಡ ಈ ಅಭಿಪ್ರಾಯವನ್ನು ಪಡುತ್ತಾರೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇದನ್ನು ಪರಿಶೀಲನೆ ಮಾಡುತ್ತೇನೆ,

6 P. M.

ಶ್ರೀ ಜಿ. ವಿ ಕಕಿಲಾಯ.—ಕುಲಪತಿಗಳೇ ವಿಕ್ಟಿಮೈಸ್ ಮಾಡುತ್ತಾರೆ ಎಂದು ಅವರ ಮೇಲೆ ಚಾರ್ಜ್‌ಷೀಟ್ ಕೊಟ್ಟಿರುವುದರಿಂದ ಅವರು ತನಿಖೆ ನಡೆಸಿದರೆ ನಮಗಂತೂ ಅದರಿಂದ ಸಮಾಧಾನವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಸ್ನಾತಕೋತ್ತರ ವಿಭಾಗಗಳಲ್ಲಿ ಆಗಿರತಕ್ಕ ೨೨೦ ಅಡ್ಮಿಷನ್‌ಗಳಲ್ಲಿ ಅಂಕಿಗಳನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳದೇ ಇರತಕ್ಕವರಿಗೆ ಅವಕಾಶ ಮಾಡಿಕೊಟ್ಟರು ಎಂದು ಹೇಳಿದಿರಿ. ಅದಕ್ಕೆ ಉತ್ತರ ಹೇಳುತ್ತಿದ್ದೇನೆ. ಸುಮಾರು ೨೨ ಜನ ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ತೆಗೆದುಕೊಳ್ಳದೇ ಇದ್ದರೂ ಕೂಡ ಅವರನ್ನು ಸೇರಿಸಿಕೊಳ್ಳಬೇಕೆಂದು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು ಒಂದು ಡೈರೆಕ್ಷನ್ ಕೊಟ್ಟರು. ಇದಾದಮೇಲೆ ಸೆನೆಟ್‌ನಿಂದ ರೆಸಲ್ಯೂಷನ್ ಆಗಿ ನಾನೇ ಸಮಿತಿಯ ಅಧ್ಯಕ್ಷನಾಗಿ ೬ ತಿಂಗಳ ಕಾಲ ಗಜೇಂದ್ರಗಡ್ಕರ್ ಮತ್ತಿತರ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಡಿವಿಜನ್ಸ್ ಪ್ರೋಸೆಸ್ ಮಾಡಿ ೫೦ ಭಾಗ ಮೆರಿಟ್ ಪೂಲ್‌ಗೆ ಇರಬೇಕು. ೩೦ ಭಾಗ

ಇತರ ಬ್ಯಾಕ್‌ವರ್ಡ್ ಕ್ಲಾಸ್, ೧೫ ಜನ ಷೆಡ್ಯೂಲ್‌ಕ್ಲಾಸ್, ೩ ಜನ ಷೆಡ್ಯೂಲ್ ಟ್ರೈಬ್ಸ್ ಒಟ್ಟು ೪೨ ಜನರಿಗೆ ಅಡ್ಮಿಷನ್ ಅವಕಾಶ ಇರಬೇಕು. ಈಗ ಮದ್ರಾಸಿನಲ್ಲಿ ೪೫ ಮಾಡಿದ್ದಾರೆ, ಇದು ಯಾವ ಕಾರಣದಿಂದಲೂ ಜಾಸ್ತಿ ಆಗಕೂಡದು ಎಂದು ಒಂದು ವರದಿಯನ್ನು ಕೊಟ್ಟಿದ್ದೇವೆ, ಆ ವರದಿಯನ್ನು ಉಲ್ಲಂಘನೆ ಮಾಡಿ ಈ ತೀರ್ಮಾನವನ್ನು ತೆಗೆದುಕೊಂಡಿದ್ದರಿಂದ ಸ್ನಾತಕೋತ್ತರ ಡಿಪಾರ್ಟ್‌ಮೆಂಟ್‌ನಲ್ಲಿ ೧೨೧ ಜನ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಟ್ಟಿದ್ದಾರು. ಅವರು ಬಹಳ ದಿವಸಗಳ ಕಾಲದಿಂದ ಅಧ್ಯಯನ ಮಾಡುತ್ತಾ ಇದ್ದಾರೆ. ಈ ಬಗ್ಗೆ ಒಂದು ಕಮಿಟಿಯನ್ನು ಮಾಡಿ, ಆ ಕಮಿಟಿ ಕೂಡ ಇದನ್ನು ಪರಿಶೀಲನೆ ಮಾಡುತ್ತಾ ಇದೆ. ಆದ್ದರಿಂದ ಸರ್ಕಾರ ಇದರಲ್ಲಿ ಹಸ್ತಕ್ಷೇಪ ಮಾಡತಕ್ಕದ್ದು ಸರಿಯಲ್ಲ. ಆದರೆ ಸಿಂಡಿಕೇಟ್ ಡೈರೆಕ್ಷನ್ ಕೊಡದೇ ಇದ್ದ ಪಕ್ಷದಲ್ಲಿ ಈರೀತಿ ಅನ್ಯಾಯ ನಡೆಯುತ್ತಾ ಇರಲಿಲ್ಲ. ಅಕ್ರಮ ನಡೆಯುತ್ತಾ ಇರಲಿಲ್ಲವೆಂದು ಹೇಳುತ್ತೇನೆ. The principal may be violated but not a Rule Either you brake the Rule or the Rule break you. ಚಾನ್ಸಲರ್ ಒಪ್ಪಿಗೆಯನ್ನು ಪಡೆದು ರೆಗ್ಯುಲೇಷನ್ ಆಗಿದ್ದರೂ ಕೂಡ ರೆಗ್ಯುಲೇಷನ್ ಉಲ್ಲಂಘನೆ ಮಾಡಿ ಮಾಡಿರತಕ್ಕದ್ದು ಯಾರಿಗೂ ಮೆರಗನ್ನು ತರತಕ್ಕದ್ದು ಅಲ್ಲವೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಗಂಭೀರವಾಗಿ ಆರೋಪಣೆಗಳನ್ನು ಏನು ಮಾಡಿದ್ದಾರೆ. ಅದು ಈಗಾಗಲೇ ಕುಲಪತಿಗಳ ಗಮನಕ್ಕೆ ಬಂದಿದೆ. ಅದು ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟ ವಿಷಯವಾಗಿದ್ದರೂ ಕೂಡ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಏನು ಸ್ನಾತಕೋತ್ತರ ವಿಭಾಗದ ಬಗ್ಗೆ ಹೇಳಿದಿರಿ. ಅದರ ಬಗ್ಗೆ ವಿಚಾರಣೆ ಮಾಡಿರಿ. ಕೆಲವು ನೇಮಕಗಳ ಬಗ್ಗೆ ಹೇಳಿದಿರಿ, ಇನ್ನೂ ಕೆಲವು ಗುರುತರವಾದ ಅಪಾದನೆಗಳು ಇವೆಯೆಂದು ಮುಗುಂ ಆಗಿ ಹೇಳುತ್ತೀರಿ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಮೈಸೂರು ಯೂನಿವರ್ಸಿಟಿ, ಒಕ್ಕಲಿಗರ ಯೂನಿವರ್ಸಿಟಿ, ಕರ್ನಾಟಕ ಯೂನಿವರ್ಸಿಟಿ ಲಿಂಗಾಯಿತರ ಯೂನಿವರ್ಸಿಟಿ, ಈ ತರಹ ನಡೆಯುತ್ತಿದೆ ಎಂದು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದರು ನಾಲ್ಕೈದು ವರ್ಷಗಳಿಂದ ಮೈಸೂರು ಯೂನಿವರ್ಸಿಟಿ ಒಕ್ಕಲಿಗರ ಯೂನಿವರ್ಸಿಟಿ ಎಂದು ಹೇಳಿಕೊಂಡಿದ್ದೀರಿ, ಚಿಂತೆ ಇಲ್ಲ. ಅಲ್ಲಿ ನಾಲ್ಕೈದು ವರ್ಷಗಳಿಂದ ಏನೇನು ಅಪಾಯಿಂಟ್‌ಮೆಂಟ್ಸ್ ಆಗಿವೆ' ಯಾವ ಯಾವ ಜಾತಿಯವರಿಗೆ ನೇಮಕ ಮಾಡಿದ್ದಾರೆ ಎನ್ನತಕ್ಕ ಬಗ್ಗೆ ಪೂರ್ಣ ಲಿಸ್ಟನ್ನು ಈ ಸಭೆಗೆ ಕೊಡಬೇಕು. ಇಲ್ಲದಿದ್ದರೆ ಕೇವಲ ಒಂದೇ ಜಾತಿಯವರಿಗೆ ಅಪಾಯಿಂಟ್‌ಮೆಂಟ್ ಸಿಕ್ಕಿದೆ ಎನ್ನುವ ಭಾವನೆ ಬರುತ್ತದೆ.

ಶ್ರೀ ಕೆ. ವಿ. ಶಕಿಲಾಯ- —ಶ್ರೀ ಕಾಗೋಡು ತಿಮ್ಮಪ್ಪನವರು ತಾವು ಹೇಳಿದಂತೆ ಆರೋಪಣೆಗಳನ್ನು ಮಾಡಿಲ್ಲ, ಜಾತಿ ಪ್ರಶ್ನೆ ಬರಲಿಲ್ಲ. ಒಕ್ಕಲಿಗರಿಗೆ ಅಪಾಯಿಂಟ್‌ಮೆಂಟ್ಸ್ ಕೊಟ್ಟಿದ್ದಾರೆಂದು ಅವರು ಮಾತನಾಡಿಯೇ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಮೈಸೂರು ಯೂನಿವರ್ಸಿಟಿಯಲ್ಲಿ ೪ ವರ್ಷಗಳ ಹಿಂದೆ ಒಕ್ಕಲಿಗರ ವೈಸ್‌ಛಾನ್ಸಲರ್ ಇರಲಿಲ್ಲ. ಲಿಂಗಾಯಿತರ ವೈಸ್‌ಛಾನ್ಸಲರ್ ಇರಲಿಲ್ಲ. ಮೈನರ್ ಕಮ್ಯೂನಿಟಿ ವೈಸ್‌ಛಾನ್ಸಲರ್ ಬಂದಿದ್ದರು. ಬೆಂಗಳೂರು ಯೂನಿವರ್ಸಿಟಿ ಪ್ರಾರಂಭದ ದಿವಸದಿಂದ ಈ ದಿವಸದವರೆಗೂ ಮೈನರ್ ಕಮ್ಯುನಿಟಿ ವೈಸ ಛಾನ್ಸಲರ್‌ರವರೇ ಇದ್ದಾರೆ. ಆದುದರಿಂದ ಎರಡು ಯೂನಿವರ್ಸಿಟಿಗಳಿಗೆ ನಾನು ಸೀಮಿತ ಮಾಡುತ್ತೇನೆ ಇವತ್ತು ಕರ್ನಾಟಕ ಯೂನಿವರ್ಸಿಟಿ ಬಗ್ಗೆ ಅಪಾದನೆಗೆ ಹೋಗುವುದಿಲ್ಲ. ಇದರ ಪೂರ್ಣ ಅರಿವು ನನಗೆ ಇಲ್ಲ. ಅರಿವು ಇಲ್ಲದೆ ನಾನು ಮಾತನಾಡುವುದಕ್ಕೆ ತಯಾರಾಗಿಲ್ಲ ಮೈಸೂರು ಯೂನಿವರ್ಸಿಟಿಯೊಳಗೆ ನಾಲ್ಕೈದು ವರ್ಷಗಳು ಯಾವಯಾವ ಜಾತಿಯವರಿಗೆ ಏನೇನು ಅಪಾಯಿಂಟ್‌ಮೆಂಟ್ ಸಿಕ್ಕಿದೆ ಎಂಬುದನ್ನು ತಿಳಿಸಿದರೆ It will be helpful to come to a conclusion.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ನಾನು ಒಂದು ಮಾತಿನಲ್ಲಿ ಹೇಳುವುದಾದರೆ ವಿಶ್ವವಿದ್ಯಾನಿಲಯಗಳೇ ಆಗಲಿ ಅಥವಾ ಇನ್ನು ಯಾವ ಮಟ್ಟದ ಸಂಸ್ಥೆಯೇ ಆಗಲಿ, ಸರ್ಕಾರವೇ ಆಗಲೀ, ಯಾವುದೇ ಆಗಲಿ, ನೀತಿಯ ಆಧಾರದ ಮೇಲೆ ಒಂದು ರಾಷ್ಟ್ರ ಅಥವಾ ಒಂದು ಸಂಸ್ಥೆಯನ್ನು ಕಟ್ಟಬೇಕಾಗಿದೆಯೇ ಹೊರತು ಜಾತಿಯ ಆಧಾರದ ಮೇಲೆ ಕಟ್ಟುವುದಕ್ಕೆ ಸಾಧ್ಯವೇ ಇಲ್ಲ. ಹಾಗೆ ಕಟ್ಟಿದರೆ ಅದು ಬಹಳ ಬೇಗ ಕುಸಿದು ಬೀಳುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—I will go a step further ಈಗ ಇಲ್ಲಿ ದೊಡ್ಡ ಕುಂಭಕೋಣ ನಡೆಯುತ್ತಾ ಇದೆ. I do not want to enter into controversy. ಯಾರೋ ಒಬ್ಬರು ರಾಮಲಿಂಗಯ್ಯ ಅನ್ನುವವರನ್ನು ಬೆಂಗಳೂರು ಯೂನಿವರ್ಸಿಟಿಯಲ್ಲಿ ಹೊಡೆದಿದ್ದಾರೆ ಎಂದು

ಚಾರ್ಜ್‌ಷೀಟ್ ಕೊಟ್ಟಿದ್ದಾರೆ. ಒಬ್ಬರು ಪರ, ಒಬ್ಬರು ವಿರೋಧ ಇಲ್ಲಿ ರೆಸಲ್ಯೂಷನ್ ಮಾಡಿದ್ದಾರೆ. ಅದಕ್ಕೆ ಉಪ ಕುಲಪತಿಗಳೇ ಹೊಡೆಸಿದರೂ ಎಂದು ಹೇಳುವುದಕ್ಕಾಗುತ್ತದೆಯೋ ? ಆದುದರಿಂದ ಈ ಸಭೆಗೆ ಒಂದು ಪಟ್ಟಿ ಕೊಡಿ, ಆಗ ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು.

ಶ್ರೀ ಎಸ್. ಬಂಗಾರಪ್ಪ.--ಉಪ ಕುಲಪತಿಗಳೇ ಹೊಡೆಸಿದರು ಎಂದು ಸ್ಪಷ್ಟವಾಗಿ ಬಂದುಬಿಡಲಿ.

ಶ್ರೀ ಹೆಚ್. ಡಿ. ದೇವೇಗೌಡ.--ಬಂಗಾರಪ್ಪನವರೇ ಜನರಲ್ ಹಾಸ್ಟಲ್ ಮುಂದೆ ನಿಲ್ಲಿಸಿಕೊಂಡು ಹೊಡೆಸಿದ್ದಾರೆಂದು ಹಿಂದೆ ಹೇಳಲಿಲ್ಲವೇ ?

ಶ್ರೀ ಎಸ್. ಬಂಗಾರಪ್ಪ.--ವಿಷಯ ಬಂದಾಗ ಹೊರಗಡೆ ಬರಬೇಕು.

ಶ್ರೀ ಕಾಗೋಡು ತಿಮ್ಮಪ್ಪ.--ಅಪಾದನೆ ಪಟ್ಟಿ ಇದೆ. ಯಾರೂ ಮುಚ್ಚಿಟ್ಟುಕೊಳ್ಳಬೇಕಾದ ಪ್ರಸಂಗ ಇಲ್ಲ. ಎಲ್ಲೆಲ್ಲಿ ಏನೇನು ಘಟನೆಗಳು ನಡೆದಿವೆ ಅಂತ ಹೇಳುತ್ತೇನೆ. ನಾನು ಒಂದು ಅಭಿಪ್ರಾಯಕ್ಕೆ ಬರಬಹುದು ಪರ ಮತ್ತು ವಿರೋಧ ಅಪಾದನೆಗಳು ಬಂದಿವೆ. ಯಾರು ಹೊಣೆಗಾರರು ಎಂದು ಇತ್ಯರ್ಥ ಮಾಡಿಕೊಳ್ಳದೇ ಹೋದರೆ ಸಾಮಾನ್ಯ ಜನರ ಎದುರಿನಲ್ಲಿ ಅವರ ಕೀರ್ತಿಗೆ ಕಳಂಕ ಬರುವುದರಿಂದ ಪ್ರಥಮವಾಗಿ ಈ ಅನುಮಾನವನ್ನು ಬಗೆಹರಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.--ಸತ್ಯ ಏನಿದೆ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ. ವಿರೋಧ ಪಕ್ಷದ ನಾಯಕರು ಹೇಳಿದಂತಹ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಅದರ ಸತ್ಯವನ್ನು ಪರಿಶೀಲನೆ ಮಾಡುತ್ತೇವೆ. ಈ ಎರಡು ದಿವಸಗಳಿಂದ ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಏನು ಚರ್ಚೆ ನಡೆದಿದೆಯೋ ಅಲ್ಲಿ ಮಾನ್ಯ ಸದಸ್ಯರು ಮಾಡಿರತಕ್ಕ ಅನೇಕ ಉತ್ತಮವಾದಂತ ಸಲಹೆಗಳನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.--ಮೂಲಭೂತ ಬದಲಾವಣೆಗಳ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.--೧೯೭೦ರಲ್ಲಿ ಪಾಲಿಸಿ ರೆಸಲ್ಯೂಷನ್ ಏನು ಮಾಡಿದ್ದಾರೆ, ಅದು ಮತ್ತು ಇನ್ನೂ ಕೆಲವು ವರದಿಗಳು ಮತ್ತು ಕೇಂದ್ರ ಸರ್ಕಾರ ಮತ್ತು ವಿಶ್ವವಿದ್ಯಾನಿಲಯ ಅನುದಾನ ಆಯೋಗದವರು ತೆಗೆದುಕೊಂಡ ತೀರ್ಮಾನವನ್ನು ಎಲ್ಲವನ್ನೂ ಕೂಡ ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ವಿದ್ಯಾಭ್ಯಾಸ ಸ್ಟೇಟ್‌ಗೆ ಸಂಬಂಧಪಟ್ಟ ಸಬ್ಜೆಕ್ಟ್, ಕನಕರೆಂಟ್ ಲಿಸ್ಟ್‌ನಲ್ಲಿ ಬರತಕ್ಕದ್ದು ಅಲ್ಲ. ಆದ್ದರಿಂದ ಇಲ್ಲಿ ಒಳ್ಳೆಯ ರೀತಿಯ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅವರಿಗೂ ತಮ್ಮ ಮುಖೇನ ಅಭಿನಂದನೆಗಳನ್ನು ಸಮರ್ಪಿಸುತ್ತಾ ಈ ಬೇಡಿಕೆಗಳಿಗೆ ತಮ್ಮ ಸಮ್ಮತಿಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ:--ಈಗ ಪಟ್ಟಣದ ಪ್ರದೇಶದಲ್ಲಿ ಸಾಕಾದಷ್ಟು ವಿದ್ಯಾಭ್ಯಾಸ ಇದೆ ಎನ್ನುವ ಬಗ್ಗೆ ಹೆಚ್ಚಿಗೆ ಎಲ್ಲಾ ವಿಷಯವನ್ನೂ ಹೇಳಿದ್ದೀರಿ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಸಾಕಾದಷ್ಟು ವಿದ್ಯಾಭ್ಯಾಸ ಇಲ್ಲ ಎಂದು ತಾವು ಹೇಳುತ್ತೀರಾ? ಈಗ ಉದಾಹರಣೆಗೆ ಹಳ್ಳಿಗಳಲ್ಲಿ ಹೈಸ್ಕೂಲುಗಳನ್ನು ಅಲ್ಲಿಯ ಮಕ್ಕಳ ಅನುಕೂಲತೆಗಾಗಿ ತೆರೆದರೆ ೫ ವರ್ಷ ಗ್ರಾಂಟ್ ಕೊಡುವುದಿಲ್ಲ ಎಂದು ಒಂದು ಆದೇಶ ತಂದಿದ್ದೀರಿ: ಅದರಲ್ಲಿ ಹೆಣ್ಣುಮಕ್ಕಳ ಹೈಸ್ಕೂಲ್ ತೆಗೆದರೂ ಕೂಡ ಗ್ರಾಂಟ್ ಕೊಡುವುದಿಲ್ಲ ಎಂದು ಇದ್ದುದನ್ನು ವಾಪಸ್ಸು ತೆಗೆದುಕೊಂಡಿದ್ದೀರಿ ಎಂದು ನಾನು ಕೇಳಿದ್ದೇನೆ. ವಿದ್ಯಾಭ್ಯಾಸದ ಬಗ್ಗೆ ತಾವು ಬಡ ಬಗ್ಗರ ಬಗ್ಗೆ ಇಷ್ಟೊಂದು ಅನುಕಂಪ ತೋರಿಸಿ ಮಾತನಾಡಿದ್ದೀರಿ. ಆದುದರಿಂದ ಗ್ರಾಮಾಂತರ ಬಡಜನತೆಯ ಮಕ್ಕಳಿಗೆ ಅವರು ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಸರ್ಕಾರದ ಪರವಾಗಿ ಏನು ಆಶ್ವಾಸನೆ ಕೊಡುತ್ತೀರಿ? ಅವರ ವಿದ್ಯಾಭ್ಯಾಸ ನಡೆಯುವುದು ಹೇಗೆ? ಅವರು ವಿದ್ಯಾಭ್ಯಾಸದ ತೆರಿಗೆ ಕೊಟ್ಟಿಲವೇ? ದುಡಿದು ಬೆವರು ಸುರಿಸಿ ದುಡ್ಡು ಕೊಟ್ಟಿರುವುದರಿಂದ ಈ ಸರ್ಕಾರ ನಡೆಯುತ್ತಾ ಇರುವುದು. ಅವರಿಗೆ ಈ ವಿದ್ಯಾಭ್ಯಾಸದಲ್ಲಿ ಈ ರೀತಿ ಅನ್ಯಾಯ ತೋರಿಸಿದರೆ ಹೇಗೆ? ಇದರ ಬಗ್ಗೆ ನಿಮ್ಮ ನಿಲವು ಏನು ಮತ್ತು ಸರ್ಕಾರದ ನಿಲವು ಏನು ಎನ್ನುವುದನ್ನು ತಿಳಿಸುತ್ತೀರಾ?

ಎರಡನೆಯದಾಗಿ ಶ್ರೀ ಮಾನ್ ಹೆಚ್. ಡಿ. ದೇವೇಗೌಡರು ಮಾತನಾಡುತ್ತಾ ೫ನೇ ಪಂಚವಾರ್ಷಿಕ ಯೋಜನೆ ಕೊನೆಯೊಳಗೆ ೧೫ ಲಕ್ಷ ಜನ ಗ್ರಾಜುಯೇಟ್ಸ್ ಬರುತ್ತಾರೆ. ಆವಾಗ ನಿರುದ್ಯೋಗ ಸಮಸ್ಯೆ ಬಹಳವಾಗುತ್ತದೆ ಆದುದರಿಂದ ಇಲ್ಲಿ ಮೂಲಭೂತವಾದ ಬದಲಾವಣೆ ಆಗಬೇಕು ಎಂದು ಹೇಳಿದರು. ಹಿಂದೆ ಒಂದು ಸಾರಿ ತಾವು ಗುಮಾಸ್ತರನ್ನು ತರಬೇತು ಮಾಡಬೇಕು ಎಂದು ಒಂದ

ಕ್ರಮವನ್ನು ಹಾಕಿಕೊಂಡಿರಿ. ಈಗ ಆ ಕ್ರಮವನ್ನೇ ಮುಂದುವರೆಸುತ್ತಾ ಇದ್ದರೆ ಅದು ದೇಶಕ್ಕೆ ಹಾನಿಯಾಗುತ್ತದೆ ಮತ್ತು ಕೇಡಾಗುತ್ತದೆ. ಅದುದರಿಂದ ಈ ಬಗ್ಗೆ ಒಂದು ಮೂಲಭೂತವಾದ ಸಲಹೆಗಳನ್ನು ದೇವೇಗೌಡರು ಕೊಟ್ಟರು. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಮೂರನೆಯದಾಗಿ ಏಳನೇ ಸ್ಟ್ಯಾಂಡರ್ಡ್ ಪರೀಕ್ಷೆಯನ್ನು ಇಡುವುದು ತೆಗೆಯುವುದು ಆಗಲಿ, ಮತ್ತು ಪಿ.ಯು.ಸಿ. ಯನ್ನು ಒಂದು ವರ್ಷ ಇದ್ದುದನ್ನು ಎರಡು ವರ್ಷ ಮಾಡಿದಿರಿ ಅದನ್ನು ಮತ್ತೆ ಒಂದು ವರ್ಷಕ್ಕೆ ಇಳಿಸುವುದಾಗಲಿ ಮಾಡಿದರೆ ಇದು ಯಾವ ರೀಫಾರಂ ಆಗುತ್ತದೆ. ಇದರ ಬಗ್ಗೆ ಏನು ಕ್ರಮ ತರುತ್ತೀರಿ ಎನ್ನುವುದನ್ನು ತಿಳಿಸುತ್ತೀರಾ?

ನಾಲ್ಕನೆಯದಾಗಿ ವಯಸ್ಕರ ಶಿಕ್ಷಣ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಅನಕ್ಷರತೆ ಇರುವವರನ್ನು ಅಕ್ಷರಸ್ಥರನ್ನಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಇದರಲ್ಲಿ ಆಗತಕ್ಕಂಥ ಅನ್ಯಾಯಗಳು ಮತ್ತು ಅವ್ಯವಹಾರಗಳನ್ನು ನೋಡಿದರೆ ಅದನ್ನು ಸಹಿಸಲಿಕ್ಕೆ ಸಾಧ್ಯವಿಲ್ಲ.

ಇದರಲ್ಲಿ ಲಕ್ಷಾಂತರ, ಕೋಟ್ಯಾಂತರ ರೂಪಾಯಗಳ ಅವ್ಯವಹಾರ, ಅನ್ಯಾಯಗಳು ನಡೆಯುತ್ತಾ ಇದೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತೀರಾ?

ಐದನೆಯದಾಗಿ ಕೆಲವು ಸದಸ್ಯರು ಹೇಳಿದ ಕಾಲೇಜಿನಲ್ಲಿ ಕೋಎಜುಕೇಷನ್ ಇದೆಯಲ್ಲಾ ಇದರಿಂದ ಬಹಳ ಅನಾಹುತವಾಗುತ್ತದೆ ನಮ್ಮ ಸಂಸ್ಕೃತಿ ಏನು ಇದೆಯೋ ಇದರ ತದ್ವಿರುದ್ಧವಾಗಿ ಆಗುತ್ತಾ ಇದೆ, ಇದನ್ನು ಬದಲಾವಣೆ ಮಾಡಬೇಕು ಎಂದು. ಇದಕ್ಕೆ ಸರ್ಕಾರದ ನಿಲುವು ಏನು?

ಶ್ರೀ ಕೋಣಂದೂರು ಲಿಂಗಪ್ಪ:—ಸರ್ಕಾರದಲ್ಲಿ ನನ್ನ ಪ್ರಮುಖ್ಯವಾದ ಕಳಕಳಿ ಏನೆಂದರೆ ಎಲ್ಲಿ ಕನ್ನಡವನ್ನು ಕಲಿಸುವುದಿಲ್ಲವೋ ಅಂದರೆ ಈಗ ಕಾನ್‌ವೆಂಟ್‌ನಲ್ಲಿ ಕನ್ನಡವನ್ನು ಕಲಿಸುವುದಿಲ್ಲ ಅಂಥಾ ಸಂಸ್ಥೆಗಳಿಗೆ ಗ್ರಾಂಟ್ ಕೊಡುವುದನ್ನು ನಿಲ್ಲಿಸುತೀರಾ? ಮತ್ತು ಈ ಕನ್ನಡವನ್ನು ಬೆಳೆಸುವುದಕ್ಕೆ ಏನು ಕಾರ್ಯಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಸ್. ಬಂಗಾರಪ್ಪ:—ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆದಂಥ ವ್ಯವಹಾರದ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ ಎಂದು ತಿಳಿಸಿದಿರಿ. ಇದನ್ನು ಎಷ್ಟು ಶೀಘ್ರವಾಗಿ ಪರಿಶೀಲನೆ ಮಾಡಿ, ಎಷ್ಟು ಕಾಲದಲ್ಲಿ ಈ ಸದನಕ್ಕೆ ತಿಳಿಸುವುದಕ್ಕೆ ಆಗುತ್ತದೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:—ಮಾನ್ಯ ಹನುಮೇಗೌಡರು ವಯಸ್ಕರ ಶಿಕ್ಷಣ ಸಮಿತಿಯ ವಿಚಾರದ ಬಗ್ಗೆ ಹೆಚ್ಚು ಹಣ ಅವ್ಯವಹಾರದಲ್ಲಿ ವ್ಯಯವಾಗುತ್ತಿದೆ ಎಂದು ಹೇಳಿದರು.

ಶ್ರೀ ಕೆ ಹೆಚ್. ಹನುಮೇಗೌಡ:—ನಾನು ಆ ಬಗ್ಗೆ ಕಣ್ಣಾರ ಕಂಡಿರುವುದನ್ನು ಹೇಳಿದ್ದೇನೆ. ಬೇಕಾದರೆ ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:—ಮುಖ್ಯಮಂತ್ರಿಗಳ ಅನುಯಾಯಿಗಳೇ ಆಗಲಿ ಯಾರೇ ಆಗಲಿ ತಪ್ಪು ಮಾಡಿದ್ದರೆ ತಪ್ಪು. ಆದರ ವ್ಯವಹಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ಅದರ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೋಣಂದೂರು ಲಿಂಗಪ್ಪನವರು ಇಂಗ್ಲಿಷ್ ಶಾಲೆಗಳಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವೇ ನಡೆಯುತ್ತಿದೆ, ಕನ್ನಡ ಕಲಿಸುತ್ತಿಲ್ಲ ಎಂದು ಹೇಳಿದರು. ಹಾಗಾದರೆ ಕನ್ನಡ ದೇಶದಲ್ಲಿ ಇಂಗ್ಲಿಷ್ ಶಾಲೆಗಳು ಇರಬಾರದೇ? ಯಾರಾದರೂ ಆಗಲಿ ಕನ್ನಡ ದೇಶದಲ್ಲಿರುವವರಿಗೆ ಕನ್ನಡವನ್ನು ಕಲಿಸಬೇಕು ಆದರೆ ಅವರ ತಂದೆತಾಯಿಗಳೇ ಒಪ್ಪದೇ ಇಂಗ್ಲಿಷ್‌ನ್ನೇ ಕಲಿಸಬೇಕು ಎಂದು ಆ ಶಾಲೆಗೆ ಕಳುಹಿಸಿದರೆ ಅದಕ್ಕೆ ಏನು ಮಾಡುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಉಳ್ಳಂಥವರಾದ ಶ್ರೀ ಕೋಣಂದೂರು ಲಿಂಗಪ್ಪನವರಿಗೆ ಈ ಮಾತನ್ನು ಹೇಳಿದರೆ ಅವರು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕೊಎಜುಕೇಷನ್ ಪೂರ್ತಿ ಇಲ್ಲದೆ ಇರುವಂತೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ;—ಬಾಲಕರ ತಂದೆತಾಯಿಗಳೇ ಕನ್ನಡವನ್ನು ಕಲಿಸುವುದಕ್ಕೆ ಒಪ್ಪುವುದಿಲ್ಲ ಎಂದರೆ ಕನ್ನಡವನ್ನು ಬಿಟ್ಟು ಬಿಟ್ಟು ಇಂಗ್ಲಿಷನ್ನೇ ಕಲಿಸಬೇಕು ಎನ್ನುವುದು ಸರ್ಕಾರದ ನೀತಿಯೇನು? ಹಾಗಿದ್ದರೆ ನಿಮ್ಮ ಸೋಷಿಯಲಿಸಂನ್ನು ಯಾರು ಒಪ್ಪುವುದಿಲ್ಲ

SRI MALLIKARJUNASWAMY:—Socialism has been compared to a hat which has lost its shape. ಈ ದೇಶದಲ್ಲಿ ಕೋಣಂದೂರು ಲಿಂಗಪ್ಪನವರದು ಒಂದುತರಹ ಸೋಷಲಿಸಂ ಶ್ರೀಮಾನ್ ಬಂಗಾರಪ್ಪನವರದ್ದು ಒಂದು ತರಹ ಸೋಷಲಿಸಂ, ಹೀಗೆ ಒಬ್ಬೊಬ್ಬರದ್ದು ಒಂದೊಂದು ತರಹ ಸೋಶಲಿಸಂ ಇದೆ ಈ ರೀತಿ ೭–೮ ತರಹ ಸೋಷಲಿಸಂ ಇದೆ ಆದುದರಿಂದ ನಾನು ಮತ್ತೊಮ್ಮೆ ಈ ಸಭೆಗೆ ತಿಳಿಯಬಯಸುತ್ತೇನೆ ಯಾವ ಯಾವ ಮಾನ್ಯ ಸದಸ್ಯರು ಏನೇನ ಹೇಳಿದರೋ ಅವೆಲ್ಲಕ್ಕೂ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆದುದರಿಂದ ಈ ಒಂದು ಬೇಡಿಕೆಗೆ ತಮ್ಮ ಒಪ್ಪಿಗೆಯನ್ನು ಕೊಡಬೇಕು ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಎಸ್ ಬಂಗಾರಪ್ಪ:—ನಾವು ಹೇಳಿದ ಮೈಸೂರು ವಿಶ್ವವಿದ್ಯಾನಿಲಯದ ಈ ಒಂದು ಅಪಾದನೆ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ಹೇಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:—ಮೈಸೂರು ವಿಶ್ವವಿದ್ಯಾನಿಲಯದ ಬಗ್ಗೆ ಸಾಕಾದಷ್ಟು ಹೇಳಿದ್ದೇನೆ. ಮೈಸೂರು ವಿಶ್ವವಿದ್ಯಾನಿಲಯದ ಮೇಲೆ ಏನು ಒಂದು ಆಪಾದನೆಗಳು ತಾವು ತಂದಿದ್ದೀರೋ ಅದನ್ನು ಉಪಕುಲಪತಿಗಳ ಗಮನಕ್ಕೂ ಕೂಡ ಅವರು ತಂದಿದ್ದಾರೆ ಕಾನೂನು ಪ್ರಕಾರ ಅದರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಅಧಿಕಾರ ಕುಲಪತಿಗಳಿಗೇ ಇರತಕ್ಕದ್ದಾದ್ದರಿಂದ ಆ ವಿಷಯದಲ್ಲಿ ಸರ್ಕಾರ ಮಧ್ಯೆ ಪ್ರವೇಶ ಮಾಡತಕ್ಕಂಥಾದ್ದು ಸರಿಯಲ್ಲ. ಆದರೆ ಅಲ್ಲಿ ಏನು ನಡೆದಿದೆ ಎನ್ನುವ ಬಗ್ಗೆ ಗಂಭೀರವಾದ ಅಪಾದನೆಗಳನ್ನು ಏನು ಮಾಡಿದ್ದೀರೋ ಆ ಬಗ್ಗೆ ನಾವು ಎಚ್ಚರಿಕೆಯಿಂದ ಪರಿಶೀಲನೆ ಮಾಡುತ್ತೇವೆ ಮತ್ತು ಆ ವಿಷಯದ ಬಗ್ಗೆ ರಾಜ್ಯಪಾಲರ ಗಮನಕ್ಕೂ ಕೂಡ ಬಂದಿದೆ ಮತ್ತು ಮಾನ್ಯ ದೇವೇಗೌಡರು ಹೇಳಿದ ಎಲ್ಲ ವಿಷಯಗಳನ್ನೂ ಕೂಡ ಗಮನದಲ್ಲಿಟ್ಟುಕೊಂಡು ಎಚ್ಚರಿಕೆಯಿಂದ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER;—I will now put the motion to the vote of the House. The Qustion is;

"That the respective sums not exceeding the amounts mentioned in the list of Demands be granted to Government to defray the charges which will come in course of paymen during the finaincial year for the period ending with 31st day of March, 1975 respect of Demand Nos. 18,25 and 24.

The motion was adopted and the demands voted

As ordered by the chair the motion for Demands for grant adopted by the Hon. are reproduced below:

Demand No. 18 —Stationery and Printing

"That a sum not exceeding Rs. 2,03,00,000 inclusive of the sum granted 'on account' be granted to the Government to defray the charges which will come in course of payment during the finacial year ending 31st day of March 1975 in respect of "Stationery and Printing."

Demand No. 24—Primary and Secondary Education

"That a sum not exceeding Rs. 61,23, 96,000 inclusive of the sum grant 'on account' be granted to the Government to defray the

charges wich will come in course of Payment during the finacial year ending 31st day of March 1975 in respect of • Primary and Secondary Education.

Demand No. 25—Education, Scientific Research and Art and Science.

Culture

"That a sum not exceeding Rs. 17,27,42,000 inclusive of the sum granted 'on account. be granted to the Government to defray the charges which will come in course of payment during the finacial year ending 31st day of March 1975 in respect of "Eduction Scientific Reseach and Art and Culture"

Business of the House.

ಅಧ್ಯಕ್ಷರು:—ಇನ್ನು ಈ ವಿಷಯದಲ್ಲಿ ಒಂದು ವಿಚಾರ ಹೇಳುತ್ತೇನೆ. ಈ ಎಜುಕೇಷನ್ ಡಿಮ್ಯಾಂಡ್ ಬಗ್ಗೆ ವಿರೋಧಪಕ್ಷದ ಕಡೆಯವರು ೩. ಗಂಟೆ ೪೯ ನಿಮಿಷ ಮಾತನಾಡಿದ್ದಾರೆ. ಆಡಳಿತ ಪಕ್ಷದವರು ೨ ಗಂಟೆ ೨೪ ನಿಮಿಷ ಮಾತನಾಡಿದ್ದಾರೆ. ನಾಳೆ ದಿವಸ ಪಬ್ಲಿಕ್ ವರ್ಕ್ಸ್ ಡಿಮ್ಯಾಂಡ್ ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು. ಆ ಬಗ್ಗೆ ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಗಳು ಅವರಿಗೆ ಮೈ ಚೆನ್ನಾಗಿಲ್ಲ ಎಂದು ಹೇಳಿ ಅದನ್ನು ಇನ್ನೊಂದು ದಿವಸ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಆದುದರಿಂದ ಅದನ್ನು ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ ನಾಳೆ ದಿವಸ ಅಂದರೆ ೧೦ನೇ ತಾರೀಖು ಫಾರೆಸ್ಟ್, ಹಾರ್ಟಿಕಲಚರ್, ಫಿಷರೀರ್ ಡಿಮ್ಯಾಂಡ್‌ನ್ನು ತೆಗೆದುಕೊಳ್ಳುತೇವೆ ಮತ್ತು ೧೧ನೇ ತಾರೀಖು ಕಮ್ಯೂನಿಟಿ ಡೆವಲಪ್‌ಮೆಂಟ್ ಅಂಡ್ ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡ್ ತೆಗೆದುಕೊಳ್ಳುತ್ತೇವೆ.

The House will now stand adjourned to meet at 1-00 P M. tomorrow.

The House adjourned at twenty minutes past Six of the clock to meet again at One of the Clock, on 10th April 1974.

WD 452—GPB -550—9-6-1975